ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 2 ಶುಕ್ರವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 285 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಕನ್ನಡ ನಾಮಫಲಕಗಳ ಕುರಿತ ಸುಗ್ರೀವಾಜ್ಞೆಗೆ ಸಹಿ ಹಾಕದ ರಾಜ್ಯಪಾಲರು

ಮೈಸೂರು ಕನ್ನಡ ವೇದಿಕೆಯಿಂದ ಪ್ರತಿಭಟನೆ



ಮೈಸೂರು ಕನ್ನಡ ವೇದಿಕೆ ವತಿಯಿಂದ ನಗರದ ಡಾ.ರಾಜ್‌ಕುಮಾರ್ ಉದ್ಯಾನವನದ ಮುಂಭಾಗ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಫೆ.1(ಜಿಎ)–ಕನ್ನಡ ನಾಮ ಫಲಕಗಳ ಕುರಿತ ಸುಗ್ರೀವಾಜ್ಞೆಗೆ ರಾಜ್ಯ ಪಾಲರು ಅಂಕಿತ ಹಾಕದಿರುವುದನ್ನು ವಿರೋಧಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ನಗರದ ಡಾ.ರಾಜ್‌ಕುಮಾರ್ ಉದ್ಯಾನವನದ ಮುಂಭಾಗ ಗುರುವಾರ ಪ್ರತಿಭಟನೆ ನಡೆಸಲಾಯಿತು.

ರಾಜ್ಯದ ಎಲ್ಲಾ ಅಂಗಡಿ–ಮುಂಗಟ್ಟುಗಳು ಮತ್ತು ಜಾಹೀರಾತು ಫಲಕಗಳು ಶೇ.60 ರಷ್ಟು ಕನ್ನಡದಲ್ಲಿ ಇರಬೇಕೆಂದು ಸರ್ಕಾರ ಆದೇಶ ಹೊರಡಿಸಿತ್ತು. ಆದರೆ ಕೆಲವರು ನ್ಯಾಯಾಲಯದ ಮೆಟ್ಟಿಲನ್ನೇರಿದ್ದರಿಂದ ವಿಧಾನಸಭೆಯ ಕಲಾಪದಲ್ಲಿ ಸುಗ್ರೀವಾಜ್ಞೆ ಹೊರಡಿಸಿ ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಿತು. ರಾಜ್ಯಪಾಲರು ವಿಧಾನಮಂಡಲದಲ್ಲಿ ಬಗೆಹರಿಸಿಕೊಳ್ಳಿ ಎಂದು ಸುಗ್ರೀವಾಜ್ಞೆಗೆ ಅಂಕಿತ ಹಾಕದೆ ವಾಪಸ್ ಕಳುಹಿಸಿದ್ದಾರೆ. ಈಗಾಗಲೇ ಎರಡು ಬಾರಿ ಗಡುವು ನೀಡಿದರೂ ನಾಮಫಲಕಗಳು ಯಥಾಸ್ಥಿತಿಯಲ್ಲಿವೆ. ವಿಧಾನಮಂಡಲದ ಕಲಾಪ ತಡವಾಗಿದ್ದರಿಂದ ರಾಜ್ಯಪಾಲರಿಗೆ ಆದೇಶ ಪ್ರತಿ ಕಳಿಸಿದರೂ ರಾಜ್ಯಪಾಲರು ಇದಕ್ಕೂ ನಮಗೂ ಸಂಬಂಧವಿಲ್ಲದಂತೆ ವರ್ತಿಸುತ್ತಿದ್ದಾರೆ ಎಂದು ಕಿಡಿಕಾರಿದರು. ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಗುರುಬಸಪ್ಪ, ಗೋಪಿ, ಬೋಗಾದಿ ಸಿದ್ದೇಗೌಡ, ಪ್ಯಾಲೇಸ್ ಬಾಬು, ಎಲ್ಐಸಿ ಸಿದ್ದಪ್ಪ, ಸ್ವಾಮಿಗೌಡ, ಬೀಡಾ ಬಾಬು, ಸ್ವಾಮಿ ಗೈಡ್, ಮಾಲಿನಿ, ಭವಾನಿ, ಪುಷ್ಪ ಮದನ್, ಮಹದೇವಸ್ವಾಮಿ, ಹರೀಶ್, ಅರವಿಂದ, ಮಾದಪ್ಪ ಭಾಗವಹಿಸಿದ್ದರು.

> ❝ ರಾಜ್ಯಪಾಲರು ತಮ್ಮ ಕರ್ತವ್ಯ ಮರೆತಿದ್ದಾರೆ. ಕೆಲವೊಂದು ವಿಷಯಗಳನ್ನು ವಿಧಾನ ಮಂಡಲದಲ್ಲಿ ಚರ್ಚಿಸಲು ತಡವಾದಾಗ ಈ ರೀತಿಯ ಕ್ರಮ ಕೈಗೊಳ್ಳುತ್ತಾರೆ. ಈ ವಿಚಾರದಲ್ಲಿ ಎಲ್ಲಾ ಪಕ್ಷಗಳ ಬೆಂಬಲ ಇರುವುದರಿಂದ ರಾಜ್ಯಪಾಲರು ಸಹಿ ಮಾಡಬಹುದಿತ್ತು. ಕನ್ನಡ ನಾಮ ಫಲಕ ಅಳವಡಿಕೆ ಗೊಂದಲದ ವಿಷಯವಲ್ಲ. ಇದು ನಮ್ಮ ನಾಡು–ನುಡಿ, ಭಾಷೆಯ ವಿಷಯ.
>
> –ಪ್ರತಿಭಟನಾಕಾರರು.

ಅನುದಾನಿತ ಪ್ರೌಢಶಾಲೆ ಮಾನ್ಯತೆ ರದ್ದಿಗೆ ಆಗ್ರಹಿಸಿ ದಸಂಸ ಪ್ರತಿಭಟನೆ



ಪ್ರೌಢಶಾಲೆಯ ಮಾನ್ಯತೆ ರದ್ದತಿಗೆ ಆಗ್ರಹಿಸಿ ಮೈಸೂರಿನ ಡಿಡಿಪಿಐ ಕಚೇರಿ ಆವರಣದಲ್ಲಿ ದಲಿತ ಸಂಘರ್ಷ ಸಮಿತಿ ಗುರುವಾರ ಪ್ರತಿಭಟನೆ ನಡೆಸಿತು.

ಮೈಸೂರು,ಫೆ1(ಜಿಎ)–ನಂಜನಗೂಡಿನ ಶ್ರೀ ನಂಜುಂಡೇಶ್ವರ ವಿದ್ಯಾವರ್ಧಕ ಅನುದಾನಿತ ಪ್ರೌಢಶಾಲೆಯ ಮಾನ್ಯತೆ ರದ್ದುಪಡಿಸಿ, ಅನುದಾನ ಹಿಂಪಡೆಯುವಂತೆ ಆಗ್ರಹಿಸಿ ಮೈಸೂರಿನ ಡಿಡಿಪಿಐ ಕಚೇರಿ ಆವರಣದಲ್ಲಿ ದಲಿತ ಸಂಘರ್ಷ ಸಮಿತಿ ಗುರುವಾರ ಪ್ರತಿಭಟನೆ ನಡೆಸಿತು.

ಶ್ರೀ ನಂಜುಂಡೇಶ್ವರ ವಿದ್ಯಾವರ್ಧಕ ಶಾಲೆಯು ಕಳೆದ ಐದು ವರ್ಷಗಳಿಂದ ಅನಧಿಕೃತವಾಗಿ ನಡೆಯುತ್ತಿದ್ದು, ಆಡಳಿತ ಮಂಡಳಿಯವರು ಸ್ವಂತ ಜಾಗ, ಆಟದ ಮೈದಾನ, ಶೌಚಾಲಯ ಸೇರಿದಂತೆ ಯಾವುದೇ ರೀತಿ ಸೌಕರ್ಯಗಳಿಲ್ಲದೆ, ಮಾನ್ಯತೆ ನವೀಕರಿಸಿಕೊಳ್ಳದೆ ನಿಯಮ ಬಾಹಿರವಾಗಿ, ಅಕ್ರಮವಾಗಿ ಅನುದಾನ ಪಡೆದು ವಾಣಿಜ್ಯ ಕಟ್ಟಡದಲ್ಲಿ ನಡೆಯುತ್ತಿರುವ ಶಾಲೆಯ ಮಾನ್ಯತೆ ರದ್ದುಪಡಿಸಿ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಶಿಕ್ಷಕಿಯರು ಮುಖ್ಯ ಶಿಕ್ಷಕರ ಹುದ್ದೆಯಿಂದ ವಂಚಿಸಿದ್ದಾರೆ. ಆದರಿಂದ ಶಾಲಾ ಆಡಳಿತ ಮಂಡಳಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಶಿಕ್ಷಕ, ಶಿಕ್ಷಕಿಯರ ವೇತನಕ್ಕೆ ಶಾಲಾಡಳಿತ ಮಂಡಳಿಯವರನ್ನು ನೇರ ಹೊಣೆ ಮಾಡಬೇಕು. ಜೊತೆಗೆ ಶಾಲಾ ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಚಾಲಕ ಚೋರನಹಳ್ಳಿ ಶಿವಣ್ಣ, ಕೆ.ವಿ.ದೇವೇಂದ್ರ, ಕಿರಂಗೂರು ಸ್ವಾಮಿ, ಯಡದೊರೆ ಮಹದೇವಯ್ಯ, ಹಾರೋಹಳ್ಳಿ ನಟರಾಜ್, ಶಿವಮೂರ್ತಿ ಶಂಕರಪುರ, ಸಣ್ಣಯ್ಯ ಲಕ್ಕೂರು ಪಾಲ್ಗೊಂಡಿದರು.



ದಕ್ಷಿಣ ವಲಯ ದಿಂಡಿಗಲ್‌ನ ಅಸ್ಮಿತಾ ಖೇಲೋ ಇಂಡಿಯಾ ಮಹಿಳಾ ಯೋಗಾಸನದ 18 ವರ್ಷ ಮೇಲ್ಪಟ್ಟವರ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದ ಮೈಸೂರು ವಿವಿ ಯೋಗ ವಿಜ್ಞಾನ ಕಾರ್ಯಕ್ರಮದ ವಿದ್ಯಾರ್ಥಿನಿ ಕು.ಭಾರತಿ ಹಾಗೂ ದಕ್ಷಿಣ ವಲಯ ಅಂತರ ವಿವಿ ಮಹಿಳಾ ಖೋಖೋ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಕು. ಎಸ್.ವಿನುತಾ ಅವರನ್ನು ಸಂಯೋಜಕರಾದ ಪ್ರೊ.ಎಸ್.ಮದಿಅಳಗನ್, ಉಪನ್ಯಾಸಕರಾದ ದರ್ಶನ್, ಕೃಷ್ಣ ಅಭಿನಂದಿಸಿದರು.

ಉದಯಗಿರಿ ಠಾಣಾ ವ್ಯಾಪ್ತಿಯಲ್ಲಿ ಮೂವರು ನಾಪತ್ತೆ

ಮೈಸೂರು, ಫೆ. 1– ಮೈಸೂರಿನ ಉದಯಗಿರಿ ಠಾಣಾ ವ್ಯಾಪ್ತಿಯಲ್ಲಿ ಪ್ರತ್ಯೇಕ ಪ್ರಕರಣದಲ್ಲಿ ಮೂವರು ನಾಪತ್ತೆಯಾಗಿರುವ ಸಂಬಂಧ ದೂರು ದಾಖಲಾಗಿವೆ.



ತಬ್ರೇಜ್ ಅಹಮದ್

ಸೈಯದ್ ತಬ್ರೇಜ್ ಅಹಮದ್ (42) ನ.20, 2023ರಂದು ರಾತ್ರಿ 8.30ರ ಸಮಯದಲ್ಲಿ ಮನೆಯಿಂದ ಹೊರ ಹೋದವರು ವಾಪಸ್ಸು ಮನೆಗೆ ಬಂದಿರುವುದಿಲ್ಲ ಎಂದು ಆತನ ಪತ್ನಿ ದೂರು ದಾಖಲಿಸಿದ್ದಾರೆ.



ವಸೀಂ

ಉದಯಗಿರಿ ಠಾಣಾ ವ್ಯಾಪ್ತಿಯ ವಸೀಂ (25) ಜನವರಿ 2, 2024 ರಂದು ರಾತ್ರಿ 11 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದವರು ವಾಪಸ್ಸು ಮನೆಗೆ ಬಂದಿರುವುದಿಲ್ಲ ಎಂದು ದೂರು ದಾಖಲಿಸಿದ್ದಾರೆ.



ಆರ್.ತನುಜಾ

ಆರ್.ತನುಜಾ (21) ಸೆಪ್ಟೆಂಬರ್ 12, 2023 ರಂದು ಸುಮಾರು 11.30 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದವರು ವಾಪಸ್ಸು ಮನೆಗೆ ಬಂದಿರುವುದಿಲ್ಲ ಎಂದು ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಉದಯಗಿರಿ ಪೊಲೀಸ್ ಠಾಣೆಗೆ ಸಂಪರ್ಕಿಸಲು ಕೋರಲಾಗಿದೆ.

ನಿಧನ

ಎಂ.ಎಸ್. ಪ್ರಭಾಕರ್



ಮೈಸೂರು, ಫೆ.1–ಮೈಸೂರಿನ ಅಗ್ರಹಾರದ ತ್ಯಾಗರಾಜ ರಸ್ತೆಯಲ್ಲಿರುವ ಆರ್.ಆರ್. ಎಂಟರ್‌ಪ್ರೈಸಸ್ ಮಾಲೀಕ ಎಂ.ಎಸ್. ಪ್ರಭಾಕರ್ ಅವರು ಜನವರಿ 31ರಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೂವರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ (ಫೆ.1)ರಂದು ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭಾಷಾ ಅಭಿವ್ಯಕ್ತಿ, ಆಳವಾದ ಅಧ್ಯಯನ, ವಿಷಯಗಳ ಅವಲೋಕನದಿಂದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಜಯ

ಐಎಎಸ್, ಕೆಎಎಸ್ ಪರೀಕ್ಷಾರ್ಥಿಗಳಿಗೆ ಹುಣಸೂರು ಉಪವಿಭಾಗಾಧಿಕಾರಿ ಮಹಮದ್ ಹ್ಯಾರಿಸ್ ಸುಮೇತ ಕಿವಿಮಾತು



ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಿಂದ ಆಯೋಜಿಸಿದ್ದ ಐಎಎಸ್, ಕೆಎಎಸ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಹುಣಸೂರು ಉಪವಿಭಾಗಾಧಿಕಾರಿ ಮಹಮದ್ ಹ್ಯಾರಿಸ್ ಸುಮೇತ, ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಮೂರ್ತಿ, ಪರೀಕ್ಷಾಂಗ ಕುಲಸಚಿವ ಪ್ರವೀಣ್ ಭಾಗವಹಿಸಿದ್ದರು.



ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿದ್ದ ಪರೀಕ್ಷಾರ್ಥಿಗಳನ್ನು ಕಾಣಬಹುದು.

ಮೈಸೂರು, ಫೆ.1(ಆರ್‌ಕೆ)– ಉತ್ತಮ ಭಾಷಾ ಅಭಿವ್ಯಕ್ತಿ, ಆಳವಾದ ಅಧ್ಯಯನ ಹಾಗೂ ವಿಷಯಗಳ ಅವಲೋಕನ ಮಾಡಿದರೆ ಮಾತ್ರ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಜಯಗಳಿಸಬಹುದು ಎಂದು ಹುಣಸೂರು ಉಪವಿಭಾಗಾಧಿಕಾರಿ ಮಹಮದ್ ಹ್ಯಾರಿಸ್ ಸುಮೇತ ಇಂದಿಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಿಂದ ಆಯೋಜಿಸಿದ್ದ ಐಎಎಸ್, ಕೆಎಎಸ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪರೀಕ್ಷಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ಪಂಚ ಲಕ್ಷಣಗಳನ್ನು ಅಳವಡಿಸಿಕೊಂಡರೆ ಯಶಸ್ಸು ಸಾಧ್ಯ ಎಂದು ಸಲಹೆ ನೀಡಿದರು.

ಭಾಷಾ ಪ್ರೌಢಿಮೆ, ಶುದ್ಧ ಸಂವಹನ, ಬರವಣಿಗೆ ಕೌಶಲ್ಯ ಅಳವಡಿಸಿಕೊಂಡರೆ ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಯಶಸ್ಸು ಸಾಧ್ಯ. ಪ್ರತಿಯೊಬ್ಬರಿಗೂ ಅವರದ್ದೇ ಆದ ಪ್ರತಿಭೆ ಇರುತ್ತದೆ. ಅದನ್ನು ಅನಾವರಣ ಮಾಡುವ ರೀತಿ ಬೆಳೆಸಿಕೊಳ್ಳಬೇಕು ಎಂದು ಮಹಮದ್ ಹ್ಯಾರೀಸ್ ನುಡಿದರು.

ಯಾವುದೇ ಪರೀಕ್ಷೆಗೆ ತಯಾರಿ ನಡೆಸುವ ಮುನ್ನ ಅದರ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಬೇಕು. ಇಲ್ಲದಿದ್ದರೆ ಅಭಿಮನ್ಯು ಚಕ್ರವ್ಯೂಹ ಭೇದಿಸಿದಂತಾಗುತ್ತದೆಯಾದ್ದರಿಂದ ಅಧ್ಯಯನ, ಅವಲೋಕನ ಮಾಡಿದರೆ ಪರೀಕ್ಷೆಯನ್ನು ಸುಲಭವಾಗಿ ಎದುರಿಸಬಹುದು ಎಂದರು. ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕುಲಸಚಿವ ಪ್ರೊ.ಕೆ.ಎಲ್.ಎನ್. ಮೂರ್ತಿ, ಪರೀಕ್ಷಾಂಗ ಕುಲಸಚಿವ ಕೆ.ಬಿ.ಪ್ರವೀಣ್, ಡೀನ್ ರಮಾನಾಥನ್ ನಾಯ್ಡು ಮೃಗಾಲಯ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್‌ಕುಮಾರ್ ಭಾಗವಹಿಸಿ ಪರೀಕ್ಷಾರ್ಥಿಗಳಿಗೆ ಸಲಹೆ, ಮಾರ್ಗದರ್ಶನ ನೀಡಿದರು.

ಮೈಸೂರಲ್ಲಿ ಅಂತರ್ಜಾತಿ ಮದುವೆಯಾದವರ ಸಮಾವೇಶ

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾಹಿತಿ



ಮೈಸೂರಿನ ಸಿದ್ಧಾರ್ಥ ಹೋಟೆಲ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಜನಸ್ಪಂದನಾ ಟ್ರಸ್ಟ್ ಮುಖ್ಯಸ್ಥ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿದರು.

ಮೈಸೂರು,ಫೆ.1(ಬಿಎಲ್‌ಯು)– ಜಾತಿ ವ್ಯವಸ್ಥೆ ವಿರುದ್ಧ ಸಂದೇಶ ಸಾರುವ ನಿಟ್ಟಿನಲ್ಲಿ ಅಂತರಧರ್ಮ ಹಾಗೂ ಅಂತರ್ಜಾತಿ ಮದುವೆಯಾದವರ ಸಮಾವೇಶವನ್ನು ಮೈಸೂರಿನಲ್ಲಿ ಶೀಘ್ರವೇ ಆಯೋಜಿಸಲಾಗುವುದು ಎಂದು ಜನಸ್ಪಂದನಾ ಟ್ರಸ್ಟ್ ಮುಖ್ಯಸ್ಥರೂ ಆದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ತಿಳಿಸಿದರು.

ಮೈಸೂರಿನ ಸಿದ್ಧಾರ್ಥ ಹೋಟೆಲ್‌ನಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಜ್ಞಾನಾಭಿವೃದ್ಧಿ, ಗುಣಮಟ್ಟದ ಶಿಕ್ಷಣ, ಸಾಕ್ಷರತೆಯ ಪ್ರಮಾಣ ಹೆಚ್ಚಾಗುತ್ತಿದ್ದರೂ ಜಾತಿ ವ್ಯವಸ್ಥೆ ದೊಡ್ಡ ಪಿಡುಗಾಗಿ ಕಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಅಂತರಧರ್ಮ ಹಾಗೂ ಅಂತರ್ಜಾತಿ ಮದುವೆಯಾದವರ ಬೃಹತ್ ಸಮಾವೇಶ ಆಯೋಜಿಸಲಾಗುವುದು. ಮೊದಲು ಮೈಸೂರಿನಲ್ಲಿ ನಂತರ ರಾಜ್ಯದ ಇತರೆ ಜಿಲ್ಲೆಗಳಲ್ಲಿ, ತರುವಾಯ ರಾಜ್ಯ ಮಟ್ಟದಲ್ಲಿ ಬೃಹತ್ ಸಮಾವೇಶ ಆಯೋಜಿಸಲಾಗುವುದು ಎಂದು ಸೋಮಶೇಖರ್ ಹೇಳಿದರು.

ಕರ್ನಾಟಕದಲ್ಲಿ ಕಳೆದ ವರ್ಷ 20,365 ಅಂತರ್ಜಾತಿ ಹಾಗೂ ಅಂತರಧರ್ಮದವರು ಮದುವೆಯಾಗಿದ್ದಾರೆ. ಇದು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಿಕೊಂಡು ಮದುವೆ ಯಾದವರ ಸಂಖ್ಯೆ ಇದಾಗಿದ್ದು, ಇದನ್ನು ಹೊರತುಪಡಿಸಿ ಸಾವಿರಾರು ಮಂದಿ ಅಂತರ್ಜಾತಿ ಹಾಗೂ ಅಂತರ ಧರ್ಮೀಯರು ಮದುವೆಯಾಗಿದ್ದಾರೆ. ಈ ಸಂಖ್ಯೆ ಮತ್ತಷ್ಟು ಹೆಚ್ಚಾಗಬೇಕು. ಈ ಮೂಲಕ ಸಮಾಜದಲ್ಲಿ ಜಾತಿ ವ್ಯವಸ್ಥೆ ಮುಕ್ತವಾಗಬೇಕು ಎಂದರು.

ಅಂತರಧರ್ಮ ಹಾಗೂ ಅಂತರ್ಜಾತಿ ಮದುವೆಯಾದವರಿಗೆ ಧೈರ್ಯ ತುಂಬುವುದು ಹಾಗೂ ಮುಂದೆ ಮತ್ತಷ್ಟು ಇಂತಹ ಮದುವೆಯಾಗಲು ಉತ್ತೇಜನ ನೀಡುವ ನಿಟ್ಟಿನಲ್ಲಿ ಈ ಸಮಾವೇಶ ಆಯೋಜಿಸಲಾಗುವುದು. ಅಂತರ್ಜಾತಿ ಮದುವೆ ಆದವರಲ್ಲಿ ಇಡೀ ರಾಜ್ಯದಲ್ಲಿ ಬೆಂಗಳೂರು ಅಗ್ರಸ್ಥಾನದಲ್ಲಿದ್ದರೆ, ಯಾದಗಿರಿ ಕೊನೆ ಸ್ಥಾನದಲ್ಲಿದೆ. ಮೈಸೂರು ಮಧ್ಯ ಸ್ಥಾನದಲ್ಲಿದೆ ಎಂದು ಸೋಮಶೇಖರ್ ಹೇಳಿದರು. ಈ ವೇಳೆ ಮಾತನಾಡಿದ ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಈಗ ಕೆಲವರು ವ್ಯಕ್ತಿತ್ವ ನೋಡುತ್ತಿಲ್ಲ. ಬದಲಿಗೆ ಜಾತಿ ನೋಡುತ್ತಿದ್ದಾರೆ. ಈ ಮನೋಭಾವ ಮೊದಲು ಕೊನೆಯಾಗಬೇಕು. ಜಾತಿ ಮುಕ್ತ ಸಮಾಜ ನಿರ್ಮಾಣವಾಗಬೇಕು ಎಂದರು. ಪತ್ರಿಕಾಗೋಷ್ಠಿಯಲ್ಲಿ ಪ್ರೊ. ಕಾಳೇಗೌಡ ನಾಗವಾರ, ಸ್ವಾಮಿ ಆನಂದ್, ಕೃಷ್ಣ ಜನಮನ, ಈ.ಧನಂಜಯ ಎಲಿಯೂರು ಉಪಸ್ಥಿತರಿದ್ದರು.

ಅಂತರ್ಜಾತಿ ಮದುವೆಯಾದವರಿಗೆ ಸಹಾಯವಾಣಿ

ಅಂತರಧರ್ಮ ಹಾಗೂ ಅಂತರ್ಜಾತಿ ಮದುವೆ ಆದವರ ಸಹಾಯಕ್ಕಾಗಿ ಜನಸ್ಪಂದನಾ ಟ್ರಸ್ಟ್ ಸಹಾಯವಾಣಿ ಆರಂಭಿಸಿದೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ತಿಳಿಸಿದರು. ಅಂತರಧರ್ಮ ಹಾಗೂ ಅಂತರ್ಜಾತಿ ಮದುವೆಯಾದವರಿಗೆ ಕಿರುಕುಳ ಹಾಗೂ ದೌರ್ಜನ್ಯ ಸಹಜ. ಈ ಹಿನ್ನೆಲೆಯಲ್ಲಿ ನಮ್ಮ ಟ್ರಸ್ಟ್ ಅವರ ಸಹಾಯಕ್ಕೆ ಸಹಾಯವಾಣಿ ಆರಂಭಿಸಿದೆ ಎಂದರು. ಯಾರಿಂದಾದರೂ ದೌರ್ಜನ್ಯ ಹಾಗೂ ಕಿರುಕುಳವಾಗುತ್ತಿದ್ದರೆ ಕೂಡಲೇ ಸಹಾಯವಾಣಿ ಸಂಖ್ಯೆ 9886752274 ಮತ್ತು 9880390463 ಗೆ ಸಂಪರ್ಕಿಸಿ ದೂರು ನೀಡಬಹುದು ಎಂದು ಸಲಹೆ ನೀಡಿದರು. ಹೀಗೆ ದೂರು ನೀಡಿದ ಕೂಡಲೇ ಸಂಬಂಧಿಸಿದ ಪೊಲೀಸ್ ಠಾಣಾಧಿಕಾರಿ, ತಹಶೀಲ್ದಾರ್ ಸೇರಿದಂತೆ ಇತರೆ ಅಧಿಕಾರಿಗಳಿಗೆ ವಿಷಯ ತಿಳಿಸಿ ಸ್ಥಳಕ್ಕೆ ಕಳುಹಿಸಲಾಗುವುದು ಎಂದು ಸೋಮಶೇಖರ್ ತಿಳಿಸಿದರು.

87 ದಿನ ಪೂರೈಸಿದ ಕಾವೇರಿ ಕ್ರಿಯಾ ಸಮಿತಿ ಹೋರಾಟ

ಮೈಸೂರು,ಫೆ.1(ಜಿಎ)–ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ನಗರದ ಪುರಭವನದ ಮುಂಭಾಗ ಕಾವೇರಿ ಕ್ರಿಯಾ ಸಮಿತಿ ನಡೆಸುತ್ತಿರುವ ಧರಣಿ ಗುರುವಾರ 87 ದಿನ ಪೂರೈಸಿತು.

ಈ ವೇಳೆ ಸಮಿತಿ ಅಧ್ಯಕ್ಷ ಜಯಪ್ರಕಾಶ್ ಮಾತನಾಡಿ, ಮೇಕೆದಾಟು ಯೋಜನೆಗೆ ತಮಿಳುನಾಡು ಸರ್ಕಾರ ತಡೆಯೊಡ್ಡುತ್ತಿದ್ದು, ಅದಕ್ಕೆ ತಕ್ಕಂತೆ ರಾಜ್ಯ ಸರ್ಕಾರ ಅದನ್ನು ಖಂಡಿಸಿ ಯೋಜನೆಗೆ ಮುಂದಾಗಬೇಕು. ಮೇಕೆದಾಟು ಅಣೆಕಟ್ಟು ಯೋಜನೆಗೆ ತ್ವರಿತವಾಗಿ ಕೇಂದ್ರ ಸರ್ಕಾರದ ಅನುಮತಿ ತೆಗೆದುಕೊಳ್ಳಬೇಕು ಎಂದರು.

ಪ್ರತಿಭಟನೆಯಲ್ಲಿ ಸಮಿತಿ ಗೌರವ ಕಾರ್ಯದರ್ಶಿ ಮೆಲ್ಲಹಳ್ಳಿ ಮಹಾದೇವಸ್ವಾಮಿ, ಚೇತನ್ ರಮೇಶ್, ರಾಜ್ಯ ರೈತ ಮುಖಂಡ ವರಕೋಡು ಕೃಷ್ಣೇಗೌಡ, ಸಿಂಧುವಳ್ಳಿ ಶಿವಕುಮಾರ್, ಗಾಣಿಗನಕೊಪ್ಪಲು ನಾಗರಾಜ್, ದೇಬೂರು ರವಿಶಂಕರ್, ಉದ್ಬೂರು ಸೋಮಶೇಖರ್, ಪುಣ್ಯಕೋಟಿ ಸೇವಾ ಟ್ರಸ್ಟ್ ಅಧ್ಯಕ್ಷ ಹನುಮಂತೇಶ್, ಕನ್ನಡಾಂಬೆ ವೇದಿಕೆ ರಾಜ್ಯಾಧ್ಯಕ್ಷ ರಾಜಶೇಖರ್, ಕರ್ನಾಟಕ ಸೇನಾಪಡೆಯ ಜಿಲ್ಲಾಧ್ಯಕ್ಷ ತೇಜಸ್ ಲೋಕೇಶ್‌ಗೌಡ, ಮುಖಂಡರಾದ ಪ್ರಭಾಕರ್, ಕೃಷ್ಣಪ್ಪ, ಕನ್ನಡ ಹೋರಾಟಗಾರರಾದ ರವೀಶ್, ಅರುಣ್‌ಕುಮಾರ್, ಕನ್ನೆಗೌಡ, ರಾಮೇಗೌಡ, ಶಿವಣ್ಣ ಭಾನುಪ್ರಕಾಶ್, ಮಂಜುಳಾ, ಒಕ್ಕಲಿಗ ಮಹಾಸಭಾ ಉಪಾಧ್ಯಕ್ಷ ಶಿವಲಿಂಗಯ್ಯ, ಪುಷ್ಪಲತಾ, ಮಂಗಳ, ನಂದೀಶ್, ವಿಶ್ವಕುಮಾರ್, ಸಂಜಯ್, ಕೃಷ್ಣೇಗೌಡ, ಅಶೋಕ್, ರಮೇಶ್, ರವಿಕುಮಾರ್, ಆಟೋ ಮಹದೇವ್, ಕಿಶೋರ್, ಡಾ.ರಾಜಕುಮಾರ್ ಸಂಘದ ಅಧ್ಯಕ್ಷ ಮಹಾದೇವಸ್ವಾಮಿ, ಬೀರಯ್ಯ, ವಿಷ್ಣು ಇದ್ದರು.



ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ನಗರದ ಪುರಭವನದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.2.2024 ಶುಕ್ರವಾರ, ಮಳೆ ನಕ್ಷತ್ರ: ಶ್ರವಣ 24.1.2024ರಿಂದ 05.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ವೆರಿಕೋಸ್ ವೇನ್ಸ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆ.9ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಜುವೆಲ್ ಆರ್ಟ್ :** ಕಲಾವಿದರು ಮತ್ತು ಉಪನ್ಯಾಸಕರಾದ ಡಾ. ವಿಠ್ಠಲರಡ್ಡಿ, ಎಫ್. ಚುಳಕಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11 ಗಂಟೆಯಿಂದ.

■ **ದೇವರಾಜ ಬಾಲಕಿಯರ ಸರ್ಕಾರಿ ಸ್ವತಂತ್ರ ಪದವಿಪೂರ್ವ ಕಾಲೇಜು:** ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್ ರೇಂಜರ್, ರೆಡ್‌ಕ್ರಾಸ್ ಚಟುವಟಿಕೆಗಳ ಸಮಾರೋಪ ಮತ್ತು ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ವಾರ್ಷಿಕ ಸಂಚಿಕೆ ಬಿಡುಗಡೆ: ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಮುಖ್ಯ ಅತಿಥಿಗಳು: ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಮರಿಸ್ವಾಮಿ, ಪ್ರಧಾನ ಭಾಷಣ: ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ಉಪಸ್ಥಿತರು: ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ನಾಗಭೂಷಣ್, ಪ್ರಾಂಶುಪಾಲ ಸಿದ್ದರಾಜು, ನಿವೃತ್ತ ಪ್ರಾಂಶುಪಾಲ ಸಿ.ರಾಮೇಗೌಡ, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲ ಡಾ.ರಮಾನಂದ, ಸ್ಥಳ: ರಾಷ್ಟ್ರಕವಿ ಕುವೆಂಪು ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ–ವಿಜ್ಞಾನ ಕಾಲೇಜು:** ಸ್ನಾತಕೋತ್ತರ ವಿಭಾಗ ಸಾಂಸ್ಕೃತಿಕ–ಕ್ರೀಡಾ ವೇದಿಕೆಗಳ ಉದ್ಘಾಟನೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಅಧ್ಯಕ್ಷತೆ: ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಮುಖ್ಯ ಅತಿಥಿಗಳು: ರಂಗಾಯಣ ಉಪನಿರ್ದೇಶಕರಾದ ಶ್ರೀಮತಿ ನಿರ್ಮಲ ಮಠಪತಿ, ಉಪಸ್ಥಿತರು: ಕಾಲೇಜು ಪ್ರಿನ್ಸಿಪಾಲ್ ಡಾ.ಎಸ್.ಪ್ರತಿಭಾ, ಸ್ಥಳ: ಸುವರ್ಣ ಮಹೋತ್ಸವ ಭವನ, ಬೆಳಗ್ಗೆ 11.30ಕ್ಕೆ.

■ **ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಂ :** ಆರೋಗ್ಯ ಮಂಥನ ವೈದ್ಯರೊಂದಿಗಿನ ನೇರ ಸಂದರ್ಶನ ಸರಣಿ ಕಾರ್ಯಕ್ರಮ, ವಿಷಯ : ಸಂಧಿವಾತ ಮತ್ತು ಸ್ವಯಂ ನಿರೋಧಕ ರೋಗಗಳು, ಸಂಪನ್ಮೂಲ ವ್ಯಕ್ತಿಗಳು: ಡಾ. ಮಹಾಬಲೇಶ್ವರ ಮಮದಾಪೂರ, ಸಂಧಿವಾತ ಮತ್ತು ಕೀಲು ರೋಗ ತಜ್ಞರು, ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಮೈಸೂರು, ಬೆಳಗ್ಗೆ 11.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿವೇಕಾನಂದ ಜಯಂತಿ, ಬೆಳಗ್ಗೆ 5.15 ರಿಂದ ವೇದಮಂತ್ರ ಪಠನ, ಮಂಗಳಾರತಿ ಮತ್ತು ಭಜನೆ, ವಿಶೇಷ ಪೂಜೆ, ಶಿವಸಹಸ್ರನಾಮ ಪಾರಾಯಣ, ಭಜನೆ, ಗ್ರಂಥವಾಚನ, ಆರತಿ, ಹೋಮ, ಪ್ರಸಾದ ವಿತರಣೆ, ಸಂಜೆ 4.30 ರಿಂದ ಶ್ರೀಶಾರದಾ ಸಂವಿತ್ ಭಜನಾ ಮಂಡಳಿಯಿಂದ ಭಜನೆ, ಸಂಜೆ 6 ರಿಂದ ಕನ್ನಡದಲ್ಲಿ ಪ್ರವಚನ–ಸ್ವಾಮಿ ವಿವೇಕಾನಂದ, ಸಂಜೆ 7 ರಿಂದ ಆರತಿ ಮತ್ತು ವಿಶೇಷ ಭಜನೆ, ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ.

■ **ಅನ್ವೇಷಣಾ ಸೇವಾ ಟ್ರಸ್ಟ್, ಅರಸು ಪತ್ರಿಕೆ:** 11ನೇ ವಾರ್ಷಿಕೋತ್ಸವದ ಅಂಗವಾಗಿ ಸಾಧಕರಿಗೆ ಧ್ವನಿಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ಕ್ಷೇತ್ರ ಹೊರನಾಡು ಧರ್ಮಕರ್ತರಾದ ಡಾ.ಜಿ.ಭೀಮೇಶ್ವರ ಜೋಶಿ, ಉದ್ಘಾಟನೆ: ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ದೇವರಾಜ ಅರಸು ಭಾವಚಿತ್ರಕ್ಕೆ ಪುಷ್ಪಾರ್ಚನೆ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ: ತವರು ಅರಸು ಸಂಸ್ಥೆ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್, 11ನೇ ವರ್ಷದ ಮೊದಲ ಸಂಚಿಕೆ ಬಿಡುಗಡೆ: ಅನ್ವೇಷಣಾ ಸೇವಾ ಟ್ರಸ್ಟ್ ಅಧ್ಯಕ್ಷ ಆರ್ಯ ಅಮರನಾಥ್ ರಾಜೇ ಅರಸ್, ಪುಸ್ತಕ ತಾಂಬೂಲ ವಿತರಣೆ : ಎಚ್.ಎಂ.ಟಿ. ಲಿಂಗರಾಜೇ ಅರಸ್, ಮುಖ್ಯ ಅತಿಥಿಗಳು : ಅರಸು ಜಾಗೃತಿ ಅಕಾಡೆಮಿ ಚಾರಿಟೆಬಲ್ ಟ್ರಸ್ಟ್ ಉಪಾಧ್ಯಕ್ಷ ಎಚ್.ಎ.ವೆಂಕಟೇಶ್, ಡಾ. ಕೆ. ರಘುರಾಂ ವಾಜಪೇಯಿ, ಡಾ. ಎಂ.ಜಿ.ಆರ್. ಅರಸ್, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ :** ಉಪನ್ಯಾಸ ಮಾಲಿಕೆ, ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಅಸ್ನಾ ಉರೂಜ್ ಅವರಿಂದ ಉತ್ತಮ ಆರೋಗ್ಯಕ್ಕಾಗಿ ಪೋಷಣೆ ಮತ್ತು ಜೀವನಶೈಲಿ ವಿಧಾನಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ: ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಎಂ.ಚಂದ್ರಶೇಖರ್, ಸ್ಥಳ: ಡಾ.ಎಸ್.ಆರ್.ರಂಗನಾಥನ್ ಸಭಾಂಗಣ, ಮ. 3.30ಕ್ಕೆ.

■ **ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್:** ಇನ್ನೋವೇಷನ್, ಡಿಸೈನ್ ಮತ್ತು ಎಂಟ್ರಪ್ರಿನರ್‌ಶಿಪ್ ಬೂಟ್‌ಕ್ಯಾಂಪ್ ಸಮಾರಂಭ ಸಮಾರಂಭ, ಮುಖ್ಯ ಅತಿಥಿಗಳು: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ: ಎನ್‌ಐಇ ಕಾರ್ಯದರ್ಶಿ ಎಸ್.ಬಿ.ಉದಯಶಂಕರ್, ಸ್ಥಳ: ಡೈಮಂಡ್ ಜ್ಯೂಬಿಲಿ ಕಾಂಪ್ಲೆಕ್ಸ್, ಸಂಜೆ 4.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಶ್ರೀ ಗುಬ್ಬಿ ವೀರಣ್ಣ ಪೀಠ, ಭಾರತೀಯ ರಂಗ ಶಿಕ್ಷಣ ಕೇಂದ್ರ, ರಂಗಾಯಣ, ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ :** ಬೆಳಗ್ಗೆ 10.30ಕ್ಕೆ ರಂಗಭೂಮಿ ಹಾಗೂ ರಂಗಭೂಮಿಯ ಪೂರಕ ಕಲೆಗಳ ಉಪನ್ಯಾಸ ಮಾಲಿಕೆ 'ರಂಗ ಸಂಯುಕ್ತ', ಉಪನ್ಯಾಸ ಮಾಲಿಕೆ ಉದ್ಘಾಟನೆ: ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಪತಿ ನಾಗೇಶ್ ವಿ.ಬೆಟ್ಟಕೋಟೆ, ಅಧ್ಯಕ್ಷತೆ: ಮೈಸೂರು ವಿವಿ ಕುಲಸಚಿವರಾದ ಆರ್.ಶೈಲಜಾ, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಿ.ಎನ್.ಮಲ್ಲಿಕಾರ್ಜುನಸ್ವಾಮಿ, ಉಪಸ್ಥಿತರು: ರಂಗಾಯಣದ ಉಪ ನಿರ್ದೇಶಕರಾದ ನಿರ್ಮಲಾ ಮಠಪತಿ, ಮೈಸೂರು ವಿ.ವಿ ಲಲಿತ ಕಲಾ ಕಾಲೇಜಿನ ಪ್ರಾಂಶುಪಾಲರಾದ ಅನಿಟ ವಿಮ್ಲ ಬ್ರಾಗ್ಸ್, ಸ್ಥಳ: ಲಲಿತ ಕಲಾ ರಂಗಮಂದಿರ, ಮಾನಸಗಂಗೋತ್ರಿ, ಸಂಜೆ 5ರಿಂದ ಸಂಪನ್ಮೂಲ ವ್ಯಕ್ತಿ ಎಸ್.ಎ.ಯುಗಶ್ರೀ ಅವರಿಂದ ಚಿತ್ರಕಲೆ ಕುರಿತು ಉಪನ್ಯಾಸ, ಸ್ಥಳ: ಬಿ.ವಿ.ಕಾರಂತ ರಂಗ ಚಾವಡಿ, ರಂಗಾಯಣ.

■ **ಪರಂಪರೆ :** ಗಿರಿಜಾ ಕಲ್ಯಾಣ ಸಪ್ತಾಹ, ಡಾ. ಜ್ಯೋತಿಶಂಕರ್ ಅವರಿಂದ ಗಿರಿಜಾ ಕಲ್ಯಾಣ–ಕಾಮದಹನ ಕುರಿತು ಪ್ರವಚನ, ಶ್ರೀ ಶಾರದಾ ಸಂಗೀತ ಶಾಲೆಯವರಿಂದ ಹಾಡುಗಳು, ಸ್ಥಳ: ಗಣಪತಿ ದೇವಸ್ಥಾನದ ರಜತ್ ಸಭಾಂಗಣ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6 ಗಂಟೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಲೀಲಾ ಅಪ್ಪಾಜಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.40 KSOU ಮುಕ್ತವಾಣಿ– ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ–ಡಾ.ಕೆ.ಎಲ್.ಎನ್.ಮೂರ್ತಿ, ಕುಲಸಚಿವರು. ಪ್ರಸ್ತುತಿ–ಎನ್.ಕೇಶವ ಮೂರ್ತಿ, 6.50 ರೈತರಿಗೆ ಸಲಹೆ, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಎ.ಕೆ.ಸಿ.ನಟರಾಜನ್–ಕ್ಲಾರಿಯೋನೆಟ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಬಿ. ದುರ್ಗಾಭವಾನಿ–ಹಾಡುಗಾರಿಕೆ, 4.00 ಮಹಿಳಾರಂಗ–ಸ್ವಯಂ ಉದ್ಯೋಗದಲ್ಲಿ ಯಶಸ್ವಿಯಾಗುವುದು ಹೇಗೆ? ಚರ್ಚೆಯಲ್ಲಿ ಭಾಗವಹಿಸುವವರು ಸತ್ಯಶೀ ಬಿ.ಶ್ಯಾಮ್, ಶೋಭಾ, ಶಾಲಿನಿ, 4.30 ವೃತ್ತಿ ಮಾರ್ಗದರ್ಶನ, 5.45 KSOU ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ–ಕೃಷಿಲೋಕ, ಪ್ರಸುತಿ–ಆರ್.ಲೋಕೇಶ್ವರಿ, 8.00 ವಿಜ್ಞಾನಭಾರತಿ–ನಕ್ಷತ್ರ ವೀಕ್ಷಣೆ ಒಂದು ವೈಜ್ಞಾನಿಕ ಹವ್ಯಾಸ ಕುರಿತು ಅಮೋಘವರ್ಷ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಜಿ.ಶಾಂತಕುಮಾರ್, 9.30 ಅನಂತ ಪದ್ಮನಾಭನ್–ವೀಣಾವಾದನ, 10.00 ಹಳ್ಳಿ ಹಾಡು, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 2 ಶುಕ್ರವಾರ 2024

ಸಂಪುಟ: 44 | ಸಂಚಿಕೆ: 285 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪ್ರಧಾನಿ ಮೋದಿ ಎರಡನೇ ಅವಧಿಯ ಕೊನೆಯ ಬಜೆಟ್

ಬಡವರು ಮಹಿಳೆಯರು ಯುವಕರು ಅನ್ನದಾತರು ಆದ್ಯತೆ



ನವದೆಹಲಿ, ಫೆ.1– ಇಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಎರಡನೇ ಅವಧಿಯ ಸರ್ಕಾರದ ಕೊನೆಯ ಹಾಗೂ ತಮ್ಮ ದಾಖಲೆಯ ಆರನೇ ಬಜೆಟ್ ಮಂಡಿಸಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಈ ಮಧ್ಯಂತರ ಬಜೆಟ್‌ನಲ್ಲಿ ಬಡವರು, ಮಹಿಳೆಯರು, ಯುವಕರು ಹಾಗೂ ಅನ್ನದಾತರಿಗೆ ಆದ್ಯತೆ ನೀಡಿರುವುದಾಗಿ ಪ್ರಕಟಿಸಿದರು.

ಉತ್ತಮ ಬದುಕಿನ ಹುಡುಕಾಟದಲ್ಲಿರುವ ಈ ನಾಲ್ಕೂ ಸಮುದಾಯಗಳಿಗೆ ಸರ್ಕಾರದ ನೆರವಿನ ಅಗತ್ಯವಿದೆ. ಹಾಗಾಗಿ ಸರ್ಕಾರ ಅವರೊಂದಿಗೆ ನಿಲ್ಲಲಿದೆ. ಅವರ ಸಬಲೀಕರಣ ಹಾಗೂ ಬೆಳವಣಿಗೆಯು ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತದೆ. ದೇಶದ ಪ್ರಗತಿಯು ಅವರ ಪ್ರಗತಿಯನ್ನೇ ಅವಲಂಬಿಸಿದೆ ಎಂದು ಅವರು ಅಭಿಪ್ರಾಯಪಟ್ಟರು. ಮುಂದಿನ 2047ರ ವೇಳೆಗೆ ಭಾರತ ದೇಶವನ್ನು 'ವಿಕಸಿತ್ ಭಾರತ್' ಮಾಡಲು ಶ್ರಮಿಸುತ್ತಿರುವುದಾಗಿ ಹೇಳಿದ ಕೇಂದ್ರ ವಿತ್ತ ಸಚಿವೆ, ಇದಕ್ಕಾಗಿ ಪೂರ್ವ ತಯಾರಿಗಳು ಈಗಾಗಲೇ ಆರಂಭವಾಗಿವೆ. ದೇಶದ ಜನತೆ ಪ್ರಧಾನಿ ಮೋದಿ ಅವರ ಮೇಲೆ ಇಟ್ಟಿರುವಂತಹ ನಂಬಿಕೆ ಮತ್ತು ವಿಶ್ವಾಸ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಸರ್ಕಾರಕ್ಕೆ ಚೈತನ್ಯದಾಯಕವಾಗಿದೆ ●9ನೇ ಪುಟಕ್ಕೆ


ದೇಶದಲ್ಲಿ 390 ಹೊಸ ವಿಶ್ವವಿದ್ಯಾನಿಲಯಗಳ ಸ್ಥಾಪನೆ



ರಕ್ಷಣಾ ವಲಯಕ್ಕೆ 11 ಲಕ್ಷ ಕೋಟಿ ಅನುದಾನ



ಅರ್ಹ ಮಧ್ಯಮ ವರ್ಗದವರಿಗೆ ವಸತಿ ಯೋಜನೆ



ಹಾಲು, ಡೈರಿ ಉತ್ಪಾದನೆ ಹೆಚ್ಚಿಸುವ ಪ್ರಸ್ತಾಪ



ಕೃಷಿ, ರೈತ ಕಲ್ಯಾಣ ಸಚಿವಾಲಯಕ್ಕೆ 1.27 ಲಕ್ಷ ಕೋಟಿ ಅನುದಾನ



ಎಲ್‌ಪಿಜಿ ಸಬ್ಸಿಡಿಗಾಗಿ 11,925 ಕೋಟಿ ಮೀಸಲು




ಮೀನುಗಾರಿಕೆಗೆ ಹೊಸ ಸಚಿವಾಲಯ



ಸಾಮಾನ್ಯ ರೈಲು ಬೋಗಿ ವಂದೇ ಭಾರತ್ ದರ್ಜೆಗೆ



ಬಾಲಕಿಯರಿಗೆ ಗರ್ಭಕಂಠ ಕ್ಯಾನ್ಸರ್ ತಡೆಗಾಗಿ ಉಚಿತ ಲಸಿಕೆ



ಒಂದು ಕೋಟಿ ಮನೆಗಳಿಗೆ ಪ್ರತಿ ತಿಂಗಳು 300 ಯುನಿಟ್ ಉಚಿತ ವಿದ್ಯುತ್



ಆಶಾ, ಅಂಗನವಾಡಿ ಕಾರ್ಯಕರ್ತರಿಗೂ ಆಯುಷ್ಮಾನ್ ಭಾರತ್ ಆರೋಗ್ಯ ಯೋಜನೆ

ನವದೆಹಲಿ, ಫೆ.1–ಆಶಾ, ಅಂಗನವಾಡಿ ಕಾರ್ಯಕರ್ತೆಯರಿಗೂ ಆಯುಷ್ಮಾನ್ ಭಾರತ್ ಆರೋಗ್ಯ ಯೋಜನೆಯನ್ನು ವಿಸ್ತರಿಸಲಾಗುವುದು ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಮಧ್ಯಂತರ ಬಜೆಟ್‌ನಲ್ಲಿ ಅವರು ಈ ಘೋಷಣೆ ಮಾಡಿದ್ದಾರೆ.

ಆಯುಷ್ಮಾನ್ ಭಾರತ್ ಪ್ರಧಾನ್ ಮಂತ್ರಿ–ಜನ ಆರೋಗ್ಯ ಯೋಜನೆ ವಿಶ್ವದಲ್ಲೇ ಅತಿ ದೊಡ್ಡ ಆರೋಗ್ಯ ವಿಮಾ ಯೋಜನೆಯಾಗಿದ್ದು, ಪ್ರತಿ ಕುಟುಂಬಕ್ಕೆ ವರ್ಷಕ್ಕೆ 5 ಲಕ್ಷ ರೂ.ಗಳನ್ನು ಒದಗಿಸಲಾಗುತ್ತಿದೆ. ಕಳೆದ ವರ್ಷ ಡಿಸೆಂಬರ್ 27ರವರೆಗೆ 12 ಕೋಟಿ ಕುಟುಂಬಗಳಿಗೆ ಸೇರಿದ 55 ಕೋಟಿ ಜನ ಈ ಯೋಜನೆಗೆ ಒಳಪಟ್ಟಿದ್ದರು ಎಂದರು.



ಭಾರತೀಯ ಆರ್ಥಿಕತೆಯಲ್ಲಿ ಕಳೆದ ಒಂದು ದಶಕದಲ್ಲಿ ಗಮನಾರ್ಹ ಬದಲಾವಣೆ ಆಗಿದೆ. 2014ರಿಂದ ಭಾರತ ದೈತ್ಯ ಸವಾಲುಗಳನ್ನು ಎದುರಿಸಿತ್ತು. ಆದರೆ, ಸರ್ಕಾರ ಈ ಅಡೆತಡೆಗಳನ್ನು ನಿವಾರಿಸಿದೆ. ರಚನಾತ್ಮಕ ಸುಧಾರಣೆಗಳನ್ನು ಪ್ರಾರಂಭಿಸಿದೆ. ಜನಪರ ಸುಧಾರಣೆಗಳಿಗೆ ಒತ್ತು ನೀಡಲಾಗಿದೆ. ಉದ್ಯೋಗ ●9ನೇ ಪುಟಕ್ಕೆ



ಆದಾಯ ತೆರಿಗೆ ಯಥಾಸ್ಥಿತಿ...

ನವದೆಹಲಿ, ಫೆ.1–ಕೇಂದ್ರ ಸರ್ಕಾರದ ಮಧ್ಯಂತರ ಬಜೆಟ್ ಮಂಡಿಸಿದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ಮೂಲಸೌಕರ್ಯಗಳ ಘೋಷಣೆ ಹಾಗೂ ಮಧ್ಯಮ ವರ್ಗಕ್ಕೆ ಕೆಲವು ಯೋಜನೆಗಳನ್ನು ಪ್ರಕಟಿಸುವುದರ ಜೊತೆಗೆ ಆರೋಗ್ಯ ಮತ್ತು ಕೃಷಿ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದಾರೆ. ಆದರೆ ಆದಾಯ ತೆರಿಗೆ ಮಿತಿಯನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಿದ್ದಾರೆ. ಆದಾಯ ತೆರಿಗೆಯಲ್ಲಿ ಯಾವುದೇ ಬದಲಾವಣೆ ಇಲ್ಲ. 7 ಲಕ್ಷದವರೆಗಿನ ಆದಾಯ ಹೊಂದಿರುವವರಿಗೆ ತೆರಿಗೆ ವಿನಾಯಿತಿ ●9ನೇ ಪುಟಕ್ಕೆ

ಮಂಡ್ಯದಲ್ಲಿ ಜೂನ್‌ನಲ್ಲಿ 87ನೇ ಕನ್ನಡ ಸಾಹಿತ್ಯ ಸಮ್ಮೇಳನ

ಅದ್ದೂರಿ ಎನ್ನುವುದಕ್ಕಿಂತ ಅರ್ಥಪೂರ್ಣವಾಗಿ ಆಚರಿಸಬೇಕು



ಬೆಂಗಳೂರು, ಫೆ.1– 87ನೇ ಕನ್ನಡ ಸಾಹಿತ್ಯ ಸಮ್ಮೇಳನ ಅದ್ದೂರಿ ಎನ್ನುವುದಕ್ಕಿಂತ ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಮಂಡ್ಯದಲ್ಲಿ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕುರಿತು ಅವರ ಅಧ್ಯಕ್ಷತೆಯಲ್ಲಿ ಇಂದು ಪೂರ್ವಭಾವಿ ಸಭೆ ಜರುಗಿತು.

ಜಿಲ್ಲಾಡಳಿತದ ಸಹಕಾರದೊಂದಿಗೆ ಸಮ್ಮೇಳನ ಆಯೋಜಿಸುವಂತೆ ಸಲಹೆ ನೀಡಿದ ಮುಖ್ಯಮಂತ್ರಿಗಳು ಕನ್ನಡ ಸಂಘಟನೆಗಳನ್ನೂ ವಿಶ್ವಾಸಕ್ಕೆ ಪಡೆಯಲು ಸೂಚಿಸಿದರು. ಜೂನ್ ಮೊದಲನೇ ವಾರದಲ್ಲಿ ಸಮ್ಮೇಳನ ಆಯೋಜಿಸಲು ಮುಖ್ಯಮಂತ್ರಿಗಳು ಸೂಚಿಸಿದರು. ಸಮ್ಮೇಳನಾಧ್ಯಕ್ಷರನ್ನು ಆಯ್ಕೆ ಮಾಡುವಾಗ ಹಿರಿಯರು, ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಕೆಲಸ ಮಾಡಿದವರನ್ನು ಪರಿಗಣಿಸಲು ಹೇಳಿದರು. ಕನ್ನಡರಥ ಜಾಥಾ, 87 ಜನ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಸೇರಿದಂತೆ ಮೂರು ದಿನಗಳ ಕಾಲ ಕನ್ನಡ ವಿಚಾರ ಗೋಷ್ಠಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಸಭೆಗೆ ತಿಳಿಸಿದರು.

ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 30 ಕೋಟಿ ರೂ.ಗಳ ಅನುದಾನ ಒದಗಿಸಲು ಪರಿಷತ್ ಅಧ್ಯಕ್ಷರು ಮನವಿ ಸಲ್ಲಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಶಾಸಕ ಪಿ.ಎಂ ನರೇಂದ್ರಸ್ವಾಮಿ, ಮುಖ್ಯ ಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದ ರಾಜು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎನ್. ಮಂಜುಳಾ, ನಿರ್ದೇಶಕಿ ಧರಣಿದೇವಿ ಮಾಲಗತ್ತಿ ಉಪಸ್ಥಿತರಿದ್ದರು.

ಇದು 'ವಿಕಸಿತ ಭಾರತ' ಬಜೆಟ್

ಸಮಾಜದ ಪ್ರತಿಯೊಂದು ವರ್ಗದ, ಅಭಿವೃದ್ಧಿ ಹೊಂದಿದ ಭಾರತಕ್ಕೆ ಅಡಿಪಾಯ ಹಾಕುತ್ತದೆ



ನವದೆಹಲಿ, ಫೆ.1– ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಇಂದು ಲೋಕಸಭೆಯಲ್ಲಿ ಮಂಡಿಸಿದ ಮಧ್ಯಂತರ ಬಜೆಟ್ ಬಗ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಹರ್ಷ ವ್ಯಕ್ತಪಡಿಸಿದ್ದಾರೆ. ಮಧ್ಯಂತರ ಬಜೆಟ್ ಮಂಡನೆ ನಂತರ ದೇಶದ ಜನತೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಈ ಬಜೆಟ್ ಯುವ ಭಾರತದ ಯುವ ಆಕಾಂಕ್ಷೆಗಳ ಪ್ರತಿಬಿಂಬವನ್ನು ಹೊಂದಿದೆ. ಬಜೆಟ್‌ನಲ್ಲಿ ಎರಡು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಸಂಶೋಧನೆ ಮತ್ತು ಆವಿಷ್ಕಾರಕ್ಕಾಗಿ, 1 ಲಕ್ಷ ಕೋಟಿ ರೂಪಾಯಿಗಳ ನಿಧಿಯನ್ನು ಘೋಷಿಸಲಾಗಿದೆ.

ಈ ಮಧ್ಯಂತರ ಬಜೆಟ್ ಅಂತರ್ಗತ ಮತ್ತು ನವೀನವಾಗಿದೆ. ಇದು ನಿರಂತರತೆಯ ವಿಶ್ವಾಸವನ್ನು ಹೊಂದಿದೆ. ಇದು ವಿಕಸಿತ ಭಾರತದ ಎಲ್ಲಾ 4 ಸ್ತಂಭಗಳನ್ನು ಸಶಕ್ತಗೊಳಿಸುತ್ತದೆ– ಯುವ ಜನತೆ, ಬಡವರು, ಮಹಿಳೆಯರು ಮತ್ತು ರೈತರಾಗಿದ್ದಾರೆ. 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಭರವಸೆಯನ್ನು ಈ ಬಜೆಟ್ ನೀಡುತ್ತದೆ ಎಂದರು. ಈ ಬಜೆಟ್‌ನಲ್ಲಿ ವಿತ್ತೀಯ ಕೊರತೆಯನ್ನು ನಿಯಂತ್ರಣದಲ್ಲಿಟ್ಟುಕೊಂಡು ಬಂಡವಾಳ ವೆಚ್ಚಕ್ಕೆ ಐತಿಹಾಸಿಕ ಗರಿಷ್ಠ 11,11,111 ಕೋಟಿ ರೂಗಳನ್ನು ನೀಡಲಾಗಿದೆ. ಅರ್ಥಶಾಸ್ತ್ರಜ್ಞರ ಭಾಷೆಯಲ್ಲಿ ●9ನೇ ಪುಟಕ್ಕೆ

ಅಂಗನವಾಡಿ ಕಾರ್ಯಕರ್ತರಿಗೆ ತಲಾ ಎರಡು ಸೀರೆ ವಿತರಣೆ

- ಸಂಪುಟ ಸಭೆ ನಿರ್ಧಾರ
- ಆನ್‌ಲೈನ್ ಮೂಲಕ ವಿವಾಹ ನೋಂದಣಿ
- ಮೈಸೂರಲ್ಲಿ ಅಲೈಡ್ ಹೆಲ್ತ್ ಸೈನ್ಸ್ ಕಾಲೇಜ್ ಸ್ಥಾಪನೆ
- ಮೈಸೂರು ಸೇರಿ ಹಲವೆಡೆ ಐಟಿಐ ಉನ್ನತೀಕರಣ
- ದೊಡ್ಡ ಹುಣಸೂರಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ



ಬೆಂಗಳೂರು, ಫೆ.1(ಕೆಎಂಶಿ)– ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ತಲಾ ಎರಡು ಸೀರೆಗಳನ್ನು ವಿತರಿಸಲು ರಾಜ್ಯ ಸಚಿವ ಸಂಪುಟ ಸಭೆ ತೀರ್ಮಾನ ಕೈಗೊಂಡಿದೆ.

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ 1,37,469 ಕಾರ್ಯಕರ್ತೆಯರಿಗೆ ಈ ಸೀರೆಗಳು ಲಭ್ಯವಾಗಲಿವೆ. ಸೀರೆ ಖರೀದಿಗಾಗಿ 13.75 ಕೋಟಿ ರೂ.ಗಳನ್ನು ನೀಡಲು ಸಂಪುಟ ಸಮ್ಮತಿಸಿದೆ.

ಫೆ.12ರಿಂದ ಬಜೆಟ್ ಅಧಿವೇಶನ
ಫೆ.16ಕ್ಕೆ ಬಜೆಟ್ ಮಂಡನೆ

ಫೆಬ್ರವರಿ 12ರಿಂದ ವಿಧಾನಮಂಡಲದ ಬಜೆಟ್ ಅಧಿವೇಶನ ಆರಂಭಗೊಳ್ಳಲಿದ್ದು, ಮೊದಲ ದಿನ ರಾಜ್ಯಪಾಲರು ಜಂಟಿ ಸದನಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಫೆಬ್ರವರಿ 16 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ, 2024–25ನೇ ಸಾಲಿನ ರಾಜ್ಯ ಮುಂಗಡಪತ್ರ ಮಂಡಿಸಲಿದ್ದಾರೆ.

ಆನ್‌ಲೈನ್‌ನಲ್ಲಿ ವಿವಾಹ ನೋಂದಣಿ: ಆನ್‌ಲೈನ್ ಮೂಲಕ ಮದುವೆ ನೋಂದಣಿಗೆ ಅವಕಾಶ ಕಲ್ಪಿಸಲು ಹಿಂದೂ ವಿವಾಹ ಕಾಯಿದೆ ತಿದ್ದುಪಡಿಗೆ ಸಮ್ಮತಿಸಿದ್ದು, ಇದರಿಂದ ವಿವಾಹ ನೋಂದಣಿ ಸರಳೀಕರಣಕ್ಕೆ ಸಹಕಾರಿಯಾಗಲಿದೆ.

ಈ ಮೊದಲು ಉಪನೋಂದಣಿ ಅಧಿಕಾರಿಗಳ ಕಚೇರಿಗಳಲ್ಲಿ ವಿವಾಹ ನೋಂದಣಿ ಆಗುತ್ತಿದ್ದವು, ಈಗ ಆನ್‌ಲೈನ್ ಮೂಲಕ ನೋಂದಣಿಗೆ ಅವಕಾಶ ಮಾಡಿಕೊಡಲಾಗಿದೆ. ಕಾವೇರಿ–2 ಮತ್ತು ಬಾಪೂಜಿ ಸೇವಾಕೇಂದ್ರಗಳಲ್ಲಿ ನೋಂದಣಿ ಮಾಡಬಹುದು, ಇದರಿಂದ ಉಪನೋಂದಣಿ ಕಚೇರಿಗಳಿಗೆ ಅಲೆಯುವಂತಿಲ್ಲ.

ಮೈಸೂರಲ್ಲಿ ಅಲೈಡ್ ಹೆಲ್ತ್ ಸೈನ್ಸ್ ಕಾಲೇಜು: ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವತಿಯಿಂದ ಮೈಸೂರು ಹಾಗೂ ಕಲಬುರಗಿಯಲ್ಲಿ ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಅಂದಾಜು 100 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲು ಸಂಪುಟ ಒಪ್ಪಿಗೆ ನೀಡಿದೆ. ಹಿಂದೂ ವಿವಾಹಗಳ ನೋಂದಣಿ ●9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಸಂದರ್ಶಕ : "ಯಂಗ್‌ಮ್ಯಾನ್, ಬೇರೆ ಬೇರೆ ಕೆಲಸಗಳನ್ನು ಮಾಡುವ ಸಾಮರ್ಥ್ಯ ನಿಮ್ಮಲ್ಲಿದೆಯೇ?"

ಅಭ್ಯರ್ಥಿ : "ಖಂಡಿತ ಇದೆ ಸಾರ್, ಕಳೆದ ನಾಲ್ಕು ತಿಂಗಳಲ್ಲಿ 12 ಕಡೆ ಕೆಲಸ ಮಾಡಿದ್ದೇನೆ".

ಮೈಸೂರು ಮಿತ್ರ
ಶುಕ್ರವಾರ, 2 ಫೆಬ್ರವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸತ್ಯ ಮತ್ತು ಪ್ರಾಮಾಣಿಕತೆಯೇ ಎಲ್ಲಾ ಸದ್ಗುಣಗಳ ಮೂಲವಾಗಬೇಕು.

–ಕನ್‌ಫ್ಯೂಷಿಯಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಂಜಿನ ಹಿಂದೆ ಮಳೆ, ಗಂಜಿ ಹಿಂದೆ ಅನ್ನ

ನಿಮ್ಮ ಪತ್ರಗಳು

ಪಿಹೆಚ್.ಡಿಗೆ ಸಿಇಟಿ ಪರೀಕ್ಷೆ ಸ್ವಾಗತಾರ್ಹ

ಮಾನ್ಯರೆ,

ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕೋರ್ಸ್‌ಗಳ ಆಯ್ಕೆ ಪ್ರಕ್ರಿಯೆಗೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಯನ್ನು ಮಾನದಂಡವಾಗಿ ಬಳಸಿ ಮೆರಿಟ್‌ನ ಆಧಾರದ ಮೇಲೆ ಸೀಟುಗಳನ್ನು ನೀಡುವುದು ಸಾಮಾನ್ಯವಾಗಿದೆ. ಇದೇ ಮಾದರಿಯಲ್ಲಿ ಪ್ರಸ್ತುತ ಡಾಕ್ಟರೇಟ್ ಆಫ್ ಫಿಲಾಸಫಿ(ಪಿಹೆಚ್.ಡಿ)ಗೆ ಏಕರೂಪದ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಲು ಉನ್ನತ ಶಿಕ್ಷಣ ಇಲಾಖೆ ನಿರ್ಧರಿಸಿರುವುದು ಸ್ವಾಗತಾರ್ಹ ಕ್ರಮವಾಗಿದೆ.

ಕರ್ನಾಟಕ ರಾಜ್ಯದಲ್ಲಿ 41 ಸರ್ಕಾರಿ ಮತ್ತು 27 ಖಾಸಗಿ ವಿಶ್ವವಿದ್ಯಾನಿಲಯಗಳಿದ್ದು, ಇದರಲ್ಲಿ ಎಲ್ಲಾ ಸರ್ಕಾರಿ ವಿಶ್ವವಿದ್ಯಾನಿಲಯಗಳ ಮತ್ತು ಶೇ. 40 ರಷ್ಟು ಖಾಸಗಿ ವಿಶ್ವವಿದ್ಯಾನಿಲಯಗಳ ಪಿಹೆಚ್.ಡಿ ಸೀಟುಗಳಿಗೆ ಸಿಇಟಿ ನಡೆಸುವ ಮೂಲಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪಿಹೆಚ್.ಡಿ ಮಾಡಲು ಅನುವು ಮಾಡಿಕೊಡುವ ಉನ್ನತ ಶಿಕ್ಷಣ ಇಲಾಖೆಯ ಉದ್ದೇಶ ಬಡ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಸಹಕಾರಿಯಾಗಿದೆ.

ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕೋರ್ಸುಗಳಿಗೆ ನಡೆಸುವ ಸಿಇಟಿ ಮಾದರಿಯಲ್ಲಿನ ಏಕರೀತಿಯ ಪರೀಕ್ಷೆಗಳನ್ನು ಪಿಹೆಚ್.ಡಿ ಪದವಿಗೆ ಪಾರದರ್ಶಕವಾಗಿ ನಡೆಸಿ, ಆನ್ಲೈನ್ ಕೌನ್ಸೆಲಿಂಗ್ ಮೂಲಕ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಸೀಟು ಹಂಚಿಕೆ ಮಾಡಲು ಯೋಜನೆ ರೂಪಿಸಲಾಗಿರುವುದು ಮತ್ತು ಆಯಾ ವಿಶ್ವವಿದ್ಯಾನಿಲಯಗಳಲ್ಲಿ ಓದಿದವರಿಗೆ ಒಂದಷ್ಟು ಸೀಟುಗಳನ್ನು ಮೀಸಲಿಡಲಾಗುವ ಕ್ರಮವಾಗಿದೆ.

ಪ್ರಸ್ತುತ ಪ್ರತಿ ವಿಶ್ವವಿದ್ಯಾನಿಲಯದಲ್ಲೂ ಆಯಾ ವಿಭಾಗಗಳಲ್ಲಿ ಲಭ್ಯವಿರುವ ಸೀಟುಗಳ ಆಧಾರದ ಮೇಲೆ ಪ್ರತ್ಯೇಕವಾಗಿ ಪರೀಕ್ಷೆ ನಡೆಸಿ, ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿವೆ. ಇದರಿಂದ ಭ್ರಷ್ಟಾಚಾರ, ಸ್ವಜನ ಪಕ್ಷಪಾತಕ್ಕೆ ಅವಕಾಶವಾಗುತ್ತದೆ ಎಂಬ ಆರೋಪಗಳು ಪದೇ ಪದೇ ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಇದನ್ನು ತಪ್ಪಿಸಲು ಉನ್ನತ ಶಿಕ್ಷಣ ಇಲಾಖೆ ಸಿಇಟಿ ನಡೆಸಲು ಮುಂದಾಗಿರುವುದು ವಿದ್ಯಾರ್ಥಿಗಳ ಭವಿಷ್ಯಕ್ಕೆ ಅನುಕೂಲವಾಗುತ್ತದೆ. ಪಿಹೆಚ್.ಡಿಗೆ ಸಿಇಟಿ ಜಾರಿಗೆ ತರುವ ಉನ್ನತ ಶಿಕ್ಷಣ ಇಲಾಖೆಯ ಕ್ರಮಕ್ಕೆ ರಾಜ್ಯದ ಎಲ್ಲಾ ವಿದ್ಯಾರ್ಥಿಗಳ ಪರವಾಗಿ ಅಭಿನಂದನೆಗಳು.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ಆಹಾ ! ಇದು ಕನ್ನಡ



ಮಾನ್ಯರೇ,

ಮೈಸೂರಿನ ಕೆ.ಆರ್.ಎಸ್. ರಸ್ತೆಯ ಮಂಜುನಾಥಪುರ ಮತ್ತು ಗೋಕುಲಂ ಮುಖ್ಯ ರಸ್ತೆ ಸಂದಿಸುವ ಸ್ಥಳದಲ್ಲಿ ಒಂದು ಫಲಕವಿದೆ. ಅದರಲ್ಲಿ ಕೆಲವು ರಸ್ತೆಗಳು ಎಲ್ಲಿಗೆ ಹೋಗುತ್ತವೆ ಎಂಬುದನ್ನು ತಿಳಿಸುವ ಫಲಕವೊಂದಿದೆ. ವಿವಿಗಳಲ್ಲಿ ಓದುವ ವಿದ್ಯಾರ್ಥಿಗಳು ಕುದುರೆ, ಕತ್ತೆ ಮತ್ತು ಇತರೆ ಪ್ರಾಣಿಗಳೆಂದೇ ಭಾವಿಸಿ ಈ ಫಲಕವನ್ನು ಲಾಯ ಎಂದು ಬರೆದಿರಬಹುದು. ಏಕೆಂದರೆ ವಿಶ್ವವಿದ್ಯಾನಿಲಯ ಎಂದು ಬರೆಯುವುದಕ್ಕೆ ಬದಲು ಅವರು ವಿಶ್ವವಿಧ್ಯಾನಿಲಾಯ ಎಂಬುದಾಗಿ ಬರೆದಿದ್ದು ಅಪಭ್ರಂಶ ಮಾಡಿದ್ದಾರೆ. ಅದೂ ಸಾಲದು ಎಂದು ವಿದ್ಯಾನಿಲಯ ಎಂಬುದಕ್ಕೆ ಬದಲಾಗಿ ವಿಧ್ಯಾ ಎಂದು ಮಹಾಪ್ರಾಣವನ್ನೂ ಮತ್ತು ನಿಲ್ದಾಣ ಎನ್ನುವುದಕ್ಕೆ ನಿಲ್ಧಾಣ ಎಂದೂ ಬರೆದಿದ್ದಾರೆ. ಜೂ ಎಂದರೇನು ಮೃಗಾಲಯ ಎಂದು ಬರೆಯಬಹುದಿತ್ತಲ್ಲವೇ?

ಬರೆಯುವನೇನೋ ಬರೆದ. ಆದರೆ ಇದನ್ನು ಪಾವತಿಗೆ ದೃಢೀಕರಿಸಿದ ವ್ಯಕ್ತಿಗೆ ಕನ್ನಡ ಬರುತ್ತಿರಲಿಲ್ಲವೇ. ಅಷ್ಟಕ್ಕೂ ಕನ್ನಡ ಕನ್ನಡ ಎಂದು ಎಲ್ಲೆಲ್ಲೂ ಕೂಗುತ್ತಿರುವ ಸಮಯದಲ್ಲಿ ಇಂಥ ಫಲಕಗಳು, ಅದರಲ್ಲಿಯೂ ಸರ್ಕಾರಿ ಫಲಕಗಳು ಕನ್ನಡವನ್ನು ಗಬ್ಬೆಬ್ಬಿಸುತ್ತಿದೆ ಎಂದರೆ ತಪ್ಪಾಗಲಾರದು.

–ವಿಜಯ್ ಹೆಮ್ಮಿಗೆ, ಮೈಸೂರು

ಸೇವಾನಿರತ ಪದವೀಧರ ಶಿಕ್ಷಕರಿಗೆ ಶೀಘ್ರ ಬಡ್ತಿ ನೀಡಿ!

ಮಾನ್ಯರೆ,

ನಮ್ಮ ರಾಜ್ಯದ ಒಂದರಿಂದ ಎಂಟನೇ ತರಗತಿಯವರೆಗಿನ ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಲಕ್ಷಾಂತರ ಮಂದಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸರ್ಕಾರ ಒಂದರಿಂದ ಐದನೇ ತರಗತಿಯವರೆಗೆ ಬೋಧನೆ ಮಾಡುವ ಶಿಕ್ಷಕರನ್ನು ಪಿಎಸ್ ಟಿ ಶಿಕ್ಷಕ (ಪ್ರಾಥಮಿಕ ಶಿಕ್ಷಕ) ರೆಂದು ಹಾಗೂ ಆರರಿಂದ ಎಂಟನೇ ತರಗತಿಯವರೆಗೆ ಬೋಧನೆ ಮಾಡುತ್ತಿರುವ ಶಿಕ್ಷಕರನ್ನು ಜಿಪಿಟಿ ಶಿಕ್ಷಕ(ಪದವೀಧರ ಶಿಕ್ಷಕ)ರೆಂದು ಪರಿಗಣಿಸಿ ಅದರಂತೆ ಸರ್ಕಾರ 2017 ರಲ್ಲಿ ಹೊಸದಾಗಿ ನೇಮಕಾತಿ ವೃಂದವನ್ನು ಬದಲಾವಣೆ ಮಾಡಿದೆ. ಆದರೆ ಹಾಲಿ ಸೇವಾನಿರತ ಪಿಎಸ್‌ಟಿ ಪ್ರಾಥಮಿಕ ಪದವೀಧರರ ಶಿಕ್ಷಕರಿಗೆ ತಮ್ಮ ಸೇವೆಯನ್ನು ವಿಲೀನಗೊಳಿಸಿ ಮುಂಬಡ್ತಿ ನೀಡಬೇಕೆಂಬುದು ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಬಹುದಿನದ ಒತ್ತಾಸೆಯಾಗಿದೆ.

ರಾಜ್ಯದಲ್ಲಿ ಹಾಲಿ ಒಂದರಿಂದ ಎಂಟನೇ ತರಗತಿಗೆ ಪಾಠ ಮಾಡುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರಲ್ಲಿ ಸುಮಾರು 80,000ಕ್ಕಿಂತ ಹೆಚ್ಚು ಮಂದಿ ವಿವಿಧ ವಿಷಯಗಳಲ್ಲಿ ಪದವಿ ವಿದ್ಯಾರ್ಹತೆ ಹೊಂದಿದ ಶಿಕ್ಷಕರಿದ್ದಾರೆ. ಈ ಶಿಕ್ಷಕರು ಕಳೆದ 20–25 ವರ್ಷಗಳಿಂದ ಯಾವುದೇ ಬಡ್ತಿಯಿಲ್ಲದೇ ಒಂದೇ ಹುದ್ದೆಯಲ್ಲಿದ್ದುಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರೆಲ್ಲರೂ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (ಎನ್‌ಸಿಟಿಇ) ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿರುವ ಅರ್ಹ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದು, ಇವರೆಲ್ಲರನ್ನೂ ಸೇವಾ ಜೇಷ್ಠತೆಯೊಂದಿಗೆ ಮುಂಬಡ್ತಿ ನೀಡಿ, ಸದರಿ ಪ್ರಾಥಮಿಕ ಶಾಲಾ ಶಿಕ್ಷಕರು 6 ರಿಂದ 8ನೇ ತರಗತಿವರೆಗೆ ಹಾಗೂ ಪ್ರೌಢಶಾಲೆಗಳಿಗೆ ಮುಂಬಡ್ತಿ ಹೊಂದಿದರೂ ತಮ್ಮ 10,15,20,25 ಹಾಗೂ 30 ವರ್ಷಗಳ ಕಾಲಮಿತಿ ಬಡ್ತಿಯನ್ನು ಪಡೆಯಲು ಯಾವುದೇ ತೊಂದರೆ ಆಗದಂತೆ ಸರ್ಕಾರ ಅಭಯಹಸ್ತ ನೀಡಿ, ಹಾಲಿ ಇರುವ ನೇಮಕಾತಿ ವೃಂದಗಳಿಗೆ ಸೂಕ್ತ ತಿದ್ದುಪಡಿ ಹಾಗೂ ಬದಲಾವಣೆ ಮಾಡುವುದು ನ್ಯಾಯ ಸಮ್ಮತವಾಗಿದೆ. ಈ ಬಗ್ಗೆ ಸರ್ಕಾರ ಶೀಘ್ರವಾಗಿ ತೀರ್ಮಾನ ಕೈಗೊಂಡು ಆದಷ್ಟು ಬೇಗ ಸೂಕ್ತ ಆದೇಶ ಹೊರಡಿಸಬೇಕೆಂಬುದು ರಾಜ್ಯದ ಸಮಸ್ತ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಮನವಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ದಶಕಗಳ ಸಾಹಿತ್ಯದ ಮೊಗಸಾಲೆಯಲ್ಲಿ


ಬರೆಯುವುದನ್ನು ವೃತ್ತಿಯನ್ನಾಗಿ ಮಾಡಿಕೊಂಡವರು ಬೇರೆ. ಅದನ್ನು ಪ್ರವೃತ್ತಿಯನ್ನಾಗಿ ಮಾಡಿಕೊಂಡವರು ಬೇರೆ. ಎರಡನೆಯ ವರ್ಗಕ್ಕೆ ಸೇರಿದ ವಿಶಿಷ್ಟ ವ್ಯಕ್ತಿ ಜಯಪ್ರಕಾಶ ಪುತ್ತೂರು. 1972–73ರಿಂದ ಕನ್ನಡದಲ್ಲಿ ಬರೆಯುತ್ತಾ ಹೆಸರನ್ನು ಗಳಿಸಿರುವ ಈ ಜಯಪ್ರಕಾಶರು ಹಲುಸಾದ ಸಾಹಿತ್ಯ ಕೃಷಿಯನ್ನು ಮಾಡುತ್ತಾ ಬಂದಿದ್ದಾರೆ. ಇವರ ಇತ್ತೀಚಿನ (2023 ನವೆಂಬರ್) ಕೃತಿ **ದಶಕಗಳ ಸಾಹಿತ್ಯದ ಮೊಗಸಾಲೆಯಲ್ಲಿ**. ಇದು ಅವರು ಹೊಸದಾಗಿ ಬರೆದುದಲ್ಲ. ಹಿಂದಿನ ದಶಕಗಳಲ್ಲಿ ನಾನಾ ಪತ್ರಿಕೆಗಳಲ್ಲಿ ಬರೆದಿದ್ದ ಲೇಖನಗಳ ಸಂಕಲನ. ಇದನ್ನು ಸಪ್ನ ಬುಕ್ ಹೌಸ್ ಪ್ರಕಟಿಸಿದೆ. ಅದರಿಂದ ಪುಸ್ತಕದ ಅಂದ ಚಂದಗಳ ಬಗೆಗೆ ಬೇರೆ ಹೇಳಬೇಕಾಗಿಲ್ಲ.

ಈ ಪುಸ್ತಕದಲ್ಲಿ ಆರು ಭಾಗಗಳಿವೆ. ವ್ಯಕ್ತಿ–ಸಂದರ್ಶನಗಳು, ಸಂಸ್ಕೃತಿ–ಕಲೆಗಳು, ಸಾಧಕರು–ಸಾಧನೆಗಳು, ವಿಚಾರ–ವಿಶೇಷಗಳು, ಜೆ.ಪಿ.ಯವರ ಕೃತಿಗಳು–ವಿಮರ್ಶೆಗಳು, ಜೆ.ಪಿ.ಯವರನ್ನು ಕಂಡಂತೆ ಎಂದು ಆರು ಭಾಗಗಳ ಶೀರ್ಷಿಕೆಗಳು. (ಜೆ.ಪಿ. ಎಂದರೆ ಜಯಪ್ರಕಾಶ ಪುತ್ತೂರು). ಲೇಖಕರ ಅನುಭವ ದೊಡ್ಡದು. ಅವರು ಸಂದರ್ಶಿಸಿದ ವ್ಯಕ್ತಿಗಳು ಸ್ವನಾಮಧನ್ಯರು, ಎಂದರೆ ಅವರ ಹೆಸರೇ ಅವರ ಪರಿಚಯವನ್ನು ಕೊಡುತ್ತದೆ. ಕಾರಂತ, ಬಾಲು ಮಹೇಂದ್ರ, ಜಿ.ವಿ.ಅಯ್ಯರ್, ನೀನಾಸಂ ಸುಬ್ಬಣ್ಣ, ಗೋವಿಂದ ನಾರಾಯಣ ತ್ರಿಪಾಠಿ, ಎ.ಪಿ.ಜೆ.ಅಬ್ದುಲ್ ಕಲಾಂ ಮುಂತಾದವರು ಲೋಕ ವಿಖ್ಯಾತರು. ಇವರೆಲ್ಲರ ಆತ್ಮೀಯ ಪರಿಚಯ ಇಲ್ಲಿ ಲಭ್ಯ. ಸಂಸ್ಕೃತಿ–ಕಲೆಗಳು ಎಂಬ ಭಾಗದಲ್ಲಿ ರಾಮೇಶ್ವರ, ಬೃಹದೀಶ್ವರ ದೇವಾಲಯ ಎಂಬ ಕ್ಷೇತ್ರಗಳ ಪರಿಚಯವೂ ಸಿನಿಮಾ, ನಾಟಕ, ಜಲವರ್ಣ ಚಿತ್ರಗಳು, ತೈಲವರ್ಣ ಕೃತಿಗಳು ಮುಂತಾದವುಗಳ ಬಗೆಗೆ ತಿಳಿವಳಿಕೆಯನ್ನು ಕೊಡುವ ಲೇಖನಗಳಿವೆ. ಸಾಧಕರು–ಸಾಧನೆಗಳು ಎಂಬ ಮೂರನೆಯ ಭಾಗದಲ್ಲಿ ಎ.ಪಿ.ಜೆ.ಅಬ್ದುಲ್ ಕಲಾಂ ರಾಷ್ಟ್ರಪತಿ ಭವನದಲ್ಲಿ ತಂದ ಬದಲಾವಣೆಗಳು, ಯುದ್ಧ ವಿಮಾನ ತೇಜಸ್‌ನ ನಿರ್ಮಾಣ, ಕೊರೊನಾ ವಿರುದ್ಧ ಸಿಂಗಾಪುರ ಹೋರಾಟ ಇತ್ಯಾದಿ ವಿಚಾರಗಳಿವೆ. ವಿಚಾರ–ವಿಶೇಷಗಳು ಎಂಬ ಭಾಗದಲ್ಲಿ ಹಿರಿಯರಿಗೆ ಸುಖ ಸೂತ್ರಗಳು, ಸಾರ್ವಜನಿಕ ಸೇವೆ ಮುಂತಾದ ಉತ್ತಮ ಲೇಖನಗಳಿವೆ. ಐದನೆಯ ಭಾಗದಲ್ಲಿ ಜಯಪ್ರಕಾಶ ಪುತ್ತೂರರ ಕೃತಿಗಳ ಬಗೆಗೆ ಬೇರೆ ಲೇಖಕರು ಬರೆದ ಲೇಖನಗಳ ಸಂಗ್ರಹವಿದೆ. ಕೊನೆಯ ಭಾಗದಲ್ಲಿ ಲೇಖಕರನ್ನು ಇತರ ಲೇಖಕರು ಕಂಡಂತೆ ಬರೆದ ವ್ಯಕ್ತಿ ಚಿತ್ರಗಳಿವೆ.

ಜಯಪ್ರಕಾಶ ಪುತ್ತೂರು (ಜಯಪ್ರಕಾಶರಾವ್) ಅವರ ಲೇಖನಗಳಲ್ಲಿ ನಮಗೆ ತಿಳಿಯದ ಅನೇಕ ಬದುಕಿನ ಮಜಲುಗಳು ಗೋಚರಿಸುತ್ತವೆ. ಡಾ. ಶಿವರಾಮ ಕಾರಂತರು ಎಂತಹ ನಿಷ್ಠುರ ಸತ್ಯವಾದಿಯಾಗಿದ್ದರು ಎಂಬುದು ಗೊತ್ತಾಗುತ್ತದೆ.

"ಅರ್ಥವಿಲ್ಲದ ಆದರ್ಶವನ್ನು ಗಾಂಧೀಜಿ ಏಕೆ, ದೇವರು ಹೇಳಿದರೂ ಅನುಸರಿಸಲಾರೆ" "ರಾಷ್ಟ್ರ ಪ್ರಶಸ್ತಿ ವಿಷಯ ಅಷ್ಟೇನೂ ದೊಡ್ಡದಲ್ಲ. ಅಪೇಕ್ಷಿತವಾದುದೂ ಅಲ್ಲ"

ಇತ್ಯಾದಿ ಮಾತುಗಳನ್ನು ಹೇಳುವ ಧೈರ್ಯ ಕಾರಂತರಿಗಲ್ಲದೆ ಬೇರೆ ಯಾರಿಗೆ ಬಂದೀತು? ಯಾವ ರಾಜ್ಯದ ಭಾಷೆಯೂ ಅಲ್ಲದ, ಆದರೆ ಅಖಿಲ ಭಾರತದ ಭಾಷೆಯಾದ ಸಂಸ್ಕೃತದಲ್ಲಿ ಚಲನಚಿತ್ರಗಳನ್ನು ನಿರ್ಮಿಸಿ ರಾಷ್ಟ್ರ ಪ್ರಶಸ್ತಿಗಳನ್ನು ಪಡೆದ ಜಿ.ವಿ.ಅಯ್ಯರ್ ತಮ್ಮ ಸಂದರ್ಶನದಲ್ಲಿ ಹೇಳಿದ ಮಾತುಗಳು ಗಮನಾರ್ಹವಾಗಿವೆ. 'ಶಂಕರಾಚಾರ್ಯ' ಚಿತ್ರದಲ್ಲಿ ಅರ್ಘ್ಯ ಸಮರ್ಪಣೆಯ ದೃಶ್ಯದಲ್ಲಿ ಜರ್ಮನ್ ವೀಕ್ಷಕರೊಬ್ಬರು ಅದರಲ್ಲಿ ಜೀವನದಿಯ ಸಂಕೇತವನ್ನು ಕಂಡುಕೊಂಡರು. ಇಂತಹ ಶಕ್ತಿಯುಳ್ಳ ವೀಕ್ಷಕರಿದ್ದಾಗ ಅಯ್ಯರ್ ಅಂತಹ ನಿರ್ದೇಶಕರ ಶ್ರಮ ಸಾರ್ಥಕ. ಚಲನಚಿತ್ರದಲ್ಲಿ ಭಾಷೆ ಗೌಣ. ಅದು ದೃಶ್ಯ ಮಾಧ್ಯಮ.



ನೀನಾಸಂ ಸ್ಥಾಪಿಸಿದ ಕೆ.ವಿ.ಸುಬ್ಬಣ್ಣನವರ ಬಗೆಗೆ ಜಯಪ್ರಕಾಶರು ಬರೆದಿರುವ ಮಾತು 'ಅವರು ಹೆಗ್ಗೋಡಿಗೆ ಕಿರೀಟ ತೊಡಿಸಿದವರು' ಸತ್ಯ. ಅವರಿಲ್ಲದೆ ಹೆಗ್ಗೋಡು ದೇಶದ ನೂರಾರು ಹಳ್ಳಿಗಳಲ್ಲಿ ಒಂದಾಗಿರುತ್ತಿತ್ತು. ನಾಟಕ ಕಲೆಯ ಜೀವಸ್ಥಳ ಆಗಿರುತ್ತಿರಲಿಲ್ಲ.

ಕನ್ನಡಿಗ ವಿಜ್ಞಾನಿ ಡಾ. ವಾಸುದೇವ ಕಲ್ಕುಂಟೆ ಆತ್ರೆ ಅವರ ಬಗೆಗೆ ನನಗೆ ಏನೂ ಗೊತ್ತಿರಲಿಲ್ಲ. ಈ ಪುಸ್ತಕದಲ್ಲಿ ಅವರ ಬಗೆಗೆ ಇರುವ ಲೇಖನವನ್ನೂ ಸಂದರ್ಶನವನ್ನೂ ಓದಿದಾಗ ಕಣ್ತೆರೆದಂತಾಯಿತು. ಕಲಾಂ ಅವರು ರಾಷ್ಟ್ರಪತಿ ಸ್ಥಾನವನ್ನಲಂಕರಿಸಲು ದೆಹಲಿಗೆ ಹೋದಾಗ ಅವರ ಸ್ಥಾನವನ್ನು ತುಂಬಿದ ವಿಜ್ಞಾನಿಯೇ ಆತ್ರೆಯವರು. ವಿಜ್ಞಾನದಲ್ಲಿ ಮೇರು ಪರ್ವತದಷ್ಟು ಎತ್ತರವಾದ ಸಾಧನೆಯನ್ನು ಮಾಡಿದ್ದರೂ ಸಾಹಿತ್ಯದಲ್ಲಿ ಅವರ ಅಭಿಮಾನ ಪ್ರಶಂಸಾರ್ಹ. ಸಂದರ್ಶನದಲ್ಲಿ ಅವರು ಹೇಳಿದ್ದಾರೆ "ವಿದ್ಯಾರ್ಥಿ ದೆಶೆಯಲ್ಲಿಯೇ ಕಾಳಿದಾಸನ ಕೃತಿಗಳನ್ನು, ರಾಮಾಯಣ ಮಹಾಭಾರತಗಳನ್ನು ಓದಿಕೊಂಡೆ. ಹೀಗಾಗಿ ತರಾಸು, ಗೊರೂರು ರಾಮಸ್ವಾಮಿ ಅಯ್ಯಂಗಾರರು ಹಾಗೂ ಎಸ್.ಎಲ್.ಭೈರಪ್ಪನವರ ಕೃತಿಗಳನ್ನು ನಾನು ಬಹಳ ಮೆಚ್ಚಿಕೊಂಡಿದ್ದೇನೆ. ಹಾಗೆಯೇ ಶಾಸ್ತ್ರೀಯ ಸಂಗೀತದ ಹುಚ್ಚಿನಲ್ಲಿ ಸಂಗೀತದ ಕ್ಷೇತ್ರದಲ್ಲಿಯೂ ಸಂಗ್ರಹ ಆರಂಭಿಸಿದ್ದೆ. ಪುಸ್ತಕ ಮತ್ತು ಸಂಗೀತಗಳ ಸಾಹಚರ್ಯ ಬಿಟ್ಟು ನಾನು ಬದುಕಲಾರೆ ಎಂಬಷ್ಟು ಆಸಕ್ತಿ ಹೊಂದಿದ್ದೆ."

ಮಾನವತಾವಾದಿ ವಿಜ್ಞಾನಿ ಸೆಲ್ವಮೂರ್ತಿ ಎಂಬ ಲೇಖನವೂ ವಿಚಾರಬೋಧಕವಾಗಿದೆ. ನಮ್ಮನ್ನು ರಕ್ಷಿಸುವ ಸೈನಿಕರನ್ನು ಸುರಕ್ಷಿತವಾಗಿ ಇಡುವುದರಲ್ಲಿ ವಿಜ್ಞಾನ ಎಷ್ಟು ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ಅದಕ್ಕಾಗಿ ಸೆಲ್ವಮೂರ್ತಿಯಂತಹ ವಿಜ್ಞಾನಿಗಳು ಎಷ್ಟು ದುಡಿಯುತ್ತಿದ್ದಾರೆ ಎಂದು ತಿಳಿದುಕೊಳ್ಳಲು ಎಲ್ಲರೂ ಈ ಲೇಖನವನ್ನು ಆಮೂಲಾಗ್ರವಾಗಿ ಓದಬೇಕು. ಇದೇ ರೀತಿಯಲ್ಲಿ 'ಡಿಆರ್‌ಡಿಓ ಬೆಳೆಸಿದ ಭೀಷ್ಮ ಡಾ.ಅರುಣಾಚಲಂ' ಎಂಬ ಲೇಖನವೂ ನಮ್ಮ ದೇಶದ ವಿಜ್ಞಾನಿಗಳಲ್ಲಿ ಅಭಿಮಾನವನ್ನು ಬೆಳೆಸುತ್ತದೆ. ಇಂತಹ ವಿಜ್ಞಾನಿಗಳಿಂದ ನಾವು ಜಗತ್ತಿನಲ್ಲಿ ತಲೆಯೆತ್ತಿ ನಿಲ್ಲಲು ಸಾಧ್ಯವಾಗುತ್ತಿದೆ. ಸುದ್ದಿ ಮಾಧ್ಯಮದ ಮುತ್ಸದ್ದಿ ರಾಮ ಮೋಹನರಾವ್, ಡಾ. ಸಿ.ಜೆ.ಕೆ. ನಾಯರ್ ಮುಂತಾದವರ ಬಗೆಗೆ ಇರುವ ಲೇಖನಗಳೂ ರಮ್ಯ ಮನೋಹರವಾಗಿವೆ.

ದ್ವಾದಶ ಜ್ಯೋತಿರ್ಲಿಂಗ ಕ್ಷೇತ್ರಗಳಲ್ಲಿ ಒಂದಾದ ರಾಮೇಶ್ವರವನ್ನು ಅದರ ಸುತ್ತಮುತ್ತ ಇರುವ ಪವಿತ್ರ ಸ್ಥಳಗಳನ್ನೂ ಪರಿಚಯಿಸುವ ಲೇಖನ ಅತ್ಯಂತ ಮನೋಜ್ಞವಾಗಿದೆ. ರಾಮೇಶ್ವರಕ್ಕೆ ಹೋಗಲು ಬಯಸುವ ಯಾತ್ರಿಕರು ಈ ಲೇಖನವನ್ನು ಓದಿಕೊಂಡು ಹೋದರೆ ಯಾತ್ರೆ ಅರ್ಥವತ್ತಾಗುತ್ತದೆ. ರಾಮೇಶ್ವರ ದೇವಸ್ಥಾನದ ಬೃಹತ್ತ್ವ ಮತ್ತು ಮಹತ್ತ್ವಗಳು ಊಹಾತೀತ. ಅನೇಕ ಐತಿಹಾಸಿಕ ವಿಷಯಗಳ ಮೇಲೆ ಕೂಡ ಈ ಲೇಖನ ಬೆಳಕನ್ನು ಚೆಲ್ಲುತ್ತದೆ. ಶ್ರೀಲಂಕಾ ದೇಶದ ರಾಜ ಪರಾಕ್ರಮ ಬಾಹು ಹನ್ನೆರಡನೆಯ ಶತಮಾನದಲ್ಲಿ ಈ ದೇವಾಲಯದ ನಿರ್ಮಾಣ ಕಾರ್ಯವನ್ನು ಆರಂಭಿಸಿದನೆಂಬುದು ಎಷ್ಟು ಜನರಿಗೆ ಗೊತ್ತು? ಅಮೂಲ್ಯ ಮಾಹಿತಿ ಕಣಜ ಈ ಲೇಖನ. ಇದೇ ರೀತಿ ತಂಜಾವೂರಿನ ಬೃಹದೀಶ್ವರ ದೇವಾಲಯದ ಬಗೆಗೆ ಇರುವ ಲೇಖನವೂ ಅವಶ್ಯ ಪಠನೀಯ. ರಾಜರಾಜ ಚೋಳನು ನಿರ್ಮಿಸಿದ ಈ ದೇವಾಲಯ ಶಿಲ್ಪಕಲೆಯ ಒಂದು ವಿಸ್ಮಯ.

ಈ ಪುಸ್ತಕದಲ್ಲಿ ಇನ್ನೂ ಹಲವಾರು ಲೇಖನಗಳಿವೆ. ಎಲ್ಲಾ ಲೇಖನಗಳ ಪರಿಚಯವನ್ನು ಮಾಡಿಸಲು ಇಲ್ಲಿ ಅವಕಾಶವಿಲ್ಲ. **ಸಾರ್ವಜನಿಕ ಸೇವೆಯ ಮಹತ್ತ್ವ ತಿಳಿದಿರಲಿ** ಎಂಬ ಲೇಖನ ಹೊಸ ಸ್ಥಳಕ್ಕೆ ಹೋದಾಗ ಪಡಬೇಕಾದ ಕಷ್ಟಗಳ ಬಗೆಗೆ ಹೇಳುತ್ತದೆ. ಹೆಸರಿನ ಗೊಂದಲ ಎಷ್ಟೋ ಸಮಸ್ಯೆಗಳನ್ನು ವಿಮಾನ ಪ್ರಯಾಣದಲ್ಲಿ, ಹೋಟೆಲುಗಳಿಗೆ ಹೋದ ಸಂದರ್ಭಗಳಲ್ಲಿ ಎದುರಿಸಬೇಕಾಗುತ್ತದೆ. ಇದನ್ನೆಲ್ಲಾ ಲೇಖಕರು ಸ್ವಾನುಭವದಿಂದ ಹೇಳಿರುವುದು ಸ್ವಾಗತಾರ್ಹ. ಅನೇಕ ಪತ್ರಿಕೆಗಳಲ್ಲಿ ಆಗಾಗ ಬರೆದಿದ್ದ ಲೇಖನಗಳನ್ನು ಸಂಗ್ರಹಿಸಿ ಎಲ್ಲ ಓದುಗರಿಗೆ ಸಿಕ್ಕುವಂತೆ ಮಾಡಿರುವ ಲೇಖಕ ಜಯಪ್ರಕಾಶ್ ಪುತ್ತೂರು ಅವರಿಗೆ ಹಾರ್ದಿಕ ಅಭಿನಂದನೆಗಳು.

ದೇಶದಲ್ಲಿ 390 ಹೊಸ ವಿಶ್ವವಿದ್ಯಾನಿಲಯಗಳ ಸ್ಥಾಪನೆ

ನವದೆಹಲಿ, ಫೆ.1– ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಗುಣಮಟ್ಟದ ಬೋಧನೆ ಮತ್ತು ಸಮಗ್ರ, ಸುಸಂಘಟಿತ ವ್ಯಕ್ತಿಗಳನ್ನು ಪೋಷಿಸಲು ಸರ್ಕಾರ ಗಮನಹರಿಸುತ್ತಿದೆ ಎಂದು ಹೇಳಿದರು.

ಉನ್ನತ ಶಿಕ್ಷಣಕ್ಕೆ ಸರ್ಕಾರ ವಿಶೇಷ ಗಮನ ಹರಿಸಿದೆ. ಕಳೆದ 10 ವರ್ಷಗಳಲ್ಲಿ, ಒಟ್ಟು 390 ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಗಿದೆ. 7 ಹೊಸ ಐಐಟಿಗಳು, 16 ಐಐಐಟಿಗಳು, 7 ಐಐಎಂಗಳು, 15 ಎಐಐಎಂಎಸ್, 3,000 ಹೊಸ ಐಟಿಐಗಳನ್ನೂ ಸ್ಥಾಪಿಸಲಾಗಿದೆ ಎಂದು ಹೇಳಿದರು.

STEM ಕೋರ್ಸ್‌ಗಳಲ್ಲಿ (Science, Technology, Engineering, and Mathematics) ಕಳೆದ 10 ವರ್ಷಗಳಲ್ಲಿ ಉನ್ನತ ಶಿಕ್ಷಣದಲ್ಲಿ ಮಹಿಳಾ ದಾಖಲಾತಿ ಶೇ.28ರಷ್ಟು ಹೆಚ್ಚಾಗಿದೆ. STEM ಕೋರ್ಸ್‌ಗಳಿಗೆ ದಾಖಲಾದ ವಿದ್ಯಾರ್ಥಿಗಳಲ್ಲಿ ಶೇ.43ರಷ್ಟು ಮಹಿಳೆಯರಾಗಿದ್ದಾರೆಂದು ತಿಳಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ 2020 ಉದಯೋನ್ಮುಖ ಭಾರತಕ್ಕಾಗಿ ಶಾಲೆಗಳಲ್ಲಿ ಸುಧಾರಣೆಗಳನ್ನು ಪರಿವರ್ತಿಸುವ ಗುರಿಯನ್ನು ಹೊಂದಿದೆ ಪಿಎಂ ಶ್ರೀ ಶಾಲೆಯು ಗುಣಮಟ್ಟದ ಬೋಧನೆಯನ್ನು ನೀಡಲು ಮತ್ತು ಸಮಗ್ರ ಮತ್ತು ಸುಸಜ್ಜಿತ ವ್ಯಕ್ತಿಗಳನ್ನು ಪೋಷಿಸಲು ಕೇಂದ್ರೀಕರಿಸಿದೆ. ಈ ವರ್ಷ ಒಟ್ಟು 15 ಹೊಸ ಎಐಐಎಂಗಳನ್ನು ಪ್ರಾರಂಭಿಸಲಾಗಿದೆ. ಆಸ್ಪತ್ರೆಯ ಮೂಲಸೌಕರ್ಯವನ್ನು ಬಳಸಿಕೊಂಡು ಹೆಚ್ಚಿನ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಸರ್ಕಾರ ಚಿಂತಿಸುತ್ತಿದೆ.

ಸ್ಕಿಲ್ ಇಂಡಿಯಾ ಮಿಷನ್ 1.4 ಕೋಟಿ ಯುವಕರಿಗೆ ತರಬೇತಿ ನೀಡಿದೆ. 54 ಲಕ್ಷ ಯುವಕರಿಗೆ ಕೌಶಲ್ಯ ಮತ್ತು ಪುನರ್ ಕೌಶಲ್ಯವನ್ನು ನೀಡಿದೆ. ಕಡಿಮೆ ಬಡ್ಡಿ ದರದೊಂದಿಗೆ ಶಿಕ್ಷಣ ಸಾಲದಲ್ಲಿ ದೀರ್ಘಾವಧಿಯ ಹಣಕಾಸು ಮತ್ತು ಮರು–ಹಣಕಾಸು ಒದಗಿಸುವ ನಿಧಿ ಸ್ಥಾಪಿಸುವ ಗುರಿಯನ್ನು ಸರ್ಕಾರ ಹೊಂದಿದೆ ಎಂದು ಹೇಳಿದರು.

ರಕ್ಷಣಾ ವಲಯಕ್ಕೆ 11 ಲಕ್ಷ ಕೋಟಿ ಅನುದಾನ

ನವದೆಹಲಿ, ಫೆ.1– ಪ್ರತಿ ಬಜೆಟ್‌ನಲ್ಲೂ ರಕ್ಷಣಾ ವಲಯಕ್ಕೆ ಮೊದಲ ಆದ್ಯತೆ ನೀಡಲಾಗುತ್ತದೆ. ಈ ಬಾರಿಯೂ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ರಕ್ಷಣಾ ವಲಯಕ್ಕೆ 11 ಲಕ್ಷ ಕೋಟಿ ರೂ ಮೀಸಲಿಟ್ಟಿದ್ದಾರೆ.

ಇದು ಕಳೆದ ಬಾರಿಗಿಂತ ಶೇ.11ರಷ್ಟು ಹೆಚ್ಚಾಗಿದೆ. ಇದು ಜಿಡಿಪಿಯ ಶೇ.3.4 ರಷ್ಟಿದೆ. ಕಳೆದ ಬಜೆಟ್‌ನಲ್ಲಿ 5.93 ಲಕ್ಷ ಕೋಟಿ ರೂಪಾಯಿ ಮೀಸಲಿಸಲಾಗಿತ್ತು. ಇದು ಜಿಡಿಪಿಯ ಶೇ.1.9ರಷ್ಟಿತ್ತು.

ಸದ್ಯ ಗಾಜಾ–ಉಕ್ರೇನ್ ಮತ್ತು ಇಸ್ರೇಲ್–ಹಮಾಸ್ ನಡುವೆ ಯುದ್ಧ ನಡೆಯುತ್ತಿದೆ ಈ ಹಿನ್ನೆಲೆಯಲ್ಲಿ ರಕ್ಷಣಾ ವಲಯಕ್ಕೆ ಹೆಚ್ಚಿನ ಅನುದಾನ ನೀಡುವ ಅಗತ್ಯವಿದೆ ಎಂದು ರಕ್ಷಣಾ ತಜ್ಞ ಏರ್‌ವೇಸ್ ಮಾರ್ಷಲ್ ಮನೋಹರ್ ಬಹದ್ದೂರ್ ಅಭಿಪ್ರಾಯಪಟ್ಟಿದ್ದರು.

2022ರಲ್ಲಿ ಶಸ್ತ್ರಾಸ್ತ್ರಗಳಿಗಾಗಿಯೇ 1.52 ಲಕ್ಷ ಕೋಟಿ ರೂ. ಹಣವನ್ನು ಮೀಸಲಿಟ್ಟಿತ್ತು.



ಇದರಲ್ಲೀಗ ಶೇ.6.5ರಷ್ಟು ಹೆಚ್ಚಳಗೊಂಡಿದೆ. 2022–23ರಲ್ಲಿ ಶೇ. 12 ಮತ್ತು 2021–22ರಲ್ಲಿ ಶೇ.19ರಷ್ಟಿತ್ತು. ಸದ್ಯ ಭಾರತ 85 ದೇಶಗಳಿಗೆ ತನ್ನ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದೆ. 2016ಕ್ಕೆ ಹೋಲಿಸಿದರೆ ಭಾರತದ ರಕ್ಷಣಾ ರಫ್ತು 10 ಪಟ್ಟು ಹೆಚ್ಚಾಗಿದೆ. ನೌಕಾಪಡೆಗೆ 26 ರಫೇಲ್ ವಿಮಾನಗಳನ್ನು ಖರೀದಿಸಲು ಅನುಮೋದನೆ ನೀಡಲಾಗಿದೆ.

31 MQ-9B ರೀಪರ್ ಡ್ರೋನ್‌ಗಳನ್ನು ಖರೀದಿಸಲು ಅಮೇರಿಕದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಭಾರತ ಮತ್ತು ಅಮೆರಿಕ ಜಂಟಿಯಾಗಿ ಸ್ಟ್ರೈಕರ್ ಶಸ್ತ್ರಸಜ್ಜಿತ ಯುದ್ಧ ವಾಹನವನ್ನು ನಿರ್ಮಿಸಲು ಒಪ್ಪಿಕೊಂಡಿವೆ.

ಮಧ್ಯಮ ವರ್ಗದವರಿಗೆ ವಸತಿ ಯೋಜನೆ

ನವದೆಹಲಿ, ಫೆ.1– ಸಮಾಜದಲ್ಲಿನ ಮಧ್ಯಮ ವರ್ಗದವರು ಸ್ವಂತ ಮನೆ ಹೊಂದಲು ಕೇಂದ್ರ ಸರ್ಕಾರವು ವಸತಿ ಯೋಜನೆಯನ್ನು ಪ್ರಾರಂಭಿಸಲಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಗ್ರಾಮೀಣ ವಸತಿ ಯೋಜನೆಯಡಿ ದೇಶದಲ್ಲಿ ಮೂರು ಕೋಟಿ ಮನೆಗಳ ಗುರಿಯನ್ನು ಸಾಧಿಸುವ ಸಮೀಪದಲ್ಲಿ ಇದ್ದೇವೆ. ಮುಂದಿನ ಐದು ವರ್ಷಗಳಲ್ಲಿ ಇನ್ನೂ ಎರಡು ಕೋಟಿ ಮನೆಗಳನ್ನು ನಿರ್ಮಿಸಲಾಗುವುದು ಎಂದು ಹೇಳಿದರು.


ತನ್ನ ಚುನಾವಣಾ ಪೂರ್ವ ಮಧ್ಯಂತರ ಬಜೆಟ್‌ನಲ್ಲಿ, ಸುಸ್ಥಿರ ಅಭಿವೃದ್ಧಿ ಮತ್ತು ಉತ್ಪಾದಕತೆಯನ್ನು ಸುಧಾರಿಸುವ ಆರ್ಥಿಕ ವಿಧಾನವನ್ನು ಸರ್ಕಾರವು ಅಳವಡಿಸಿಕೊಳ್ಳಲಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ

ಮೀನುಗಾರಿಕೆಗೆ ಹೊಸ ಸಚಿವಾಲಯ

ನವದೆಹಲಿ, ಫೆ.1– ಕೇಂದ್ರ ಸರ್ಕಾರ ಮೀನುಗಾರಿಕೆಗೆ ಹೊಸ ಸಚಿವಾಲಯ ಸ್ಥಾಪಿಸಲಿದೆ ಎಂದು ನಿರ್ಮಲಾ ಸೀತಾರಾಮನ್ ಘೋಷಣೆ ಮಾಡಿದ್ದಾರೆ. ಮೀನುಗಾರಿಕೆಗೆ ಹೊಸ ಸಚಿವಾಲಯ ಸ್ಥಾಪಿಸುವುದರ ಜೊತೆಗೆ ಮೀನುಗಾರಿಕೆ ಯೋಜನೆಯನ್ನು ಸರ್ಕಾರ ಉತ್ತೇಜಿಸುತ್ತದೆ ಎಂದು ಹೇಳಿದರು. ರೈತರಿಗೆ ಆಧುನಿಕ ತಂತ್ರಜ್ಞಾನದ ಸಹಾಯಕ್ಕಾಗಿ ನ್ಯಾನೋ ಯೂರಿಯಾ ಎಲ್ಲಾ ವಲಯಗಳಿಗೆ ವಿಸ್ತರಣೆ ಮಾಡಲಾಗಿದೆ. ಆತ್ಮನಿರ್ಭರ್ ಆಯಿಲ್ ಸೀಡ್ ಅಭಿಯಾನ ಆರಂಭಿಸಲಾಗಿದೆ. ಎಣ್ಣೆಬೀಜಗಳಲ್ಲಿ ಆತ್ಮನಿರ್ಭರತೆಗಾಗಿ ಹೆಚ್ಚಿನ ಒತ್ತು ನೀಡಲಾಗಿದೆ. ಹೈನುಗಾರಿಕೆ ರೈತರಿಗೆ ಹಾಲು ಹೆಚ್ಚಳಕ್ಕೆ ಯೋಜನೆ. ಡೇರಿಗೆ ಮೂಲಸೌಕರ್ಯಗಳ ಹೆಚ್ಚಳ ಮಾಡಲಾಗುತ್ತಿದೆ ಎಂದು ತಿಳಿಸಿದರು. ಮತ್ಸ್ಯ ಸಂಪದ ಯೋಜನೆಯಿಂದ ಮೀನುಗಾರರಿಗೆ ನೆರವು ನೀಡಲಾಗಿದೆ ಮತ್ಸ್ಯ ಸಂಪದ ಯೋಜನೆ ಮೂಲಕ 55 ಲಕ್ಷ ಉದ್ಯೋಗ ಸೃಷ್ಟಿಯ ಗುರಿಯನ್ನು ಹೊಂದಲಾಗಿದೆ ಎಂದು ಹೇಳಿದರು.

ಕ್ರೀಡಾಪಟುಗಳಿಗೆ ಶೇ.2ರಷ್ಟು ಮೀಸಲಾತಿ

ಬೆಂಗಳೂರು, ಫೆ.1–ಕ್ರೀಡಾಪಟುಗಳಿಗೆ ಶೇ.2ರಷ್ಟು ಮೀಸಲಾತಿ ಕಲ್ಪಿಸುವ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಕರ್ನಾಟಕ ಸಿವಿಲ್ ಸೇವಾ(ಸಾಮಾನ್ಯ ನೇಮಕಾತಿ)(ತಿದ್ದುಪಡಿ)ನಿಯಮಗಳು, 2024ಕ್ಕೆ ಸಂಬಂಧಿಸಿದಂತೆ ಗೆಜೆಟ್ ಅಧಿಸೂಚನೆ ಹೊರಡಿಸಿದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಿದ ನಂತರ ರಾಜ್ಯ ಸಿವಿಲ್ ಸೇವೆಗಳ ನೇರ ನೇಮಕಾತಿಯಲ್ಲಿ ಕ್ರೀಡಾಪಟುಗಳಿಗೆ ಶೇಕಡ.2 ರಷ್ಟು ಮೀಸಲಾತಿ ನೀಡುವ ಬಗ್ಗೆ ಸಚಿವ ಸಂಪುಟ ನಿರ್ಧರಿಸಿತು.



ಬಡ್ಡಿ ಮನ್ನಾಕ್ಕೆ ಅನುಮೋದನೆ: ರಾಜ್ಯದ ಸಹಕಾರ ಸಂಘಗಳ ಮೂಲಕ ರೈತರು ಸಾಲ ಪಡೆದು 31–12–2023 ಕ್ಕೆ ಸುಸ್ತಿಯಾಗಿರುವ ಮಧ್ಯಾಮಾವಧಿ, ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳ ಅಸಲು ಪಾವತಿಸಿದಲ್ಲಿ ಅದರ ಮೇಲಿನ ಒಟ್ಟು 440.20 ಕೋಟಿ ರೂ.ಗಳ ಬಡ್ಡಿ ಮನ್ನಾ ಮಾಡುವ ಸಂಬಂಧ ಹೊರಡಿಸಿದ್ದ 20–01–2024ರ ಸರ್ಕಾರಿ ಆದೇಶಕ್ಕೆ ಘಟನೋತ್ತರ ಅನುಮೋದನೆಯನ್ನು ನೀಡಲಾಗಿದೆ.

ಕೃಷಿ ರೈತ ಕಲ್ಯಾಣಕ್ಕೆ 1.27 ಲಕ್ಷ ಕೋಟಿ

ನವದೆಹಲಿ, ಫೆ.1– ಕೇಂದ್ರ ಬಜೆಟ್‌ನಲ್ಲಿ ಅತೀ ಕಡಿಮೆ ಅನುದಾನವನ್ನು ಕೃಷಿ ಕ್ಷೇತ್ರಕ್ಕೆ ನೀಡಲಾಗಿದೆ. ನಿರ್ಮಲಾ ಸೀತಾರಾಮನ್ ಕೃಷಿ ಬಗ್ಗೆ ಮಾತನಾಡಿದ್ದು, ಕೊಯ್ಲಿನ ನಂತರದ ಕೃಷಿ ಚಟುವಟಿಕೆಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಹೂಡಿಕೆಗಳನ್ನು ಉತ್ತೇಜಿಸುವುದಾಗಿ ತಿಳಿಸಿದ್ದಾರೆ.



ಇನ್ನು ಈ ಬಾರಿಯ ಬಜೆಟ್‌ನಲ್ಲಿ ಪಿಎಂ ಕಿಸಾನ್ ಯೋಜನೆಯ ಮೊತ್ತವನ್ನು ವರ್ಷಕ್ಕೆ 6000 ದಿಂದ 7,500–8000 ರೂಪಾಯಿಗಳಿಗೆ ಏರಿಕೆ ಮಾಡಲಾಗುತ್ತದೆ ಎಂಬ ನಿರೀಕ್ಷೆ ಇತ್ತಾದರೂ ಇದರಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ. ಪಿಎಂ ಕಿಸಾನ್ ಯೋಜನೆಯಡಿಯಲ್ಲಿ 11.8 ಕೋಟಿ ರೈತರಿಗೆ ನೆರವು ಸಿಕ್ಕಿದೆ ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಹಾಲು, ಡೈರಿ ಉತ್ಪಾದನೆ ಹೆಚ್ಚಿಸುವ ಪ್ರಸ್ತಾಪ

ನವದೆಹಲಿ, ಫೆ.1– ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ದೇಶದಲ್ಲಿ ಹಾಲು ಮತ್ತು ಡೈರಿ ಉತ್ಪಾದನೆಯನ್ನು ಹೆಚ್ಚಿಸುವ ಯೋಜನೆಯನ್ನು ಪ್ರಕಟಿಸಿದ್ದಾರೆ. ಭಾರತ ವಿಶ್ವದಲ್ಲೇ ಅತೀ ಹೆಚ್ಚು ಹಾಲು ಉತ್ಪಾದಿಸುವ ರಾಷ್ಟ್ರವಾಗಿದೆ. ಆದರೆ ಕಡಿಮೆ ಉತ್ಪಾದಕತೆ ಹೊಂದಿದೆ. ಹೀಗಾಗಿ ಡೈರಿಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹಣಕಾಸು ಸಚಿವೆ ಹೇಳಿದ್ದಾರೆ. 2022–23ರಲ್ಲಿ ಭಾರತದ ಹಾಲಿನ ಉತ್ಪಾದನೆಯು 230.58 ಮಿಲಿಯನ್ ಟನ್‌ಗಳಿಗೆ ಅಂದರೆ ಶೇ.4ರಷ್ಟು ಏರಿಕೆಯಾಗಿದೆ. ಎಣ್ಣೆಕಾಳುಗಳ ಉತ್ಪಾದನೆಗೆ ಆತ್ಮ ನಿರ್ಭರತ್ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದ್ದಾರೆ. ಕೃಷಿ ವಲಯದಲ್ಲಿ ಮೌಲ್ಯವರ್ಧನೆ ಮತ್ತು ರೈತರ ಆದಾಯವನ್ನು ಹೆಚ್ಚಿಸುವ ಪ್ರಯತ್ನಗಳನ್ನು ಹೆಚ್ಚಿಸಲಾಗುವುದು ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳು ಪರಿಶೀಲಿಸಿದ ನಂತರ

ಮೂವರ ಬಲಿ ಪಡೆದ ಅವೈಜ್ಞಾನಿಕ ರೋಡ್ ಹಂಪ್ಸ್ ಅಂತೂ ತೆರವು



ಬೋಗಾದಿ ರಸ್ತೆಯ ಗಂಗೋತ್ರಿ ಬಳಿ ಅಳವಡಿಸಿದ್ದ ರೋಡ್ ಹಂಪ್ ಅನ್ನು ಬುಧವಾರ ರಾತ್ರಿ ತೆರವುಗೊಳಿಸಿರುವುದು

ಮೈಸೂರು, ಫೆ.1(ಆರ್‌ಕೆ)– ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳು ಪರಿಶೀಲಿಸಿ ನೀಡಿದ ವರದಿ ಹಿನ್ನೆಲೆಯಲ್ಲಿ ಮೂವರನ್ನು ಬಲಿ ತೆಗೆದುಕೊಂಡಿದ್ದ ಮೈಸೂರಿನ ಭೋಗಾದಿ ರಸ್ತೆಯ ಅವೈಜ್ಞಾನಿಕ ರೋಡ್ ಹಂಪ್‌ಗಳನ್ನು ಮೈಸೂರು ಮಹಾನಗರಪಾಲಿಕೆಯು ಬುಧವಾರ ರಾತ್ರಿ ತೆರವುಗೊಳಿಸಿದೆ.

ಮೈಸೂರು ಮಹಾನಗರಪಾಲಿಕೆ ವಲಯ ಕಚೇರಿ–4ರ ಅಧಿಕಾರಿಗಳು ಆಯಿಷ್ ಸರ್ಕಲ್‌ನಿಂದ ಕುಕ್ಕರಹಳ್ಳಿ ಕೆರೆ ಜಂಕ್ಷನ್ ವರೆಗೆ ಬೋಗಾದಿ ರಸ್ತೆಯ 4 ಕಡೆ ರಾತ್ರೋರಾತ್ರಿ ಅವೈಜ್ಞಾನಿಕವಾಗಿ ರಸ್ತೆ ಡುಬ್ಬ ಅಳವಡಿಸಿದ್ದರು. ಬಿಳಿ ಪಟ್ಟೆ ಬಳಿದು, ಸೂಚನಾ ಫಲಕವನ್ನಾಗಲೀ ಅಥವಾ ಬ್ಯಾರಿಕೇಡ್‌ಗಳನ್ನು ಹಾಕದೇ ನಿರ್ಲಕ್ಷ್ಯ ವಹಿಸಿದ್ದರಿಂದ ದ್ವಿಚಕ್ರ ವಾಹನ ಸವಾರರು ನಿಯಂತ್ರಣ ತಪ್ಪಿ ಬಿದ್ದು ಮೂವರು ಯುವಕರು ಸಾವನ್ನಪ್ಪಿದ್ದರು.

ಅವೈಜ್ಞಾನಿಕವಾಗಿ ಡುಬ್ಬ ಅಳವಡಿಸಿ ಸುರಕ್ಷತಾ ಕ್ರಮ ವಹಿಸದಿರುವುದೇ ಅಪಘಾತಕ್ಕೆ ಕಾರಣ ಎಂದು ಪೊಲೀಸರು ಹೇಳಿದ ಹಿನ್ನೆಲೆಯಲ್ಲಿ ನಗರಪಾಲಿಕೆ ಅಧಿಕಾರಿಗಳು ಹಂಪ್‌ಗಳಿಗೆ ಬಿಳಿ ಬಣ್ಣ ಬಳಿದು, ರಿಫ್ಲೆಕ್ಟರ್‌ಗಳನ್ನು ಹಾಕಿದ್ದರು. ನಿನ್ನೆಯಷ್ಟೇ ಸಂಚಾರ ಪೊಲೀಸರು ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳಿಂದ ಸ್ಥಳ ಪರಿಶೀಲನೆ ನಡೆಸಿ ವರದಿ ತರಿಸಿಕೊಂಡಿದ್ದರು.

ಭೋಗಾದಿ ರಸ್ತೆಯಲ್ಲಿ ನಿರ್ಮಿಸಿರುವ ರೋಡ್ ಹಂಪ್‌ಗಳು ಇಂಡಿಯನ್ ರೋಡ್ ಕಾಂಗ್ರೆಸ್ ಸ್ಪಸಿಫಿಕೇಷನ್‌ಗೆ ವಿರುದ್ಧವಾಗಿದ್ದು, ಸಂಚಾರಕ್ಕೆ ಸುರಕ್ಷಿತವಲ್ಲ. ಈ ಅವೈಜ್ಞಾನಿಕ ಹಂಪ್‌ಗಳನ್ನು ತೆರವುಗೊಳಿಸಿ ನಿಯಮಾನುಸಾರ ಅಳವಡಿಸುವುದು ಸೂಕ್ತ ಎಂದು ಇಂಜಿನಿಯರ್‌ಗಳು ವರದಿ ನೀಡಿದ ಪರಿಣಾಮ ಬುಧವಾರ ರಾತ್ರಿಯೇ ಭೋಗಾದಿ ರಸ್ತೆಯ ರೋಡ್ ಹಂಪ್‌ಗಳನ್ನು ಜೆಸಿಬಿ ಸಹಾಯದಿಂದ ಪಾಲಿಕೆ ಅಧಿಕಾರಿಗಳು ತೆರವುಗೊಳಿಸಿದ್ದಾರೆ. ನಿನ್ನೆ (ಜ.31) ಯಷ್ಟೇ ಮಾಜಿ ಶಾಸಕ ಎಲ್.ನಾಗೇಂದ್ರ ಅವರು ಮೂವರನ್ನು ಬಲಿ ತೆಗೆದುಕೊಂಡ ಅಪಾಯಕಾರಿ ಅವೈಜ್ಞಾನಿಕ ರೋಡ್ ಹಂಪ್‌ಗಳನ್ನು ತೆರವುಗೊಳಿಸುವಂತೆ ಪಾಲಿಕೆ ಹಾಗೂ ಪೊಲೀಸ್ ಅಧಿಕಾರಿಗಳಿಗೆ ತಾಕೀತು ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಹೊಸದಾಗಿ ರೋಡ್ ಹಂಪ್ ನಿರ್ಮಿಸಬೇಕೆಂದರೆ, ಜಿಲ್ಲಾಧಿಕಾರಿ ನೇತೃತ್ವದಲ್ಲಿರುವ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ನಿರ್ದೇಶನದಂತೆ ಭಾರತೀಯ ರೋಡ್ ಕಾಂಗ್ರೆಸ್ ನಿಯಮಾನುಸಾರ ಸುರಕ್ಷಿತವಾಗಿ ಅಳವಡಿಸಬೇಕಾಗುತ್ತದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಕಿಲ್ಲರ್ ರೋಡ್ ಹಂಪ್ಸ್ ವಿರುದ್ಧ 'ಜಾಗೃತಿ' ದನಿ

ಮೈಸೂರು ನಗರ ಪಾಲಿಕೆ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲು ಆಗ್ರಹ

ಹಿರಿಯ ವಕೀಲ ಅರುಣ್‌ಕುಮಾರ್ ಪೊಲೀಸ್ ಆಯುಕ್ತರಿಗೆ ಮನವಿ



ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಅವರ ಆಪ್ತ ಸಹಾಯಕರಿಗೆ ಹಿರಿಯ ವಕೀಲರೂ ಆದ ಜಾಗೃತಿ ಎನ್‌ಜಿಓ ಸಂಚಾಲಕ ಎಸ್.ಅರುಣ್‌ಕುಮಾರ್ ಗುರುವಾರ ಮನವಿ ಸಲ್ಲಿಸಿದರು.

ಮೈಸೂರು, ಫೆ.1(ಬಿಎಲ್‌ಯು)– ಮೈಸೂರಿನ ಬೋಗಾದಿ ರಸ್ತೆಯ ಕುಕ್ಕರಹಳ್ಳಿ ಕೆರೆ ಜಂಕ್ಷನ್‌ನಿಂದ ಆಯಿಷ್ ಜಂಕ್ಷನ್‌ವರೆಗೆ ನಿರ್ಮಿಸಿದ್ದ ಅವೈಜ್ಞಾನಿಕ ರೋಡ್ ಹಂಪ್ಸ್ ಮೂವರ ಬಲಿ ಪಡೆದಿದ್ದು, ಮೈಸೂರು ನಗರ ಪಾಲಿಕೆ ಆಯುಕ್ತರು ಸೇರಿದಂತೆ ಇತರೆ ಸಿಬ್ಬಂದಿ ವಿರುದ್ಧ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಹಿರಿಯ ವಕೀಲರೂ ಆದ ಜಾಗೃತಿ ಎನ್‌ಜಿಓ ಸಂಚಾಲಕ ಎಸ್.ಅರುಣ್ ಕುಮಾರ್ ಪೊಲೀಸ್ ಆಯುಕ್ತರಲ್ಲಿ ಮನವಿ ಸಲ್ಲಿಸಿದ್ದಾರೆ.

ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ದೂರು ಸಲ್ಲಿಸಿರುವ ಅರುಣ್‌ಕುಮಾರ್, ಅವೈಜ್ಞಾನಿಕ ರೋಡ್ ಹಂಪ್ಸ್ ನಿರ್ಮಾಣ ಮಾಡಿ ನಗರ ಪಾಲಿಕೆ ಅಧಿಕಾರಿಗಳು ಬೇಜವಾಬ್ದಾರಿ ಮೆರೆದಿದ್ದಾರೆ ಎಂದು ವಿವರಿಸಿದ್ದಾರೆ. ನಗರ ಪೊಲೀಸ್ ಆಯುಕ್ತ ರಮೇಶ್ ಅವರು ಕಚೇರಿಯಲ್ಲಿ ಗೈರು ಹಾಜರಿದ್ದ ಕಾರಣ ಅವರ ಆಪ್ತ ಸಹಾಯಕರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

ಬೋಗಾದಿ ರಸ್ತೆಯ ಕುಕ್ಕರಹಳ್ಳಿ ಕೆರೆ ಜಂಕ್ಷನ್‌ನಿಂದ ಆಯಿಷ್ ಜಂಕ್ಷನ್ ಬಳಿ ತಾಂತ್ರಿಕ ವರದಿ ಪಡೆಯದೆ ಅವೈಜ್ಞಾನಿಕ ರೋಡ್ ಹಂಪ್ಸ್ ನಿರ್ಮಾಣ ಮಾಡಲಾಗಿದೆ. ರೋಡ್ ಹಂಪ್‌ಗೆ ಬಿಳಿ ಬಣ್ಣ ಹಾಕುವುದು, ಸೂಚನಾ ಫಲಕ ಅಳವಡಿಸುವುದು ಸೇರಿದಂತೆ ಯಾವುದೇ ರೀತಿಯ ಸುರಕ್ಷತಾ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದ್ದಾರೆ. ನಗರ ಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿಯಿಂದ ಮೂವರು ಅಮಾಯಕರು ಪ್ರಾಣ ಕಳೆದುಕೊಂಡಿದ್ದಾರೆ. ಇದಕ್ಕೆ ಕಾರಣರಾದ ನಗರ ಪಾಲಿಕೆ ಆಯುಕ್ತರು ಸೇರಿದಂತೆ ಸಂಬಂಧಿಸಿದ ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಿಸಿ ಸೆಕ್ಷನ್ 304, ಎ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ಅರುಣ್ ಕುಮಾರ್ ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಅರುಳ್‌ಕುಮಾರ್ ಮುಡಾ ನೂತನ ಆಯುಕ್ತ

ಕುಸುಮಾ ಕುಮಾರಿ ಪಾಲಿಕೆ ಅಪರ ಆಯುಕ್ತೆ



ಅರುಳ್‌ಕುಮಾರ್

ಮೈಸೂರು,ಫೆ1(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಆಯುಕ್ತರನ್ನಾಗಿ ಸರ್ಕಾರದ ಆರ್ಥಿಕ ಇಲಾಖೆ ಉಪಕಾರ್ಯದರ್ಶಿ ಅರುಳ್ ಕುಮಾರ್ ನಿಯೋಜನೆಗೊಂಡಿದ್ದಾರೆ.

ಪ್ರಸ್ತುತ ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಅವರನ್ನು ವರ್ಗಾವಣೆ ಮಾಡಲಾಗಿದೆಯಾದರೂ ಸ್ಥಳ ನಿಯೋಜನೆ ಮಾಡಿಲ್ಲ. ಮೂಲತಃ ಚಾಮರಾಜನಗರದವರಾದ ಹಿರಿಯ ಕೆಎಎಸ್ ಅಧಿಕಾರಿ ಅರುಳ್‌ಕುಮಾರ್ ಅವರು ನಾಳೆ (ಫೆ.2) ಅಧಿಕಾರ ವಹಿಸಿಕೊಳ್ಳುವರು. 2004ರ ತಂಡದ ಕೆಎಎಸ್ ಅಧಿಕಾರಿಯಾದ ಅರುಳ್‌ಕುಮಾರ್, ಹುಣಸೂರು, ಶ್ರೀರಂಗಪಟ್ಟಣ, ನಂಜನಗೂಡು ತಾಲೂಕುಗಳಲ್ಲಿ ತಹಶೀಲ್ದಾರ್ ಆಗಿ ಸೇವೆ ಸಲ್ಲಿಸಿ ಬಳಿಕ ಉಪವಿಭಾಗಾಧಿಕಾರಿಯಾಗಿ (AC) ಪದೋನ್ನತಿಗೊಂಡು ಮಂಡ್ಯ, ದೊಡ್ಡಬಳ್ಳಾಪುರ ಉಪ ವಿಭಾಗಾಧಿಕಾರಿಯಾಗಿದ್ದರು. ಅಲ್ಲದೆ ಕಾಲೇಜು ಶಿಕ್ಷಣ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸಿ, ಈಗ ಸರ್ಕಾರದ ಆರ್ಥಿಕ ಇಲಾಖೆ ಉಪಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಈ ಮಧ್ಯೆ ಚಿಕ್ಕಬಳ್ಳಾಪುರ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮುಖ್ಯ ಆಡಳಿತಾಧಿಕಾರಿಯಾಗಿದ್ದ ಎಸ್.ಕುಸುಮಾ ಕುಮಾರಿ ಅವರನ್ನು ಮೈಸೂರು ಮಹಾನಗರಪಾಲಿಕೆ ಅಪರ ಆಯುಕ್ತರನ್ನಾಗಿ, ಎಂ.ಜೆ.ರೂಪಾ ಅವರ ಸ್ಥಾನಕ್ಕೆ ನಿಯೋಜಿಸಿ ಆದೇಶ ಹೊರಡಿಸಲಾಗಿದೆ.

ಮರಣ ಪ್ರಮಾಣ ಪತ್ರ ಕರುಣಿಸಿದ ಅಧಿಕಾರಿಗಳು!

ಮಿತ್ರನ ಫಲಶ್ರುತಿ

ಮೈಸೂರು, ಫೆ.1(ಬಿಎಲ್‌ಯು)– ಮರಣ ಪ್ರಮಾಣ ಪತ್ರ ನೀಡದೆ ತಬರನಂತೆ ಕಚೇರಿಗೆ ಅಲೆಸುತ್ತಿದ್ದ ಮೃತ ಶಾಲಾ ಶಿಕ್ಷಕಿ ಕುಟುಂಬಸ್ಥರಿಗೆ ಕೊನೆಗೂ ಅಧಿಕಾರಿಗಳು ಅಂತೂ ಮರಣ ಪ್ರಮಾಣ ಪತ್ರ ನೀಡಿದ್ದಾರೆ. ಮೈಸೂರಿನ ಹೆಬ್ಬಾಳು ವಾಸಿ ಮುಕ್ತ ಕೆ.ಮೂರ್ತಿ, ಮೃತಪಟ್ಟು 45 ದಿನವಾದರೂ ತಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ಅಧಿಕಾರಿಗಳು ಅವರ ಪುತ್ರಿಯನ್ನು ಕಚೇರಿಯಿಂದ ಕಚೇರಿಗೆ ಅಲೆದಾಡಿಸುತ್ತಿದ್ದರು. ಈ ಸಂಬಂಧ 'ಮೈಸೂರು ಮಿತ್ರ'ನ ಜನವರಿ 31ರ ಸಂಚಿಕೆಯಲ್ಲಿ 'ತಾಯಿ ಮರಣ ಪ್ರಮಾಣ ಪತ್ರಕ್ಕಾಗಿ ಅಲೆಯುತ್ತಿರುವ ತಬ್ಬಲಿ ಹೆಣ್ಣು ಮಗಳು' ಶೀರ್ಷಿಕೆಯಡಿ ಸುದ್ದಿ ಪ್ರಕಟವಾಗಿತ್ತು. 'ಮಿತ್ರ'ನ ವರದಿಯನ್ನು ಗಂಭೀರವಾಗಿ ಪರಿಗಣಿಸಿದ ತಾಲೂಕು ಕಚೇರಿಯ ಅಧಿಕಾರಿಗಳು ಮುಕ್ತ ಕೆ.ಮೂರ್ತಿ ಕುಟುಂಬಸ್ಥರಿಗೆ ಇಂದು ಮೃತರ ಮರಣ ಪ್ರಮಾಣ ಪತ್ರ ನೀಡಿದ್ದಾರೆ. ಈಗ ಮಾಡಿರುವ ಕೆಲಸವನ್ನು ಮೊದಲೇ ಮಾಡಿದ್ದರೆ ಮೃತರ ಕುಟುಂಬಸ್ಥರು ಅಲೆಯುವುದು ತಪ್ಪುತ್ತಿತ್ತು.

ದಟ್ಟ ಮಂಜು: ಹಾಸನ ಬಳಿ ಕೆಟ್ಟು ನಿಂತಿದ್ದ ಲಾರಿಗೆ ಕಾರು ಡಿಕ್ಕಿ, ಸ್ಥಳದಲ್ಲೇ ಇಬ್ಬರು ಸಾವು

ಹಾಸನ, ಫೆ.1– ಹೆದ್ದಾರಿ ಬದಿಯಲ್ಲಿ ಕೆಟ್ಟು ನಿಂತಿದ್ದ ಲಾರಿಗೆ ಹಿಂಬದಿಯಿಂದ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಇಬ್ಬರು ಸ್ಥಳದಲ್ಲೆ ಸಾವನ್ನಪ್ಪಿರುವ ಘಟನೆ ಹಾಸನ ಜಿಲ್ಲೆ ಆಲೂರು ತಾಲ್ಲೂಕಿನ ಈಶ್ವರಹಳ್ಳಿ ಕೂಡಿಗೆ ಬಳಿಯ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ನಡೆದಿದೆ.

ಪ್ರದೀಪ್ (30), ಗುರು (25) ಸ್ಥಳದಲ್ಲೇ ಸಾವಿಗೀಡಾದವರು. ಕಾರಿನಲ್ಲಿದ್ದ ಮತ್ತಿಬ್ಬರಿಗೆ ಗಂಭೀರ ಗಾಯಗಳಾಗಿವೆ. ಟಿಂಬರ್ ತುಂಬಿದ್ದ ಲಾರಿ ಟೈರ್ ಪಂಕ್ಚರ್ ಆಗಿ ರಸ್ತೆ ಮಧ್ಯೆ ನಿಂತಿತ್ತು. ಮುಂಜಾನೆ ವಾತಾವರಣದಲ್ಲಿ ಸಂಪೂರ್ಣವಾಗಿ ಮಂಜು ಆವರಿಸಿದ್ದ ಪರಿಣಾಮ ರಸ್ತೆಯಲ್ಲಿ ಸಾಗುವವರಿಗೆ ಮುಂದಿನ ವಾಹನಗಳು ಕಾಣದಂತಹ ಪರಿಸ್ಥಿತಿ ಇತ್ತು.

ಹೀಗಾಗಿ ಕಾರಿನಲ್ಲಿದ್ದವರಿಗೆ ಲಾರಿ ನಿಂತಿದ್ದುದು ಗೊತ್ತಾಗಿಲ್ಲ. ಡಿಕ್ಕಿಯ ರಭಸಕ್ಕೆ ಕಾರು ರಸ್ತೆಯಲ್ಲಿ ಉರುಳಿಬಿದ್ದಿದೆ. ಆಲೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಹೋಟೆಲ್ ಒಂದರ ಪೂಜೆಗಾಗಿ ತೆರಳುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿದೆ

ಸಂವಿಧಾನದ ಆಶಯ, ಮೌಲ್ಯ ಮನವರಿಕೆ ಮಾಡಿಕೊಡುವ ವಿಶೇಷ ವಾಹನಕ್ಕೆ ನಾಗವಾಲದಲ್ಲಿ ಅದ್ಧೂರಿ ಸ್ವಾಗತ



ಸಂವಿಧಾನದ ಆಶಯ ಮತ್ತು ಮೌಲ್ಯಗಳನ್ನು ಸಾರುವ ಸ್ತಬ್ಧಚಿತ್ರ ಮಾದರಿಯ ವಿಶೇಷ ವಾಹನಕ್ಕೆ ಮೈಸೂರು ತಾಲೂಕು ನಾಗವಾಲ ಗ್ರಾಪಂ ಸದಸ್ಯರು ಮತ್ತು ಮುಖಂಡರು ಅದ್ಧೂರಿಯಾಗಿ ಸ್ವಾಗತಿಸಿದರು.

ಮೈಸೂರು, ಫೆ.1– ಸಂವಿಧಾನದ ಆಶಯ ಹಾಗೂ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸುವ ವಿಶೇಷ ವಾಹನವನ್ನು ಮೈಸೂರು ತಾಲೂಕು ನಾಗವಾಲ ಗ್ರಾಮ ಪಂಚಾಯ್ತಿ ಬಳಿ ಅದ್ಧೂರಿಯಾಗಿ ಸ್ವಾಗತಿಸಲಾಯಿತು.

ಭಾರತ ಸಂವಿಧಾನ ಅಂಗೀಕರಿಸಿಕೊಂಡು 75ನೇ ವರ್ಷ ಸಂದಿರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ನಗರ ಸಭೆ, ಪಟ್ಟಣ ಪಂಚಾಯ್ತಿ, ಗ್ರಾಮ ಪಂಚಾಯ್ತಿ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಬಳಿ ಸಂವಿಧಾನದ ಆಶಯ ಮತ್ತು ಮೌಲ್ಯಗಳನ್ನು ಸಾರುವುದರ ಜೊತೆಗೆ ಮನೆ ಮನೆಗೂ ಸಂವಿಧಾನ ಪೀಠಿಕೆ ಪ್ರತಿ ತಲುಪಿಸುವ ಉದ್ದೇಶದೊಂದಿಗೆ ಸ್ತಬ್ಧಚಿತ್ರ ಮಾದರಿಯ ವಿಶೇಷ ವಾಹನ ಸಂಚಾರ ಏರ್ಪಡಿಸಲಾಗಿದೆ.

ಹಾಗೆಯೇ ನಾಗವಾಲ ಗ್ರಾಪಂ ಬಳಿ ಆಗಮಿಸಿದ ವಿಶೇಷ ವಾಹನವನ್ನು ನಾಗವಾಲ ಗ್ರಾಪಂ ಸದಸ್ಯರು, ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಮಹಿಳಾ ಸಂಘಗಳ ಸದಸ್ಯರು, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಆತ್ಮೀಯವಾಗಿ ಬರಮಾಡಿಕೊಂಡರು. ಇದೇ ವೇಳೆ ಸಂವಿಧಾನದ ಆಶಯ ಹಾಗೂ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಯದರ್ಶಿ ಹಾಗೂ ನಾಗವಾಲ ಗ್ರಾಪಂ ಮಾಜಿ ಅಧ್ಯಕ್ಷ ಸಿ.ನರೇಂದ್ರ, ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್‌ನ ಅಧ್ಯಕ್ಷ ಹಾಗೂ ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ, ಹಾಲಿ ಗ್ರಾಪಂ ಅಧ್ಯಕ್ಷರಾದ ಶ್ರೀಮತಿ ಕಾಮಾಕ್ಷಮ್ಮ ಬಸವನಾಯ್ಕ, ಮಾಜಿ ಸದಸ್ಯ ಕೆ.ಮಹೇಶ್, ಹಾಲಿನ ಡೈರಿ ಕಾರ್ಯದರ್ಶಿ ಕುಮಾರ್, ಯಜಮಾನರಾದ ವಿಷಕಂಠನಾಯಕ, ಪಿಡಿಓ. ಡಾ.ಶೋಭಾ ರಾಣಿ, ಕಾಯದರ್ಶಿ ಯಶ್ವಂತ್ ಕುಮಾರ್, ಬಿಲ್ ಕಲೆಕ್ಟರ್ ಉದಯ್, ಸದಸ್ಯರಾದ ಬಿ.ಕೆ.ಈಶ್ವರ್, ಪಿ. ಮಹದೇವ್, ಮಮತ ಶಿವಕುಮಾರ್, ಗೀತಾ ಮಹದೇವ್, ಸೀಗಳ್ಳಿ ಸ್ವಾಮಣ್ಣ, ಯಶೋದಮ್ಮ ಚಿಕ್ಕಣ್ಣ, ಬೊಮ್ಮೇನಹಳ್ಳಿ ರಾಜಣ್ಣ, ಸಿದ್ದರಾಜು, ಶಿವಣ್ಣ, ಬಿ.ಡಿ.ಎಂ. ಕುಮಾರ್, ಮಲೆಯೂರು ಸೋಮಯ್ಯ, ತಾಲೂಕು ಸಮಾಜ ಕಲ್ಯಾಣ ಅಧಿಕಾರಿ ಸಿದ್ದಲಿಂಗು ಮತ್ತು ಸಿಬ್ಬಂದಿ, ಪಂಚಾಯ್ತಿ ವ್ಯಾಪ್ತಿಯ ಎಲ್ಲಾ ಅಂಬೇಡ್ಕರ್ ಸಂಘದ ಪದಾಧಿಕಾಗಳು ಉಪಸ್ಥಿತರಿದ್ದರು.

12 ವರ್ಷ ಪತ್ನಿಯನ್ನು ಮನೆಯಲ್ಲೇ ಕೂಡಿದ್ದ ವಿಕೃತ ಪತಿ!



ಮೈಸೂರು, ಫೆ.1– ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಅಮಾನವೀಯ ಘಟನೆ ಬೆಳಕಿಗೆ ಬಂದಿದ್ದು, ಪತ್ನಿಯನ್ನು ಕಳೆದ 12 ವರ್ಷದಿಂದ ಮನೆಯಲ್ಲೇ ಕೂಡಿ ಹಾಕಿದ್ದ ವ್ಯಕ್ತಿಯೊಬ್ಬನನ್ನು ಹೆಚ್.ಡಿ. ಕೋಟೆ ಪೊಲೀಸರು ಬಂಧಿಸಿ, ಮಹಿಳೆಯನ್ನು ಬಂಧ ಮುಕ್ತಗೊಳಿಸಲಾಗಿದೆ.

ಹೈರಿಗೆ ಗ್ರಾಮದ ನಿವಾಸಿ ಸಣ್ಣಾಲಯ್ಯ ಬಂಧಿತ ಆರೋಪಿ. ಈತ ತನ್ನ ಪತ್ನಿಯನ್ನು 12 ವರ್ಷದಿಂದ ಮನೆ ಬಾಗಿಲಿಗೆ 3 ಬೀಗ ಜಡಿದು ದಿಗ್ಬಂಧನದಲ್ಲಿರಿಸಿದ್ದ. ಸಣ್ಣಾಲಯ್ಯನಿಗೆ ಈಕೆ 3ನೇ ಪತ್ನಿಯಾಗಿದ್ದು, ಇಬ್ಬರು ಮಕ್ಕಳಿದ್ದಾರೆ. ಮೊದಲ ಇಬ್ಬರು ಪತ್ನಿಯರು ಸಣ್ಣಾಲಯ್ಯನ ಕಾಟದಿಂದ ಬೇಸತ್ತು ದೂರವಾಗಿದ್ದರು.

ಮನೆ ಕಿಟಕಿಗಳನ್ನು ಭದ್ರಪಡಿಸಿ ಪತ್ನಿ ಹೊರಗಿನ ಯಾರೊಂದಿಗೂ ಮಾತನಾಡದಂತೆ ಎಚ್ಚರವಹಿಸಿದ್ದ. ಶೌಚಾಲಯ ಇಲ್ಲದ ಕಾರಣ ಬಕೆಟ್ ಇರಿಸಿ ರಾತ್ರಿ ವೇಳೆ ಮಲ, ಮೂತ್ರ ಹೊರ ಹಾಕುವ ಕೆಲಸ ಮಾಡಿ ವಿಕೃತಿ ಮೆರೆದಿದ್ದ. ಈ ವಿಚಾರ ತಿಳಿದ ವಕೀಲ ಸಿದ್ದಪ್ಪಾಜಿ, ಸಾಂತ್ವನ ಕೇಂದ್ರದ ಜಶೀಲ, ಎಎಸ್‌ಐ ಸುಭಾನ್ ಇತರರ ತಂಡ ಮನೆಗೆ ಭೇಟಿ ನೀಡಿದ್ದು, ವಿಷಯ ತಿಳಿಯುತ್ತಿದ್ದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಜಮಾಯಿಸಿದ್ದಾರೆ. ರಾತ್ರೋರಾತ್ರಿ ಮನೆ ಬೀಗ ಒಡೆದು, ಮಹಿಳೆ ಮತ್ತು ಮಕ್ಕಳನ್ನು ಪೊಲೀಸರು ರಕ್ಷಣೆ ಮಾಡಿದ್ದಾರೆ.

ದಿಗ್ಬಂಧನದಲ್ಲಿರಿಸಿರುವುದನ್ನು ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವ ಬೆದರಿಕೆಯನ್ನು ಸಣ್ಣಾಲಯ್ಯ ಹಾಕಿದ್ದ. ಆತನ ವರ್ತನೆಯಿಂದ ಗ್ರಾಮಸ್ಥರಲ್ಲೂ ಭಯದ ವಾತಾವರಣ ನಿರ್ಮಾಣವಾಗಿತ್ತು. ಮಾಹಿತಿ ನೀಡಲೂ ಗ್ರಾಮಸ್ಥರು ಹಿಂಜರಿಯುತ್ತಿದ್ದರು. ಹಲವು ಬಾರಿ ಗ್ರಾಮದಲ್ಲಿ ನ್ಯಾಯ ಪಂಚಾಯತಿ ನಡೆದಿತ್ತು. ಸಣ್ಣಾಲಯ್ಯ ತಪ್ಪು ತಿದ್ದಿಕೊಳ್ಳದೇ ತನ್ನ ಚಾಳಿ ಮುಂದುವರೆಸಿದ್ದ ಎನ್ನಲಾಗಿದೆ.

ಇದೀಗ ಸಣ್ಣಾಲಯ್ಯನನ್ನು ಬಂಧಿಸಿರುವ ಪೊಲೀಸರು, ಮಹಿಳೆ ಒಪ್ಪಿಗೆಯಂತೆ ಆಕೆಯ ತವರು ಮನೆಯಲ್ಲಿ ಆಶ್ರಯ ಕೊಡಿಸಿದ್ದಾರೆ. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

PUBLIC NOTICE

The General Public is hereby informed that my client B.Z. GULSHADAHMED (Ph. No. 98863 49231) is intending to purchase the below mentioned schedule of property from its owner Mr. DAYASAGAR D.C., S/o Late D.P. Shivaswamy, residing Door No. 15/1 Deburu Village, Nanjanagud Taluk, Debur, Mysore.

If anybody is having any objection, claim, interest, dispute for the above intended sale transaction, he/she/they may contact the undersigned with the documentary proof substantiating his / her / their objections / claims / details of dispute/s within Fifteen (15) days from the date of this publication, failing which my client will proceed to complete the sale transaction with the above owner as if there are no third party claims/objections/ disputes in respect of the Schedule Property and thereafter no claims/objections/disputes will be entertained.

SCHEDULE PROPERTY

All that piece & parcel of Alienated land bearing Survey No.1/3 (One /three), measuring 1 Acres 2.5 Guntas situated at Sathagalli Village, Kasaba Hobli, Mysore Taluk.

Sd/- SYED AMEER, B.E., LL.B
Advocate & Public Notary,
Govt. of India, 2929, 2nd Floor
In front of Mandi Market Main Gate, Mandi Mohalla, Mysuru.
Mob: 9341366890.

ನಗರಸಭಾ ಕಾರ್ಯಾಲಯ, ಹುಣಸೂರು
CITY MUNICIPAL COUNCIL HUNSUR
ಮೈಸೂರು ಜಿಲ್ಲೆ – 571105
E-mail :ka.hunsur.cmc@gmail.com ಫೋನ್: 08222–252048

ಸಂಖ್ಯೆ: ಹುನಕಾ/ಸಿಬ್ಬಂದಿ/ಪಿಆರ್/01/2023–24 ದಿನಾಂಕ:29–01–2024

ಕೊಟೇಷನ್ ಪ್ರಕಟಣೆ

ವಿಷಯ :ಕೆ.ಎಂ.ಎಫ್ ರಿಜಿಸ್ಟರ್ ಮತ್ತು ಇತರೆ ನಮೂನೆಗಳನ್ನು ಸರಬರಾಜು ಮಾಡುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹುಣಸೂರು ನಗರಸಭಾ ಕಾರ್ಯಾಲಯಕ್ಕೆ ಅವಶ್ಯಕವಿರುವ ಕೆ.ಎಂ.ಎಫ್ ರಿಜಿಸ್ಟರ್ ಮತ್ತು ಇತರೆ ನಮೂನೆಗಳನ್ನು ಸರಬರಾಜು ಮಾಡಲು ಅರ್ಹ ಸಂಸ್ಥೆಯಿಂದ ಆಹ್ವಾನಿಸಲಾಗಿರುತ್ತದೆ. ಕೊಟೇಷನ್ ಸಲ್ಲಿಸಲು ಇಚ್ಛಿಸುವವರು ಕಛೇರಿಯ ಸಿಬ್ಬಂದಿ ಶಾಖೆಯಿಂದ 36 ಐಟಂಗಳ ವಿವರಪಟ್ಟಿಯನ್ನು ಪಡೆದು ದರಪಟ್ಟಿಯನ್ನು ದಿನಾಂಕ 07/02/2024 ರ ಸಂಜೆ 05.00 ಗಂಟೆಯೊಳಗೆ ಸಲ್ಲಿಸುವುದು.

ಸಹಿ/– ಪೌರಾಯುಕ್ತರು, ನಗರಸಭೆ, ಹುಣಸೂರು

ನಗರಸಭಾ ಕಾರ್ಯಾಲಯ, ಹೂಟಗಳ್ಳಿ
ಎಸ್.ಆರ್.ಎಸ್. ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ,
ಹೂಟಗಳ್ಳಿ, ಮೈಸೂರು ಜಿಲ್ಲೆ –570018
ಸಹಾಯವಾಣಿ ಸಂಖ್ಯೆ: 0821–2001737
ltstaff_ulb_hootagalli@yahoo.com

ಹೂನಸ/ಫವನಿ/04/2023–24 ದಿನಾಂಕ: 30.01.2024

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ)

ಕೆಟಿಪಿಪಿ 2000ರ ನಿಯಮದನ್ವಯ ಹೂಟಗಳ್ಳಿ ನಗರಸಭೆಯ ಉದ್ಯಾನವನ ನಿರ್ವಹಣೆಗೆ ಸಂಬಂಧಿಸಿದಂತೆ ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸರಬರಾಜು ಮಾಡಲು ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ನೋಂದಾಯಿತ ಸಂಸ್ಥೆ ಗಳು ಕೆಪಿಪಿಪಿ ಪೋರ್ಟಲ್‌ನ ನಿಂದ ಟೆಂಡರ್ ಷರತ್ತು ಹಾಗೂ ಸಲ್ಲಿಸಬೇಕಾಗಿರುವ ದಾಖಲಾತಿಗಳ ವಿವರಗಳಿಗೆ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗೆ ಕಛೇರಿಯಲ್ಲಿ ಸಂಪರ್ಕಿಸಬಹುದು. ಇಂಡೆಂಟ್ ನಂ: DMA/2023-24/SE2168, ಅಂದಾಜು ಮೊತ್ತ: 8.81 ಲಕ್ಷಗಳು. ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸುವ ಕೊನೆ ದಿ: 15.02.2024ರ ಸಂಜೆ 4.00 ಗಂಟೆ. ಟೆಂಡರ್‌ನ್ನು ತೆರೆಯುವ ದಿ: 16.02.2024ರ ಸಂಜೆ 5.00 ಗಂಟೆ.

ಸಹಿ– ಪೌರಾಯುಕ್ತರು, ನಗರಸಭೆ, ಹೂಟಗಳ್ಳಿ

DIPR/DDMYS/KSMCA/984/2023-24

ಮೈಸೂರು ಮಿತ್ರ

ಶುಕ್ರವಾರ 2 ಫೆಬ್ರವರಿ 2024

ಪಾಲಹಳ್ಳಿ ಬಳಿ ಬೈಕ್‌ಗೆ ಟ್ರ್ಯಾಕ್ಟರ್ ಡಿಕ್ಕಿ

ಅಣ್ಣ ಸಾವು, ತಮ್ಮನಿಗೆ ಗಂಭೀರ ಗಾಯ



ಮೃತ ಕೌಶಿಕ್

ಶ್ರೀರಂಗಪಟ್ಟಣ, ಫೆ.1– ಟ್ರ್ಯಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿ, ಆತನ ಸಹೋದರ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಶ್ರೀರಂಗಪಟ್ಟಣ–ಕೆಆರ್‌ಎಸ್ ರಸ್ತೆಯ ಪಾಲಹಳ್ಳಿ ಗ್ರಾಮದ ಬಳಿ ಸಂಭವಿಸಿದೆ.

ತಾಲೂಕಿನ ಹುಲಿಕೆರೆ ಗ್ರಾಮದ ಮಹದೇವು ಅವರ ಪುತ್ರ ಕೌಶಿಕ್(18) ಮೃತ ಯುವಕ. ಈತನ ಸಹೋದರ ಪವನ್(13) ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಕೌಶಿಕ್ ಮೈಸೂರಿನ ಖಾಸಗಿ ಕಾಲೇಜಿನ ವಿದ್ಯಾರ್ಥಿಯಾಗಿದ್ದು, ಈತನ ಸಹೋದರ ಬೆಳಗೊಳ ಸರ್ಕಾರಿ ಪ್ರೌಢಶಾಲೆಯಲ್ಲಿ 8ನೇ ತರಗತಿ ಓದುತ್ತಿದ್ದಾನೆ. ಗುರುವಾರ ಬೆಳಿಗ್ಗೆ ಶಾಲೆಯಿಂದ ಕರ್ನಾಟಕ ದರ್ಶನಕ್ಕೆ ಪ್ರವಾಸ ಕರೆದೊಯ್ಯುತ್ತಿದ್ದು, ಸಹೋದರ ಪವನ್ ಕೂಡ ಇದಕ್ಕೆ ಹೊರಡುತ್ತಿದ್ದನಂತೆ. ಪಟ್ಟಣದ ಬಿಇಒ ಕಚೇರಿ ಬಳಿ ಪ್ರವಾಸಿ ವಾಹನಕ್ಕೆ ಹತ್ತಿಸಲು ಗ್ರಾಮದಿಂದ ಬೈಕಿನಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ಟ್ರಾಕ್ಟರ್ ಡಿಕ್ಕಿ ಹೊಡೆದಾಗ ಈ ದುರಂತ ಸಂಭವಿಸಿದೆ.

ಅಪಘಾತ ಸ್ಥಳದಲ್ಲಿ ಮೃತ ಯುವಕನ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಶ್ರೀರಂಗಪಟ್ಟಣ ಟೌನ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಗಂಭೀರವಾಗಿ ಗಾಯಗೊಂಡ ಮೃತನ ಸಹೋದರರನ್ನು ಮೈಸೂರಿನ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಕುರಿತು ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪಾಂಡವಪುರದಲ್ಲಿ ಎಂಜಿನಿಯರ್ ಅನುಮಾನಾಸ್ಪದ ಸಾವು

ಪತ್ನಿ ಕುಟುಂಬದವರಿಂದ ಕೊಲೆ ಎಂದು ತಾಯಿ ದೂರು

ಸ್ನಾನದ ಮನೆಯಲ್ಲಿ ಬೆತ್ತಲೆಯಾಗಿ ಬಿದ್ದಿದ್ದ ಮೃತದೇಹ



ಟಿ.ಎಸ್.ಗಂಗಾಧರ್

ಪಾಂಡವಪುರ, ಫೆ.1– ಮನೆಯ ಬಾತ್ ರೂಂನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಬೆತ್ತಲೆಯ ಸ್ಥಿತಿಯಲ್ಲಿ ಸಾವನ್ನಪ್ಪಿರುವ ಮೃತದೇಹ ಪತ್ತೆಯಾಗಿದ್ದು, ಪತ್ನಿ ಮತ್ತು ಪತ್ನಿಯ ಕುಟುಂಬಸ್ಥರು ಕೊಲೆ ಮಾಡಿದ್ದಾರೆ ಎಂದು ಮೃತರ ತಾಯಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಪಟ್ಟಣದ ನಿವಾಸಿ ಲೇ.ಶಿವಣ್ಣ ಅವರ ಪುತ್ರ ಟಿ.ಎಸ್.ಗಂಗಾಧರ್(42) ಮೃತ ವ್ಯಕ್ತಿ. ತಮಿಳುನಾಡು ಮೂಲದ ಖಾಸಗಿ ಕಂಪನಿಯಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಗಂಗಾಧರ್ ಮೂಲತಃ ಪಾಂಡವಪುರ ತಾಲೂಕಿನ ಕೆರೆತೊಣ್ಣೂರು ಗ್ರಾಮದವರು, ಅದೇ ಕೆರೆತೊಣ್ಣೂರು ಗ್ರಾಮದ ನಿವಾಸಿ, ಪಟ್ಟಣದಲ್ಲಿ ವಾಸವಾಗಿರುವ ಬಸವೇಗೌಡರ ಪುತ್ರಿ ಭವ್ಯ ಅವರೊಂದಿಗೆ ವಿವಾಹವಾಗಿದ್ದರು.



ಸಾರ್ವಜನಿಕ ಆಸ್ಪತ್ರೆಯ ಶವಾಗಾರದ ಬಳಿ ಸೇರಿರುವ ಮೃತರ ಸಂಬಂಧಿಕರು.

ದಂಪತಿಗಳಿಗೆ ಒಂದು ಹೆಣ್ಣು ಮಗುವಿದೆ.

ಗಂಗಾಧರ್ ಹಾಗೂ ಪತ್ನಿ ಭವ್ಯ ದಾಂಪತ್ಯದಲ್ಲಿ ಬಿರುಕು ಉಂಟಾಗಿ ಪ್ರಕರಣ ಕೋರ್ಟ್ ಮೆಟ್ಟಿಲೇರಿತ್ತು. ಬಳಿಕ ಕೋರ್ಟ್ ಮೂಲಕ ರಾಜೀಸಂಧಾನ ಮಾಡಿಕೊಂಡು ಕಳೆದ ಆರು ತಿಂಗಳಿಂದ ಪಟ್ಟಣದ ಶಾಂತಿನಗರದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಬುಧವಾರ ಮಧ್ಯಾಹ್ನ ಗಂಗಾಧರ್ ಪತ್ನಿ ಭವ್ಯ, ಮೃತರ ತಾಯಿ ಸರಸ್ವತಿಗೆ ದೂರವಾಣಿ ಕರೆ ಮಾಡಿ ನಿಮ್ಮ ಮಗ ಬಾತ್‌ರೂಂನ ಒಳಗೆ ಹೋಗಿ ಬಾಗಿಲು ಹಾಕಿಕೊಂಡು ಬಾಗಿಲು ತೆಗೆಯುತ್ತಿಲ್ಲ ಎಂದು ಮಾಹಿತಿ ನೀಡಿದ್ದಾರೆ. ಸರಸ್ವತಿ ಅವರು ಬಂದು ನೋಡಿದಾಗ ಬಾತ್‌ರೂಂನಲ್ಲಿ ಬೆತ್ತಲೆ ಸ್ಥಿತಿಯಲ್ಲಿ ಗಂಗಾಧರ್ ಬಿದ್ದಿರುವುದು ಕಂಡುಬಂದಿದೆ.

ತಕ್ಷಣ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಆಸ್ಪತ್ರೆಯಲ್ಲಿ ವೈದ್ಯರು ಮೃತಪಟ್ಟಿರುವುದನ್ನು ದೃಢಪಡಿಸಿದ್ದಾರೆ. ಬಳಿಕ ಮೃತದೇಹವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಮೃತರ ತಾಯಿ ಸರಸ್ವತಿ ಅವರು ನನ್ನ ಮಗ ಗಂಗಾಧರ್ ಅವರಿಗೆ ಆತನ ಪತ್ನಿ ಭವ್ಯ, ತಂದೆ ಬಸವೇಗೌಡ, ಜಯಲಕ್ಷ್ಮಿ, ಸೋದರ ನವೀನ, ನವೀನನ ಹೆಂಡತಿ ಸೇರಿ ಕೊಲೆ ಮಾಡಿರುವ ಸಂಶಯವಿದ್ದು ಅವರ ವಿರುದ್ಧ ಕ್ರಮಜರುಗಿಸಬೇಕೆಂದು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಘಟನೆ ಸಂಬಂಧ ಪೊಲೀಸ್ ಠಾಣೆಯಲ್ಲಿ ಕೊಲೆ ಸಂಶಯದ ದೂರು ದಾಖಲಾಗಿದೆ.

ಶವಪರೀಕ್ಷೆ ನಡೆಸಲು ಮೃತ ಪೋಷಕರನ್ನು ಪೊಲೀಸರು ಎಷ್ಟೇ ಮನವೊಲಿಸಲು ಪ್ರಯತ್ನಿಸಿದರೂ, ಸುಮಾರು ಮಧ್ಯಾಹ್ನ 3.30 ರವರೆಗೂ ಅವಕಾಶ ನೀಡಲಿಲ್ಲ. ಬಳಿಕ ಪೊಲೀಸರು ಶವಪರೀಕ್ಷೆಯ ವರದಿಯಲ್ಲಿ ಕೊಲೆ ಎಂದು ಬಂದರೆ ಆರೋಪಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಭರವಸೆ ನೀಡಿದ ಮೇರೆಗೆ ಶವ ಪರೀಕ್ಷೆ ನಡೆಸಲು ಅವಕಾಶ ನೀಡಿದರು.

ಸಾಂತ್ವನ: ವಿಷಯ ತಿಳಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸಾರ್ವಜನಿಕ ಆಸ್ಪತ್ರೆಯ ಶವಾಗಾರದ ಬಳಿ ಆಗಮಿಸಿ ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಕೆರಗೋಡು ಘಟನೆಗೆ ಶಾಸಕ ಗಣಿಗ ರವಿ ನೇರ ಕಾರಣ

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಗಂಭೀರ ಆರೋಪ

- ಶಾಂತಿ ಸಭೆ ನಡೆಸಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ
- ದೇವೇಗೌಡರ ಕುಟುಂಬದಿಂದ ಸಮಗ್ರ ಅಭಿವೃದ್ಧಿ, ಬನ್ನಿ ಚರ್ಚೆಗೆ
- ಅಧಿಕಾರಿಗಳ ಮೂಲಕ ದಾಖಲೆಗಳ ತಿದ್ದುಪಡಿ



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು. ಚಿತ್ರದಲ್ಲಿ ಬೆಂಬಲಿಗರನ್ನು ಕಾಣಬಹುದು.

ಮಂಡ್ಯ,ಫೆ.1– ಕೆರಗೋಡು ಹನುಮ ಧ್ವಜ ತೆರವು ವಿಚಾರ ತಾರಕಕ್ಕೇರಿ ವಿವಾದದ ಸ್ವರೂಪ ಪಡೆಯಲು ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್ ನೇರ ಕಾರಣ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಆರೋಪಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕೆರಗೋಡು ವಿವಾದದ ಮೂಲ ಪ್ರಾರಂಭ ಆಗಿದ್ದೇ ಮಾರಗೌಡನಹಳ್ಳಿಯ ತಿರುಪತಿ ದೇವಾಲಯದ ಉದ್ಘಾಟನೆ ವಿಚಾರದಿಂದ. ಜ.22ರಂದು ಮಾರಗೌಡನಹಳ್ಳಿ ದೇಗುಲದ ಜೊತೆಗೆ ಕೆರಗೋಡಿನ ಧ್ವಜಸ್ತಂಭ ಉದ್ಘಾಟನೆಗೆ ಮಾಜಿ ಸಿಎಂ ಕುಮಾರಸ್ವಾಮಿ ಬರಬೇಕಿತ್ತು. ಆದರೆ ಅಂದು ಅಯೋಧ್ಯೆಗೆ ಹೋಗಬೇಕಿದ್ದರಿಂದ ಅವರು ಜ.20 ರಂದೇ ದೇಗುಲ ಉದ್ಘಾಟನೆಗೆ ಬರಬೇಕಿತ್ತು ಆದರೆ ಬರಲು ಸಾಧ್ಯವಾಗಲಿಲ್ಲ. ಇದಕ್ಕೆಲ್ಲ ಮೂಲ ಕಾರಣ ಶಾಸಕ ಗಣಿಗ ರವಿಕುಮಾರ್ ಆಗಿದ್ದು, ಕುಮಾರಸ್ವಾಮಿ ಅವರನ್ನು ಆಹ್ವಾನ ಮಾಡಿದ್ದಕ್ಕೆ ಜೊತೆಗೆ ತಮ್ಮನ್ನು ಆಮಂತ್ರಣ ಮಾಡಲಿಲ್ಲ ಎಂಬ ಕಾರಣಕ್ಕೆ ರವಿಕುಮಾರ್ ಅವರಿಗೆ ಸಹಿಸಿಕೊಳ್ಳಲು ಆಗದೇ ಧ್ವಜ ತೆರವು ಮಾಡಿಸಿದ್ದಾರೆ ಎಂದು ಕಿಡಿಕಾರಿದರು.

ಸಚಿವ ಎನ್.ಚಲುವರಾಯಸ್ವಾಮಿಯಾಗಲಿ ಕ್ಷೇತ್ರದ ಶಾಸಕ ಗಣಿಗ ರವಿಕುಮಾರ್ ಆಗಲಿ ಕೆರಗೋಡು ವಿವಾದದ ಸಮಸ್ಯೆ ಬಗೆಹರಿಸುವ ಕೆಲಸ ಮಾಡಲಿಲ್ಲ. ಏಕಾಏಕಿ ಧ್ವಜ ಇಳಿಸಲು ಮುಂದಾದರೇ ಹೊರತು, ಶಾಂತಿ ಸಭೆ ಮಾಡಿ, ಆರಂಭದಲ್ಲೇ ಸಮಸ್ಯೆ ಬಗೆಹರಿಸಿದ್ದರೆ ಇದು ವಿಕೋಪಕ್ಕೆ ಹೋಗುತ್ತಲೇ ಇರಲಿಲ್ಲ ಎಂದು ಹೇಳಿದರು.

ಕೆರಗೋಡು ವಿವಾದವನ್ನು ದೊಂಬರಾಟ ಮಾಡಿಕೊಂಡು ಯಶಸ್ವಿಯಾಗುತ್ತೇವೆ ಎಂಬುದನ್ನು ಮರೆತು ಬಿಡಿ, ಜನರ ಮೇಲೆ ಲಾಠಿ ಚಾರ್ಜ್ ಮಾಡಿಸಿದ್ದೀರಿ. ಜವಾಬ್ದಾರಿ ತೆಗೆದುಕೊಂಡು ನಿರ್ವಹಣೆ ಮಾಡಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ನಮ್ಮ ಬಿಜೆಪಿ ಪಾದಯಾತ್ರೆಯನ್ನು ಅಂತಿಮಯಾತ್ರೆ ಎಂದು ಕಾಂಗ್ರೆಸ್ ಜರಿದಿದೆ. ಇದು ಅಂತಿಮವಲ್ಲ, ಉದ್ಭವಯಾತ್ರೆಯಾಗಿದ್ದು, ನಾವು ಬಿಜೆಪಿಯವರು ಜನಪರವಾಗಿ ಕೇಸರಿ ಶಾಲು ಹಾಕಿದ್ದು ಅದನ್ನು ಪ್ರಶ್ನಿಸುವ ನೈತಿಕತೆ ನಿಮಗಿಲ್ಲ ಎಂದು ಹೇಳಿದರು.

ಚಲುವರಾಯಸ್ವಾಮಿ ಮಂಡ್ಯ ಜಿಲ್ಲೆಗೆ ದೇವೇಗೌಡರ ಕುಟುಂಬದ ಕೊಡುಗೆ ಏನು ಎಂದು ಮಾತನಾಡಿದ್ದಾರೆ. ದೇವೇಗೌಡರ ಕುಟುಂಬ ಈ ಜಿಲ್ಲೆಗೆ ದೊಡ್ಡ ಕೊಡುಗೆ ಕೊಟ್ಟಿದ್ದಾರೆ. ಚಲುವರಾಯಸ್ವಾಮಿ, ನಾನು ಒಂದು ಕಡೆ ನಿಂತುಕೊಂಡು ಚರ್ಚೆ ಮಾಡೋಣ. ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಗೌಡರ ಕುಟುಂಬ ಎಷ್ಟು ಪರಿಶ್ರಮ ಹಾಕಿದ್ದಾರೆ ಅನ್ನೋದನ್ನ ವಿನಿಮಯ ಮಾಡ್ಕೋಳೋಣ. ಇದಕ್ಕೆ ಅವರು ಸಿದ್ಧರಿದ್ದಾರೆಯೇ ಎಂದು ಸವಾಲು ಹಾಕಿದರು.

ಜಿ.ಪಂ ಸದಸ್ಯರಾಗಿದ್ದ ಚಲುವರಾಯಸ್ವಾಮಿಯನ್ನು ಶಾಸಕ, ಮಂತ್ರಿ, ಸಂಸದರನ್ನಾಗಿ ಮಾಡಿದ್ದು ದೇವೇಗೌಡರು, 2008ರಲ್ಲಿ ಚಲುವರಾಯಸ್ವಾಮಿ ನಾಗಮಂಗಲದಲ್ಲಿ ಸೋತಾಗ ನಮ್ಮ ಸಮ್ಮುಖದಲ್ಲೇ ದೇವೇಗೌಡರ ಮುಂದೆ ಕಣ್ಣೀರು ಹಾಕಿದ್ದರು. ಗೌಡರು ಸಮಾಧಾನಪಡಿಸಿ, ಮಂಡ್ಯ ಲೋಕಸಭೆಗೆ ಟಿಕೆಟ್ ಕೊಟ್ಟು ಕಳುಹಿಸಿದ್ದರು. ಇದನ್ನೆಲ್ಲಾ ಚಲುವರಾಯಸ್ವಾಮಿ ಮರೆತಿರಬಹುದು ಎಂದು ಕಿಡಿಕಾರಿದರು.


ಜನ ಈ ಬಾರಿ ನಿಮಗೆ ಮತ ಕೊಟ್ಟಿಲ್ಲ. ಗ್ಯಾರಂಟಿಗಳ ಮುಖ ನೋಡಿ ಮತ ಕೊಟ್ಟಿದ್ದಾರೆ. ಸಂಸತ್ ಚುನಾವಣೆ ಸೋತರೆ ಗ್ಯಾರಂಟಿ ವಾಪಸ್ ಎಂದು ಈಗಾಗಲೇ ನಿಮ್ಮ ಪಕ್ಷದ ಬಾಲಕೃಷ್ಣ ಹೇಳಿದ್ದಾರೆ. ಜನರೇ ಮುಂದೆ ನಿಮಗೆ ತಕ್ಕ ಪಾಠ ಕಲಿಸ್ತಾರೆ. ಮಂಡ್ಯ ನಗರಕ್ಕೆ ಎಸ್ಪಿ ಕಚೇರಿ, ಕೋರ್ಟ್, ಮೆಡಿಕಲ್ ಕಾಲೇಜ್ ತಂದವರು ಯಾರು. ದೇವೇಗೌಡರ ಕಾಲದಿಂದ ಈವರೆಗೆ ಮಂಡ್ಯ ಜಿಲ್ಲೆಗೆ ಎಷ್ಟು ಅಭಿವೃದ್ಧಿ ಕೆಲಸವಾಗಿದೆ ಎಂದು ಪಟ್ಟಿ ಕೊಡಲು ನಾನು ಸಿದ್ಧನಿದ್ದು, ನನ್ನೊಂದಿಗೆ ಚರ್ಚೆಗೆ ಬನ್ನಿ ಎಂದು ಸವಾಲು ಹಾಕಿದರು.

ಮಾಜಿ ಶಾಸಕ ಕೆ.ಸುರೇಶ್‌ಗೌಡ ಮಾತನಾಡಿ, ಹನುಮ ಧ್ವಜ ತೆಗೆದಿರುವ ಬಗ್ಗೆ ಅಧಿಕಾರಿಗಳು ಸಮಜಾಯಿಷಿ ಕೊಡುತ್ತಿದ್ದು, ಘಟನೆಯಾದ ಕೇವಲ ಮೂರು ದಿನಗಳಲ್ಲಿ ಸರ್ಕಾರದ ಆಣತಿಯಂತೆ ಅಧಿಕಾರಿಗಳು ನಕಲಿ ದಾಖಲೆ ಸೃಷ್ಟಿಸಿ, ದಾಖಲೆಗಳಲ್ಲಿ ಎಲ್ಲ ಅಕ್ಷರ ತಿದ್ದುಪಡಿ ಮಾಡಲಾಗಿದೆ. ಸ್ಥಳೀಯ ಶಾಸಕರ ಜವಾಬ್ದಾರಿ ಏನು, ಸಮಸ್ಯೆ ಸರಿಪಡಿಸುವ ಕೆಲಸ ಮಾಡಲು ಗಣಿಗ ರವಿ ಸಂಪೂರ್ಣ ವಿಫಲರಾಗಿದ್ದು, ಶಾಸಕರ ಜೊತೆಗೆ ಅಧಿಕಾರಿಗಳು ಮತ್ತು ಜಿಲ್ಲಾಡಳಿತ ಸುಳ್ಳು ಪತ್ರಗಳನ್ನ ಸೃಷ್ಟಿ ಮಾಡಿ ದೊಡ್ಡ ತಪ್ಪು ಮಾಡಿದೆ ಎಂದು ಆರೋಪಿಸಿದರು.

ಎನ್.ಚಲುವರಾಯಸ್ವಾಮಿ ಮತ್ತು ಕಾಂಗ್ರೆಸ್ಸಿಗರು ಅಧಿಕಾರ ಶಾಶ್ವತ ಎಂದುಕೊಂಡಿದ್ದಾರೆ. 2018ರಲ್ಲಿ ನಾವು ಏಳು ಮಂದಿ ಗೆದ್ದು ನಿಮ್ಮಲ್ಲಿ ಒಬ್ಬೊಬ್ಬರನ್ನು ಕನಿಷ್ಠ 40 ಸಾವಿರ ಅಂತರದಿಂದ ಸೋಲಿಸಿದ್ದೆವು. ಇದೀಗ ನೀವು ನಮ್ಮ ವಿರುದ್ಧ ಗೆದ್ದಿರೋದು ಕೇವಲ ಮೂರರಿಂದ ಐದು ಸಾವಿರ ಅಂತರದಲ್ಲಿ. ನಿಮ್ಮ ಕೈಗೆ ಅಧಿಕಾರ ಬಂದ ಮೇಲೆ ನಾಗಮಂಗಲ, ಮದ್ದೂರಿನ ಲಾಡ್ಜ್‌ಗಳಲ್ಲಿ ಜೂಜು, ಅನೈತಿಕ ಚಟುವಟಿಕೆಗಳು ಹೆಚ್ಚಿದೆ. ಕಳೆದ 10 ತಿಂಗಳಲ್ಲಿ ನೀವುಗಳು ಜಿಲ್ಲೆಯಲ್ಲಿ ಯಾವ ಅಭಿವೃದ್ಧಿ ಕೆಲಸ ಮಾಡಿದ್ದೀರಿ ಎಂಬ ಬಗ್ಗೆ ಮಾಹಿತಿ ಕೊಡಿ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಹೆಚ್.ಟಿ. ಮಂಜು, ಮಾಜಿ ಶಾಸಕ ಡಾ.ಕೆ.ಅನ್ನದಾನಿ, ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಎಸ್ಸಿ–ಎಸ್ಟಿ ಘಟಕದ ಜಿಲ್ಲಾಧ್ಯಕ್ಷ ಸಾತನೂರು ಜಯರಾಮ್ ಉಪಸ್ಥಿತರಿದ್ದರು.

ಸರ್ಕಾರದಿಂದ ಮಾದಿಗ ಸಮುದಾಯ ನಿರ್ಲಕ್ಷ್ಯ, ಆರೋಪ



ನೂತನ ಪದಾಧಿಕಾರಿಗಳನ್ನು ಅಭಿನಂದಿಸಿದ ಸಂದರ್ಭ.

ಮದ್ದೂರು: ಸರ್ಕಾರಗಳು ಮಾದಿಗ ಸಮುದಾಯವನ್ನು ನಿರ್ಲಕ್ಷ್ಯ ಮಾಡಿದ್ದು, ಸಮಾಜವನ್ನು ಮುಖ್ಯವಾಹಿನಿಗೆ ತರಲು ಸರ್ಕಾರ ಅಗತ್ಯ ಕ್ರಮ ವಹಿಸಬೇಕೆಂದು ರಾಜ್ಯ ಡಾ.ಬಾಬು ಜಗಜೀವನ್ ರಾಮ್ ಒಕ್ಕೂಟದ ಜಿಲ್ಲಾಧ್ಯಕ್ಷ ಎನ್.ಆರ್.ಚಂದ್ರಶೇಖರ್ ಒತ್ತಾಯಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಇತ್ತೀಚೆಗೆ ಒಕ್ಕೂಟದ ತಾಲೂಕು ಘಟಕ ಆಯೋಜಿಸಿದ್ದ ಮಾದಿಗ ಸಮುದಾಯದ ಮುಖಂಡರ ಸಭೆ ಹಾಗೂ ನೂತನ ಪದಾಧಿಕಾರಿಗಳನ್ನು ಅಭಿನಂದಿಸಿ ಅವರು ಮಾತನಾಡಿದರು.

ಪದಾಧಿಕಾರಿಗಳ ಆಯ್ಕೆ: ಅಖಿಲ ಕರ್ನಾಟಕ ಡಾ.ಬಾಬು ಜಗಜೀವನ್ ರಾಮ್ ಒಕ್ಕೂಟದ ತಾಲೂಕು ಘಟಕಕ್ಕೆ ಚಾಮನಹಳ್ಳಿ ಮಂಜು (ಅಧ್ಯಕ್ಷ), ಸಿ.ಡಿ.ಕುಚೇಲ, ಶ್ರೀನಿವಾಸ್, ಬೀರಯ್ಯ, ರಾಜು (ಗೌರವಾಧ್ಯಕ್ಷ), ಸೋಮಶೇಖರ್, ಶೇಖರ್ (ಉಪಾಧ್ಯಕ್ಷ), ಆದೀಶ್ (ಪ್ರಧಾನ ಕಾರ್ಯದರ್ಶಿ), ತೇಜಸ್, ಲೋಕೇಶ್, ಶ್ರೀನಿವಾಸ್, ಮಂಜು, ರಾಚಯ್ಯ, ತಿಮ್ಮೇಶ್, ಗಣೇಶ್, ವಿಜಯ್ (ಸಂಘಟನಾ ಕಾರ್ಯದರ್ಶಿ), ನಿಂಗರಾಜು, ಬೀರೇಶ್ (ಖಜಾಂಚಿ) ಆಯ್ಕೆಯಾಗಿದ್ದಾರೆ.

ಕರವೇ ತಾಲೂಕು ಘಟಕದ ಈ ಅಧ್ಯಕ್ಷ ಎಸ್.ಸಿ.ಅಶೋಕ್ ಪದಾಧಿಕಾರಿಗಳನ್ನು ಅಭಿನಂದಿಸಲಾಯಿತು. ಪದಾಧಿಕಾರಿಗಳಾದ ಹನುಮಂತು, ರಾಜು, ಕಿರಣ್ ಕುಮಾರ್, ಶ್ರೀನಿವಾಸ್, ಕಾರ್ತಿಕ್, ವಿಜಯ್, ರಾಘವೇಂದ್ರ ಇದ್ದರು.

ಅಪರಿಚಿತ ನೇಣಿಗೆ ಶರಣು

ಶ್ರೀರಂಗಪಟ್ಟಣ: ಅಪರಿಚಿತ ವ್ಯಕ್ತಿಯೊಬ್ಬ ನೇಣಿಗೆ ಶರಣಾಗಿರುವ ಘಟನೆ ಕೆ.ಶೆಟ್ಟಹಳ್ಳಿ ಗ್ರಾಮದ ಗಾರ್ಮೆಂಟ್ ಬಳಿ ನಡೆದಿದೆ. ಸುಮಾರು 55 ರಿಂದ 60 ವರ್ಷ ವಯಸ್ಸಿನ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿದ್ದು, ಹೆಸರು, ವಿಳಾಸ ಮತ್ತು ವಿವರಗಳು ತಿಳಿದು ಬಂದಿಲ್ಲ. ವಾರಸುದಾರರು ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಯ ಸಿಪಿಐ ಬಿ.ಜಿ ಕುಮಾರ್ 9480804875 ಹಾಗೂ ಎಸ್‌ಐ ಕುಮಾರ್ ಮೊ. 9844325853 ಸಂಪರ್ಕಿಸುವಂತೆ ಕೋರಿದೆ.

ಹಿಂದೂಗಳಿಂದ ಜ್ಞಾನವಾಪಿ ಮಸೀದಿ ವ್ಯಾಸ ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಕೆ



ವಾರಣಾಸಿ: ನ್ಯಾಯಾಲಯದ ಆದೇಶದ ಮೇರೆಗೆ ಬುಧವಾರ ರಾತ್ರಿ ಇಲ್ಲಿನ ಜ್ಞಾನವಾಪಿ ಮಸೀದಿಯ ನೆಲ ಮಾಳಿಗೆಯಲ್ಲಿ ಪೂಜೆ ಸಲ್ಲಿಸಲಾಯಿತು ಎಂದು ಕಾಶಿ ವಿಶ್ವನಾಥ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ನಾಗೇಂದ್ರ ಪಾಂಡೆ ಅವರು ಗುರುವಾರ ತಿಳಿಸಿದ್ದಾರೆ. ಕಾಶಿ ವಿಶ್ವನಾಥ ದೇಗುಲದ ಪಕ್ಕದಲ್ಲಿರುವ ಮಸೀದಿಗೆ ಸಂಬಂಧಿಸಿದ ಕಾನೂನು ಹೋರಾಟದಲ್ಲಿ ಹಿಂದೂಗಳಿಗೆ ದೊಡ್ಡ ಜಯ ಸಿಕ್ಕಿದ್ದು, ಜ್ಞಾನವಾಪಿ ಮಸೀದಿಯ ನೆಲಮಾಳಿಗೆಯಲ್ಲಿರುವ ವಿಗ್ರಹಗಳಿಗೆ ಅರ್ಚಕರು ಪೂಜೆ ಸಲ್ಲಿಸಬಹುದು ಎಂದು ಜಿಲ್ಲಾ ನ್ಯಾಯಾಲಯ ಬುಧವಾರ ತೀರ್ಪು ನೀಡಿತ್ತು.

ನಿನ್ನೆ ರಾತ್ರಿ 10.30ರ ಸುಮಾರಿಗೆ 31 ವರ್ಷಗಳ ನಂತರ ಪೂಜೆಗಾಗಿ ವ್ಯಾಸ ನೆಲಮಾಳಿಗೆಯನ್ನು ತೆರೆಯಲಾಯಿತು ಎಂದು ಪಾಂಡೆ ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಸಲಾಯಿತೆ ಎಂದು ಕೇಳಿದಾಗ, ಅವರು "ಹೌದು" ಎಂದು ಹೇಳಿದರು. ನ್ಯಾಯಾಲಯದ ಆದೇಶವನ್ನು ಅನುಸರಿಸುವುದು ಅಗತ್ಯವಾಗಿತ್ತು. ಆದ್ದರಿಂದ ಜಿಲ್ಲಾಡಳಿತವು ಎಲ್ಲಾ ವ್ಯವಸ್ಥೆಗಳನ್ನು ಅತ್ಯಂತ ತ್ವರಿತವಾಗಿ ಮಾಡಿದೆ ಎಂದು ಪಾಂಡೆ ಹೇಳಿದ್ದಾರೆ. ಇನ್ನು ನ್ಯಾಯಾಲಯದ ಆದೇಶವನ್ನು ಪಾಲಿಸಿದ್ದೇನೆ ಎಂದು ಜಿಲ್ಲಾಧಿಕಾರಿ ಎಸ್.ರಾಜಲಿಂಗಂ ಅವರು ತಿಳಿಸಿದ್ದಾರೆ. ನೆಲಮಾಳಿಗೆಯನ್ನು ಸ್ವಚ್ಛಗೊಳಿಸಿದ ನಂತರ, ಲಕ್ಷ್ಮಿ ದೇವಿ ಮತ್ತು ಗಣೇಶನ ಆರತಿಯನ್ನು ಮಾಡಲಾಯಿತು ಎಂದು ಕೆಲವು ಸ್ಥಳೀಯರು ಹೇಳಿದ್ದಾರೆ.

ನನ್ನೊಂದಿಗೆ ಕಾಂಗ್ರೆಸ್ ಸೇರಿದ್ದವರೆಲ್ಲಾ ಬಿಜೆಪಿಗೆ ವಾಪಸ್ ಬರುತ್ತಾರೆ...!

- ಮಾಜಿ ಸಿಎಂ ಜಗದೀಶ್ ಶೆಟ್ಟರ್ ಸ್ಫೋಟಕ ಹೇಳಿಕೆ
- ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರದಲ್ಲಿದ್ದರೂ ವರ್ಚಸ್ಸಿಲ್ಲ



ಹುಬ್ಬಳ್ಳಿ, ಫೆ.1– ನನ್ನೊಂದಿಗೆ ಕಾಂಗ್ರೆಸ್ ಸೇರಿದವರೆಲ್ಲಾ ಬಿಜೆಪಿಗೆ ವಾಪಸ್ ಬರುತ್ತಾರೆ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಹುಬ್ಬಳ್ಳಿಯಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನನ್ನ ಜೊತೆ ಕಾಂಗ್ರೆಸ್ ಸೇರಿದವರೆಲ್ಲ ವಾಪಸ್ ಬರುತ್ತಾರೆ. ನಾವು ನಿಮ್ಮ ಜೊತೆ ಬಿಜೆಪಿಗೆ ಬರುತ್ತೇವೆ ಎನ್ನುತ್ತಿದ್ದಾರೆ. ಬೇರೆ ಜಿಲ್ಲೆಯ ಕಾಂಗ್ರೆಸ್ ಮುಖಂಡರು ಬಿಜೆಪಿ ಸೇರುವ ಇಂಗಿತ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್‌ನ ಬಹಳಷ್ಟು ಮಂದಿ ನನ್ನ ಸಂಪರ್ಕದಲ್ಲಿದ್ದು, ಅವರೆಲ್ಲರೂ ಶೀಘ್ರದಲ್ಲಿ ಬಿಜೆಪಿ ಸೇರಲಿದ್ದಾರೆ. ಕಾಂಗ್ರೆಸ್ ಅಧಿಕಾರದಲ್ಲಿದ್ದರೂ ಪಕ್ಷದ ವರ್ಚಸ್ಸು ಬೆಳೆಯುತ್ತಿಲ್ಲ. ಹೀಗಾಗಿ ಕಾಂಗ್ರೆಸ್ ತೊರೆಯಲು ಮನಸ್ಸು ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳಲ್ಲಿ ಕಾಂಗ್ರೆಸ್ ಗೆದ್ದರೆ ಮಾತ್ರ ಗ್ಯಾರಂಟಿ ಯೋಜನೆಗಳು ಮುಂದುವರೆಯುತ್ತವೆ ಎಂಬ ಶಾಸಕ ಬಾಲಕೃಷ್ಣ ಹೇಳಿಕೆಗೆ ಪ್ರತಿಕ್ರಿಯಿಸಿದ ಶೆಟ್ಟರ್, ಇದು ಕಾಂಗ್ರೆಸ್‌ನ ಮನಸ್ಥಿತಿ ತೋರಿಸುತ್ತದೆ. ಚುನಾವಣೆಗಾಗಿ ಭಾಗ್ಯಗಳನ್ನು ಕೊಟ್ಟರು ಎಂಬ ಭಾವನೆ ಜನರಲ್ಲಿ ಮೂಡಿದೆ. ಲೋಕಸಭೆ ಚುನಾವಣೆ ನಂತರ ಭಾಗ್ಯಗಳು ಇರುವುದಿಲ್ಲ ಎನ್ನುವಂತಹ ಪರಿಸ್ಥಿತಿ ಕಾಣಿಸುತ್ತಿದೆ ಎಂದರು.

ಪಕ್ಷ ಹೇಳಿದರೆ ಸ್ಪರ್ಧೆ: ನಾನು ಪಕ್ಷ ಕೊಡುವ ಯಾವುದೇ ಜವಾಬ್ದಾರಿಯನ್ನಾದರೂ ನಿರ್ವಹಿಸುತ್ತೇನೆ. ಪಕ್ಷ ಹೇಳಿದರೆ ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ನಾನು ಸಿದ್ಧ. ಬಿಜೆಪಿ ವರಿಷ್ಠರು ಗೌರವಯುತ ಸ್ಥಾನ ನೀಡುವ ಭರವಸೆ ನೀಡಿದ್ದಾರೆ. ಮೋದಿಯವರನ್ನು ಮತ್ತೊಮ್ಮೆ ಪ್ರಧಾನಮಂತ್ರಿ ಮಾಡಬೇಕು ಎನ್ನುವುದೇ ನಮ್ಮ ಗುರಿ ಎಂದು ಹೇಳಿದರು.

ಕೇಂದ್ರದ ಬಜೆಟ್ ಚುನಾವಣಾ ಬಜೆಟ್ ಅಲ್ಲ

- ಮಾಜಿ ಸಚಿವ ಎಸ್.ಎ.ರಾಮದಾಸ್ ಬಣ್ಣನೆ
- ಇದನ್ನು ಟೀಕಿಸುವ ವಿಪಕ್ಷಗಳ ಧೋರಣೆ ಬರೀ ರಾಜಕೀಯ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎಸ್.ಎ.ರಾಮದಾಸ್ ಮಾತನಾಡಿದರು. ಮುಖಂಡರಾದ ಪ್ರಸಾದ್ ಬಾಬು ಹಾಗೂ ಸಂತೋಷ್ ಹಾಜರಿದ್ದರು.

ಮೈಸೂರು, ಫೆ.1(ಎಸ್‌ಬಿಡಿ)– ಕೇಂದ್ರ ಸರ್ಕಾರ ದೂರದೃಷ್ಟಿತ್ವದ, ವಿವೇಚನಾಶೀಲ ಅತ್ಯದ್ಭುತ ಬಜೆಟ್ ನೀಡಿದೆ ಎಂದು ಮಾಜಿ ಸಚಿವ ಎಸ್.ಎ.ರಾಮದಾಸ್ ಬಣ್ಣಿಸಿದರು.

ಕೇಂದ್ರ ಸರ್ಕಾರದ ಮಧ್ಯಂತರ ಬಜೆಟ್ ಕುರಿತು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2024–25ನೇ ಸಾಲಿನ ಬಜೆಟ್ ಅನ್ನು ಭಾರತ ಮಾತ್ರವಲ್ಲ ವಿಶ್ವವೇ ಎದುರು ನೋಡುತ್ತಿತ್ತು. ಇನ್ನೆರಡು ತಿಂಗಳಲ್ಲಿ ಲೋಕಸಭಾ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಮತದಾರರನ್ನು ಸೆಳೆಯುವ ತಾತ್ಕಾಲಿಕ ಯೋಜನೆಗಳನ್ನೊಳಗೊಂಡ ಚುನಾವಣಾ ಬಜೆಟ್ ಮಂಡಿಸಬಹುದು ಎಂದು ಕಾಂಗ್ರೆಸ್‌ನವರು ನಿರೀಕ್ಷಿಸಿದ್ದರು. ಆದರೆ ಅದು ಹುಸಿಯಾಗಿದೆ. ಇದು ಚುನಾವಣಾ ಪ್ರಚಾರದ ಬಜೆಟ್ ಅಲ್ಲ ಎಂಬುದು ಸ್ಪಷ್ಟವಾಗಿದೆ ಎಂದರು.

ನೇರ ಹಾಗೂ ಪರೋಕ್ಷವಾದ ಯಾವುದೇ ತೆರಿಗೆ ಹೆಚ್ಚಿಸದೆ ಆರ್ಥಿಕ ಶಿಸ್ತಿನ ಪ್ರಗತಿಶೀಲ ಬಜೆಟ್ ನೀಡಲಾಗಿದೆ. ಇದೊಂದು ವಿವೇಚನಾಶೀಲವಾದ ಅತ್ಯದ್ಭುತವಾದ ಬಜೆಟ್. ಅಭಿವೃದ್ಧಿ, ಮೂಲಸೌಕರ್ಯ–ಬಂಡವಾಳ, ಹಣ ಕಾಸು ವಲಯ, ಸಾಮರ್ಥ್ಯ ಅನಾವರಣ, ಯುವಶಕ್ತಿ, ಪರಿಸರ ಸಂರಕ್ಷಣೆ ಹಾಗೂ ಎಲ್ಲರನ್ನೂ ತಲುಪುವುದು ಸೇರಿ ಪ್ರಮುಖ 7 ಆದ್ಯತೆಗಳನ್ನು ಈ ಬಜೆಟ್ ಒಳಗೊಂಡಿದೆ. ಸರಿಯಾದ ಹಾದಿಯಲ್ಲಿ ಸಾಗುತ್ತಿರುವ ದೇಶದ ಆರ್ಥಿಕತೆಗೆ ಈ ಬಜೆಟ್ ಪೂರಕವಾಗಿದೆ ಎಂದು ಅಭಿಪ್ರಾಯಿಸಿದರು.

ಬಡವರು, ಮಹಿಳೆಯರು, ರೈತರು ಹಾಗೂ ಯುವ ಸಮುದಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಬಜೆಟ್ ರೂಪಿಸಲಾಗಿದೆ. ಸಾಮಾಜಿಕ ನ್ಯಾಯಕ್ಕೆ ಆದ್ಯತೆ ನೀಡಲಾಗಿದೆ. ವಿಕಸಿತ ಭಾರತ–2047ರ ಸಾಧನೆಗೆ ಸಹಕಾರಿಯಾಗಿದೆ. ಪಿಎಂ ಆವಾಸ್ ಯೋಜನೆ ವಿಸ್ತರಿಸಿ ಹೆಚ್ಚುವರಿ 2 ಕೋಟಿ ಮನೆ ನೀಡುವುದರ ಜೊತೆಗೆ ಬಾಡಿಗೆ ಮನೆ, ಸ್ಲಂ ನಿವಾಸಿಗಳು ಸೇರಿದಂತೆ ಮಧ್ಯಮ ವರ್ಗದವರಿಗೆ ಮನೆ ನಿರ್ಮಾಣ ಅಥವಾ ಕೊಳ್ಳಲು ನೂತನವಾಗಿ ವಸತಿ ಯೋಜನೆ ಘೋಷಿಸಲಾಗಿದೆ. ತೆರಿಗೆದಾರರ ಹಳೇ ವ್ಯಾಜ್ಯಗಳ ಇತ್ಯರ್ಥಕ್ಕೆ ಕ್ರಮ, ಆರ್ಥಿಕ ರೈಲು ಕಾರಿಡಾರ್ ಯೋಜನೆ, ರೈತರ ಅಭಿವೃದ್ಧಿಗಾಗಿ ಸರ್ಕಾರಿ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಯೋಜನೆ, ಹಾಲು ಉತ್ಪಾದಕರಿಗೆ ಪೂರಕ ಸಮಗ್ರ ಯೋಜನೆ, ಆಶಾ, ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕರಿಗೆ ಆರೋಗ್ಯ ಸೇವೆ, ಮೀನು ಯೋಜನೆಗೆ ಉತ್ತೇಜನ, 40 ಸಾವಿರ ರೈಲು ಬೋಗಿಗಳು ಮೇಲ್ದರ್ಜೆಗೆ, ಮಕ್ಕಳು ಮತ್ತು ಮಹಿಳೆಯರ ಆರೋಗ್ಯಕ್ಕೆ ಸಮಗ್ರ ಯೋಜನೆ, ಖಾಸಗಿ ಸಹಭಾಗಿತ್ವದಲ್ಲಿ ತಂತ್ರಜ್ಞಾನ, ಉದ್ಯೋಗ ಸೃಜನೆಗೆ ಕಾರ್ಯಕ್ರಮ, ಕಾರ್ಪೊರೇಟ್ ವಲಯದ ತೆರಿಗೆ ಇಳಿಕೆ, ಆತ್ಮನಿರ್ಭರದಡಿ ಎಣ್ಣೆಕಾಳು ಬೆಳೆಗೆ ವಿಶೇಷ ಪ್ರೋತ್ಸಾಹ. ಹೀಗೆ ದೂರದೃಷ್ಟಿತ್ವದ ಹತ್ತಾರು ಯೋಜನೆಗಳು ಬಜೆಟ್‌ನಲ್ಲಿವೆ ಎಂದು ತಿಳಿಸಿದರು.

ಆರಂಭದಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ 10 ವರ್ಷಗಳ ಆಡಳಿತ, ಅಭಿವೃದ್ಧಿ, ಸುಧಾರಣೆಯ ಬಗ್ಗೆ ವರದಿ ನೀಡಿದ್ದು, ಜನರಲ್ಲಿ ನಂಬಿಕೆ–ವಿಶ್ವಾಸ ಹೆಚ್ಚಿಸಿದೆ. ಚುನಾವಣೆ ಹೊಸ್ತಿಲಲ್ಲಿ ದೇಶದ ಆರ್ಥಿಕ ಅಭಿವೃದ್ಧಿಗೆ ಪೂರಕವಾದ ಉತ್ತಮ ಬಜೆಟ್ ನೀಡಿದ್ದಕ್ಕೆ ಪ್ರಧಾನಿ ಮೋದಿಯವರು ಹಾಗೂ ವಿತ್ತ ಸಚಿವೆಯಾಗಿ 6ನೇ ಬಾರಿ ಬಜೆಟ್ ಮಂಡಿಸಿದ ನಿರ್ಮಲಾ ಸೀತಾರಾಮನ್ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.

ಚರ್ಚೆಗೆ ಸಿದ್ಧನಿದ್ದೇನೆ...

ಉಚಿತ ಯೋಜನೆ ನೀಡುವ ಚಿಂತನೆ ಬಿಜೆಪಿಗಿಲ್ಲ. ಆದರೆ ಅಧಿಕಾರಾವಧಿಯಲ್ಲಿ ನೀರಾವರಿ ಸೇರಿದಂತೆ ಹಲವು ಯೋಜನೆಗಳಿಗೆ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೂ ಅನುದಾನ ನೀಡಿದೆ. ಕಳೆದ 10 ವರ್ಷದಲ್ಲಿ ಎನ್‌ಡಿಎ ಸರ್ಕಾರ ಹಾಗೂ ಅದಕ್ಕೂ ಹಿಂದಿನ 10 ವರ್ಷಗಳ ಯುಪಿಎ ಸರ್ಕಾರ ಎಷ್ಟು ಹಣ ನೀಡಿವೆ ಎನ್ನುವ ಬಗ್ಗೆ ದಾಖಲೆ ಸಹಿತ ಚರ್ಚೆಗೆ ಸಿದ್ಧನಿದ್ದೇನೆ.

-ಎಸ್.ಎ.ರಾಮದಾಸ್

ರಾಹುಲ್‌ಗಾಂಧಿ ಜೋಡಿಸಿದರೆ ಅವರ ಪಕ್ಷದ ಸಂಸದ ದೇಶ ಒಡೆಯಲು ಹೊರಟಿದ್ದಾರೆ

ಮೈಸೂರು, ಫೆ.1– ರಾಷ್ಟ್ರ ವಿಭಜನೆ ಮಾತುಗಳನ್ನಾಡಿರುವ ಸಂಸದ ಡಿ.ಕೆ. ಸುರೇಶ್, ಕೂಡಲೇ ದೇಶದ ಜನರ ಕ್ಷಮೆ ಯಾಚಿಸಬೇಕು ಎಂದು ಮಾಜಿ ಸಚಿವ ಎಸ್.ಎ.ರಾಮದಾಸ್ ಆಗ್ರಹಿಸಿದ್ದಾರೆ. ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಮುಂದುವರೆಸಿದರೆ ದಕ್ಷಿಣ ರಾಜ್ಯಗಳೆಲ್ಲಾ ಸೇರಿ ಪ್ರತ್ಯೇಕ ರಾಷ್ಟ್ರಕ್ಕೆ ಒತ್ತಾಯಿಸಬೇಕಾಗುತ್ತದೆ ಎಂಬ ಸಂಸದ ಡಿ.ಕೆ.ಸುರೇಶ್ ಹೇಳಿಕೆಗೆ ಪ್ರತಿಕ್ರಿಯಿಸಿದ ಎಸ್.ಎ.ರಾಮದಾಸ್, ಪ್ರತ್ಯೇಕ ರಾಷ್ಟ್ರಕ್ಕೆ ಧ್ವನಿ ಎತ್ತಿದ್ದು ಖಂಡಿತವಾಗಿ ಸರಿಯಲ್ಲ. ದೇಶದ ಬಗ್ಗೆ ಪ್ರೀತಿ ಇರುವವರು ಈ ರೀತಿಯ ಮಾತುಗಳನ್ನಾಡುವುದಿಲ್ಲ ಎಂದರು.

ದಕ್ಷಿಣ ಭಾರತದ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಅಧಿಕಾರದಲ್ಲಿದ್ದರೂ ಈವರೆಗೆ ಯಾರೂ ಪ್ರತ್ಯೇಕ ರಾಷ್ಟ್ರದ ಮಾತುಗಳನ್ನಾಡಿಲ್ಲ. ಡಿ.ಕೆ.ಸುರೇಶ್ ಅವರು ಮಾಧ್ಯಮಗಳ ಗಮನ ಸೆಳೆಯುವ ಉದ್ದೇಶದಿಂದ ಚರ್ಚೆ ಹುಟ್ಟಿಸುವ ಹೇಳಿಕೆ ನೀಡಿದ್ದಾರೆ. ಇದು ಅವರ ವೈಯಕ್ತಿಕ ಹೇಳಿಕೆ. ಭಾರತದ ಸಮಗ್ರತೆಗೆ ಧಕ್ಕೆ ತರುವಂತಹ ಹೇಳಿಕೆ ನೀಡಿದ್ದರೂ ಕಾಂಗ್ರೆಸ್ ನಾಯಕರು ಖಂಡನೆ ವ್ಯಕ್ತಪಡಿಸಿಲ್ಲ. ಎಐಸಿಸಿ, ಕೆಪಿಸಿಸಿ ದುರ್ಬಲವಾಗಿವೆ ಎಂಬುದಕ್ಕೆ ಇದು ಸಾಕ್ಷಿ. ಈಗಲಾದರೂ ನೋಟೀಸ್ ನೀಡಿ, ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು. ಡಿ.ಕೆ.ಸುರೇಶ್ ಕೂಡಲೇ ಜನತೆಯ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದರು.

ಒಂದೆಡೆ ರಾಹುಲ್ ಗಾಂಧಿ ಅವರು ಯಾತ್ರೆ ಮೂಲಕ ಭಾರತ್ ಜೋಡೋ ಎನ್ನುತ್ತಾರೆ. ಮತ್ತೊಂದೆಡೆ ಅವರದೇ ಪಕ್ಷದ ಸಂಸದ ದೇಶದ ಇಬ್ಭಾಗದ ಮಾತನಾಡುತ್ತಿದ್ದಾರೆ. ರಾಹುಲ್ ಗಾಂಧಿಯವರು ಕೂಡ ಚೀನಾಗೆ ಹೋದಾಗ ತಮ್ಮ ಸಂಸ್ಥೆಗೆ ಸಂಬಂಧಿಸಿದ ವಿಚಾರದಲ್ಲಿ ರಹಸ್ಯವಾಗಿ ಒಪ್ಪಂದ ಮಾಡಿಕೊಂಡಿದ್ದಾರೆ. ಯಾರಿಗೂ ಗೊತ್ತಾಗದಂತೆ ವಿಮಾನದಿಂದ ಮತ್ತೊಂದು ವಿಮಾನಕ್ಕೆ ರಹಸ್ಯವಾಗಿ ತೆರಳಿ ಒಪ್ಪಂದಗಳಿಗೆ ರಾಹುಲ್ ಗಾಂಧಿ ಸಹಿ ಹಾಕಿದ್ದಾರೆ. ಇವರು ಚೀನಾ ಹಕ್ಕು ಸ್ಥಾಪಿಸಲು ಯತ್ನಿಸಿರುವ ಅರುಣಾಚಲವನ್ನು ಬಿಟ್ಟು ಮಣಿಪುರದಿಂದ ಏಕೆ ಯಾತ್ರೆ ಆರಂಭಿಸಿದರು ಎಂದು ರಾಮದಾಸ್ ಪ್ರಶ್ನಿಸಿದರು.

ಲೋಕಸಭೆಗೆ ನಾನು ಸ್ಪರ್ಧಿಸಲ್ಲ

ಮೈಸೂರು, ಫೆ.1– ಲೋಕಸಭಾ ಚುನಾವಣೆಯಲ್ಲಿ ನಾನು ಸ್ಪರ್ಧೆ ಮಾಡುವುದಿಲ್ಲ ಎಂದು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಪಕ್ಷ ಯಾವುದೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೂ ಅವರ ಗೆಲುವಿಗೆ ಶ್ರಮಿಸುತ್ತೇವೆ ಎಂದು ಮಾಜಿ ಸಚಿವ ಎಸ್.ಎ.ರಾಮದಾಸ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದರಿಂದಲೇ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಲೋಕಸಭಾ ಕ್ಷೇತ್ರಗಳ ಕ್ಲಸ್ಟರ್ ಮಾಡಿ ನನಗೆ ಜವಾಬ್ದಾರಿ ನೀಡಿದ್ದಾರೆ. ಜೊತೆಗೆ ಸ್ವನಿಧಿ ಹಾಗೂ ವಿಶ್ವಕರ್ಮ ಯೋಜನೆ ಸಂಚಾಲಕನನ್ನಾಗಿ ಮಾಡಿದ್ದಾರೆ. ಪಕ್ಷದ ನಿರ್ಧಾರಕ್ಕೆ ಬದ್ಧನಾಗಿ ಕೆಲಸ ಮಾಡುತ್ತೇನೆ ಎಂದರು.

ಸಾರ್ವಜನಿಕವಾಗಿ ಯಾವುದೇ ರೀತಿಯ ಚರ್ಚೆ ಇರಬಹುದು. ಆದರೆ ಗೆಲ್ಲುವ ಮಾನದಂಡ ಆಧರಿಸಿ ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳನ್ನು ಪಕ್ಷ ಆಯ್ಕೆ ಮಾಡುತ್ತದೆ. ಹಾಲಿ ಸದಸ್ಯರನ್ನೇ ಮತ್ತೆ ಕಣಕ್ಕಿಳಿಸಬಹುದು ಅಥವಾ ಹೊಸಬರಿಗೆ ಅವಕಾಶ ನೀಡಬಹುದು. ಈ ಬಾರಿಯ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ 400ಕ್ಕೂ ಹೆಚ್ಚು ಕ್ಷೇತ್ರಗಳನ್ನು ಗೆಲ್ಲುವ ಗುರಿ ಹೊಂದಿದೆ. ಹಾಗಾಗಿ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವಾಗ ಎಲ್ಲಾ ಅಂಶವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಗೆಲ್ಲುವ ಸಾಮರ್ಥ್ಯ ಇರುವ ಅಭ್ಯರ್ಥಿಗೆ ಟಿಕೆಟ್ ನೀಡಲಾಗುತ್ತದೆ. ಪಕ್ಷ ಯಾವುದೇ ತೀರ್ಮಾನ ತೆಗೆದುಕೊಂಡರೂ ಅದಕ್ಕೆ ನಾವು ಬದ್ಧರಾಗಿರುತ್ತೇವೆ. ಯಾರಿಗೆ ಟಿಕೆಟ್ ದೊರೆತರೂ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸುವ ಮೂಲಕ ಅವರನ್ನು ಗೆಲ್ಲಿಸುತ್ತೇವೆ. ಹಳೇ ಮೈಸೂರು ಭಾಗದ ನಾಲ್ಕು ಕ್ಷೇತ್ರಗಳ ಅಭ್ಯರ್ಥಿಗಳನ್ನು ಗೆಲ್ಲಿಸುವ ಜವಾಬ್ದಾರಿ ಈಗ ನನ್ನ ಮೇಲಿದೆ ಎಂದು ಅವರು ತಿಳಿಸಿದರು.

ಬಿಜೆಪಿ, ಜೆಡಿಎಸ್ ಸರ್ಕಾರಕ್ಕೆ ಹೆಜ್ಜೆ, ಹೆಜ್ಜೆಗೂ ಡ್ಯಾಮೇಜ್ ಮಾಡ್ತಿವೆ...

ಸಚಿವರ ಡಿನ್ನರ್ ಮೀಟಿಂಗ್‌ನಲ್ಲಿ ಸಿಎಂ ಸಿದ್ದರಾಮಯ್ಯ ಕಳವಳ

ಬೆಂಗಳೂರು: ಲೋಕಸಭೆ ಚುನಾವಣೆ ಹಿನ್ನೆಲೆ ಹಾಗೂ ಕೇಂದ್ರ ಬಜೆಟ್ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ರಾತ್ರಿ ಮಂತ್ರಿಗಳ ಭೋಜನ ಕೂಟ ನಡೆಸಿದ್ದು, ಮುಂದಿನ ದಿನಗಳಲ್ಲಿ ಪಕ್ಷ ಹಾಗೂ ಸರಕಾರದ ಕಾರ್ಯತಂತ್ರ ಹೇಗಿರಬೇಕೆಂಬ ಚಿಂತನ–ಮಂಥನ ನಡೆದಿದೆ.

ಗುರುವಾರ ಮಧ್ಯಾಹ್ನ ಸಚಿವ ಸಂಪುಟ ಸಭೆಯಲ್ಲೇ ರಾತ್ರಿ ಊಟಕ್ಕೆ ಎಲ್ಲರನ್ನೂ ಆಹ್ವಾನಿಸಿದ್ದ ಸಿಎಂ, ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಕಾವೇರಿ ನಿವಾಸಕ್ಕೆ ತೆರಳಿದರು. ಎಲ್ಲ ಸಚಿವರೊಂದಿಗೆ ಭೋಜನ ಕೂಟದ ನೆಪದಲ್ಲಿ ಲೋಕಸಭೆ ಚುನಾವಣೆಗೆ ತಂತ್ರಗಾರಿಕೆ ರೂಪಿಸಿದರು.

ಸಂಪುಟ ಸಭೆಯಲ್ಲಿ ಪ್ರಸ್ತಾವವಾದ ಕೆಲವು ವಿಷಯಗಳನ್ನು ಮತ್ತೆ ಚರ್ಚಿಸಿದ ಸಚಿವರು, ಹಿಂದುತ್ವ, ಅಯೋಧ್ಯೆ ರಾಮಮಂದಿರ, ಮಂಡ್ಯದ ಹನುಮಧ್ವಜ ಪ್ರಕರಣದಂತಹ ಸೂಕ್ಷ್ಮ ವಿಚಾರಗಳಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯ ಹೇಳಿಕೆ ಕೊಟ್ಟು ಜನರ ಭಾವನೆಗಳಿಗೆ ಧಕ್ಕೆ ತರುವುದರಿಂದ ಚುನಾವಣೆ ವೇಳೆ ಪಕ್ಷದ ಮೇಲೆ ದುಷ್ಪರಿಣಾಮ ಬೀರುತ್ತದೆ. ಹೀಗಾಗಿ ಅತಿರೇಕದ ಹೇಳಿಕೆಗಳನ್ನು ನೀಡಬಾರದೆಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಇತ್ತೀಚೆಗಿನ ವಿದ್ಯಮಾನಗಳನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದೇವೆ ಎಂಬ ಆಪಾದನೆಯನ್ನು ಹೊತ್ತುಕೊಳ್ಳಬೇಕಾಗುತ್ತಿದೆ. ಅದರಲ್ಲೂ ವಿಪಕ್ಷ ಬಿಜೆಪಿ ಹಾಗೂ ಜೆಡಿಎಸ್ ಒಂದಾಗಿರುವುದರಿಂದ ಹೆಜ್ಜೆ–ಹೆಜ್ಜೆಗೂ ಸರಕಾರಕ್ಕೆ ಹಾನಿಯುಂಟು ಮಾಡುತ್ತಿವೆ. ನಾವೂ ಎಚ್ಚರಿಕೆಯ ಹೆಜ್ಜೆಗಳನ್ನಿಡುವುದು ಒಳಿತು ಎಂಬ ಅಭಿಪ್ರಾಯ ಕೇಳಿಬಂದಿದೆ.

ಇದಕ್ಕೆ ಕೆಲ ಸಚಿವರು ಆಕ್ಷೇಪಿಸಿದ್ದು, ಇದುವರೆಗಿನ ಪ್ರತಿಯೊಂದು ಘಟನೆಯನ್ನು ಸರಿಯಾಗಿಯೇ ನಿರ್ವಹಿಸಿದ್ದೇವೆ. ಯಾರೂ ಅತಿರೇಕದ ಹೇಳಿಕೆಗಳನ್ನು ಕೊಟ್ಟಿಲ್ಲ. ವಿಪಕ್ಷಗಳನ್ನು ಒಗ್ಗಟ್ಟಾಗಿ ಎದುರಿಸೋಣ. ಸಿಎಂ ಬೆಂಬಲಕ್ಕೆ ನಿಲ್ಲೋಣ ಎನ್ನುವ ಮೂಲಕ ಚರ್ಚೆಗೆ ಅಂತ್ಯ ಹಾಡಿದ್ದಾರೆ.

ಕೇಂದ್ರ ಸರ್ಕಾರದ ಮಧ್ಯಂತರ ಬಜೆಟ್

ಮೈಸೂರು ಭಾಗದ ಬಿಜೆಪಿ, ಕಾಂಗ್ರೆಸ್ ಜನಪ್ರತಿನಿಧಿಗಳು, ಉದ್ಯಮಿಗಳು, ಆರ್ಥಿಕ ತಜ್ಞರು, ವ್ಯಾಪಾರಸ್ಥರು, ರೈತ ಮುಖಂಡರಿಂದ ಮಿಶ್ರ ಪ್ರತಿಕ್ರಿಯೆ

ಮೈಸೂರು, ಫೆ.1(ಎಂಕೆ, ಪಿಎಂ)– ಕೇಂದ್ರ ಸರ್ಕಾರದ ಮಧ್ಯಂತರ ಬಜೆಟ್ ಕುರಿತು ಮೈಸೂರು ಭಾಗದ ಜನಪ್ರತಿನಿಧಿಗಳು, ಉದ್ಯಮಿಗಳು, ಆರ್ಥಿಕ ತಜ್ಞರು, ವ್ಯಾಪಾರಸ್ಥರು, ರೈತ ಮುಖಂಡರು ಸೇರಿದಂತೆ ವಿವಿಧ ಕ್ಷೇತ್ರದವರು 'ಮೈಸೂರು ಮಿತ್ರ'ನಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ನುಡಿದಂತೆ ನಡೆಯದ, ಪ್ರಯೋಜನವಿಲ್ಲದ ನಿರಾಶಾದಾಯಕ ಬಜೆಟ್



ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ತಮ್ಮ ಬಜೆಟ್ ಭಾಷಣದಲ್ಲಿ ಬಡವರು, ಮಹಿಳೆಯರು, ಯುವಕರು ಮತ್ತು ಅನ್ನದಾತರು ಎಂಬ ಪದವನ್ನು ಬಳಸಿರುವುದಷ್ಟೇ ಭಾಗ್ಯ. ಕೇವಲ ಕಾರ್ಪೊರೇಟ್ ಹಿತಾಸಕ್ತಿಗಾಗಿ ಕೆಲಸ ಮಾಡುತ್ತಿರುವ ಕೇಂದ್ರ ಸರ್ಕಾರ, ಚುನಾವಣೆಯ ಉದ್ದೇಶದಿಂದ ಸುಳ್ಳುಗಳ ಸರಮಾಲೆಯನ್ನೇ ಮುಂದುವರೆಸಿದೆ. ಕಳೆದ 10 ವರ್ಷಗಳಲ್ಲಿನ ಪ್ರತೀ ಬಜೆಟ್‌ನಲ್ಲೂ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ ವಿನಃ ಅವುಗಳನ್ನು ಕಾರ್ಯರೂಪಕ್ಕೆ ತಂದು ಜನರ ಬದುಕಿಗೆ ಸಹಾಯ ಮಾಡಿರುವುದು ತುಂಬಾ ಕಡಿಮೆ. ಹೀಗಾಗಿ ಇದು ಕೂಡ ನುಡಿದಂತೆ ನಡೆಯದ ನಿರಾಶಾದಾಯಕ ಬಜೆಟ್ ಆಗಿದೆ. **–ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ**

ಸುಳ್ಳು ಆಶ್ವಾಸನೆಗಳಿಲ್ಲದ ಬಡವರ ಪರವಾದ ಬಜೆಟ್



ಬಡವರು, ಮಹಿಳೆಯರು, ಅನ್ನದಾತರು ಮತ್ತು ಯುವಕರನ್ನು ಕೇಂದ್ರೀಕರಿಸಿ ಸುಳ್ಳು ಆಶ್ವಾಸನೆಗಳಿಲ್ಲದ ಒಳ್ಳೆಯ ಬಜೆಟ್ ಇದಾಗಿದೆ. ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಆಯುಷ್ಮಾನ್ ಭಾರತ್ ಯೋಜನೆ ವಿಸ್ತರಣೆ ಮಾಡಿರುವುದು ಭಾರಿ ಪರಿಣಾಮಕಾರಿಯಾಗಿದೆ. ಕೊರೊನೊ ಸಂದರ್ಭದಲ್ಲಿ ದೊಡ್ಡಮಟ್ಟದಲ್ಲಿ ಸೇವೆ ಸಲ್ಲಿಸಿದವರನ್ನು ಗುರ್ತಿಸಿರುವುದು ಬಹಳ ವಿಶೇಷವಾಗಿದೆ. ಆದಾಯ ತೆರಿಗೆಯಲ್ಲಿ ಬದಲಾವಣೆ ಮಾಡದಿರುವುದು, ಎಲೆಕ್ಟ್ರಿಕ್ ವಾಹನ ಉತ್ಪಾದನೆ, ಚಾರ್ಜಿಂಗ್ ಸ್ಟೇಷನ್ ಹೆಚ್ಚಳಕ್ಕೆ ಆದ್ಯತೆ, ಮೆಟ್ರೋ ರೈಲು ಮಾರ್ಗ ವಿಸ್ತರಣೆ, ಉಡಾನ್ ಯೋಜನೆಗೆ 517 ಹೊಸ ಮಾರ್ಗ, ಮಹಿಳೆಯರ ಆರ್ಥಿಕ ಸ್ವಾವಲಂಬನೆಗಾಗಿ 'ಲಕ್ಷಾಧಿಪತಿ ದಿದಿ' ಯೋಜನೆ ಸೇರಿದಂತೆ ಇದೊಂದು ಜನಪರ ಬಜೆಟ್ ಆಗಿದೆ. **–ಜಿ.ಟಿ.ದೇವೇಗೌಡ, ಶಾಸಕ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ**

ಮಧ್ಯಂತರ ಬಜೆಟ್ ಕೇವಲ ಚುನಾವಣೆ ಗಿಮಿಕ್



ಕೇಂದ್ರ ಸರ್ಕಾರದ ಮಧ್ಯಂತರ ಬಜೆಟ್ ಮುಂಬರುವ ಲೋಕಸಭಾ ಚುನಾವಣೆಯ ಗಿಮಿಕ್ ಆಗಿದೆ. ದೇಶದ ಜನತೆಗೆ ಯಾವುದೇ ಲಾಭದಾಯಕ ಯೋಜನೆಗಳಿಲ್ಲ. ಕರ್ನಾಟಕ ರಾಜ್ಯಕ್ಕೆ ಯಾವೊಂದು ಯೋಜನೆಗಳಿಲ್ಲ. ಉದ್ಯೋಗ ಸೃಷ್ಟಿ ಎಂಬುದು ಕೇವಲ ಘೋಷಣೆಗಷ್ಟೇ ಸೀಮಿತವಾಗಿದೆ. ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರಿಗೆ ರಾಜ್ಯ ಸರ್ಕಾರ ನೀಡಿರುವಷ್ಟು ಯೋಜನೆಗಳನ್ನು ನೀಡಿಲ್ಲ.

–ಕೆ.ಹರೀಶ್‌ಗೌಡ, ಶಾಸಕ, ಚಾಮರಾಜ ವಿಧಾನಸಭಾ ಕ್ಷೇತ್ರ

ಕೇಂದ್ರದಿಂದ ಜನಪರ ಬಜೆಟ್



ಇದೊಂದು ಜನಪರ ಬಜೆಟ್. ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಧ್ಯೇಯದೊಂದಿಗೆ ಮಹಿಳೆಯರು, ಅನ್ನದಾತರು, ಯುವಕರನ್ನು ಸ್ವಾವಲಂಬಿಗಳನ್ನಾಗಿಸುವ ಅತ್ಯುತ್ತಮ ಬಜೆಟ್. ಪ್ರವಾಸೋದ್ಯಮ ಅಭಿವೃದ್ಧಿಗೆ ಉಡಾನ್ ಯೋಜನೆಯಡಿ 517 ಹೊಸ ಮಾರ್ಗದ ಮೂಲಕ ಸಣ್ಣ ನಗರಗಳಿಗೂ ವಿಮಾನ ಸೌಲಭ್ಯ, ಲಕ್ಷದ್ವೀಪ ಸೇರಿದಂತೆ ದ್ವೀಪಗಳಿಗೆ ವಿಶೇಷ ಪ್ರವಾಸ ಪ್ಯಾಕೆಜ್, ಪ್ರವಾಸೋದ್ಯಮಕ್ಕೆ ಬಡ್ಡಿ ರಹಿತ ಸಾಲ, ವಿಮಾನಗಳ ಖರೀದಿ, ಸೋಲಾರ್ ವಿದ್ಯುತ್ ಪೂರೈಕೆ ಸೇರಿದಂತೆ ಹತ್ತು–ಹಲವು ಜನಪರ ಕಾರ್ಯಕ್ರಮಗಳಿರುವ ಉತ್ತಮ ಬಜೆಟ್ ಇದಾಗಿದೆ.

– ಟಿ.ಎಸ್.ಶ್ರೀವತ್ಸ, ಶಾಸಕ, ಕೆ.ಆರ್.ಕ್ಷೇತ್ರ

ಜನರ ಹಿತದೃಷ್ಟಿಯುಳ್ಳ ಬಜೆಟ್ ಹೊರತು ಚುನಾವಣಾ ಬಜೆಟ್ ಅಲ್ಲ



ಜನರ ಹಿತದೃಷ್ಟಿಯುಳ್ಳ ಒಳ್ಳೆಯ ಬಜೆಟ್. ಚುನಾವಣೆ ದೃಷ್ಟಿಯಿಂದ ಬಜೆಟ್ ಮಾಡಿಲ್ಲ ಎಂಬುದನ್ನು ಕಾಂಗ್ರೆಸ್‌ನವರು ಮೊದಲು ಅರ್ಥ ಮಾಡಿಕೊಳ್ಳಬೇಕು. ಬಜೆಟ್‌ನಲ್ಲಿ ಮಹಿಳೆಯರಿಗೆ ಸಾಕಷ್ಟು ಕೊಡುಗೆ ನೀಡಲಾಗಿದೆ. ಭ್ರಷ್ಟಾಚಾರ ಮುಕ್ತ ಆಡಳಿತ ನೀಡುತ್ತಿರುವ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಜನಪರ ಆಡಳಿತವನ್ನು ರಾಜ್ಯ ಸರ್ಕಾರಗಳು ನೋಡಿ ಅಳವಡಿಸಿಕೊಳ್ಳಬೇಕಾಗಿರುವುದು ಸಾಕಷ್ಟಿದೆ. ತೆರಿಗೆ ಯಥಾಸ್ಥಿತಿ ಮುಂದುವರೆಸಿರುವುದು ಹಾಗೂ ಮಧ್ಯಮ ವರ್ಗದ ಜನರಿಗೆ ಮುಂದಿನ 5 ವರ್ಷಗಳಲ್ಲಿ ಮೂರು ಕೋಟಿ ಹೊಸ ಮನೆ ನಿರ್ಮಾಣ ಮಾಡುವುದಾಗಿ ಘೋಷಣೆ ಮಾಡಿರುವುದು ಅತ್ಯಂತ ಶ್ಲಾಘನೀಯ.

– ಎಲ್.ನಾಗೇಂದ್ರ, ಮಾಜಿ ಶಾಸಕ

ಆಶಾದಾಯಕ ಬಜೆಟ್



ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಮಧ್ಯಂತರ ಬಜೆಟ್ ಆಶಾದಾಯಕವಾಗಿದೆ. ಆಯುಷ್ಮಾನ್ ಭಾರತ್ ಯೋಜನೆ, ಆಶಾ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ಆರೋಗ್ಯ ವಿಮೆ ವಿಸ್ತರಿಸಿರುವುದು ಒಳ್ಳೆಯ ಬೆಳವಣಿಗೆ. ಎಲೆಕ್ಟ್ರಿಕಲ್ ವಾಹನಗಳಿಗೆ ಉತ್ತೇಜನ, ಲಕ್ಷದ್ವೀಪ ಪ್ರವಾಸೋದ್ಯಮಕ್ಕೆ ಆದ್ಯತೆ, ರಕ್ಷಣೆ, ಗ್ರಾಮೀಣಾಭಿವೃದ್ಧಿ, ಕೃಷಿ, ಸಹಕಾರಿ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ನೀಡಿರುವುದು ಭವಿಷ್ಯದಲ್ಲಿ ಭಾರತ ಮತ್ತಷ್ಟು ಗಟ್ಟಿಯಾಗಲಿದೆ.

–ಸಿ.ಎನ್.ಮಂಜೇಗೌಡ, ವಿಧಾನಪರಿಷತ್ ಸದಸ್ಯ

ಅರೆಬೆಂದ ಮತ್ತು ರುಚಿ ರಹಿತ ಬಜೆಟ್



ಕರ್ನಾಟಕದ ಬಜೆಟ್ ಗ್ಯಾರಂಟಿ ಯೋಜನೆಗಳನ್ನು ಒಳಗೊಂಡು ಬಡವರ ಹಸಿವು ನೀಗಿಸಿ, ಮಹಿಳೆಯರ ಕಣ್ಣೀರು ಒರೆಸಿ ಆರ್ಥಿಕ ಸ್ವಾವಲಂಬನೆ ಕಟ್ಟಿಕೊಟ್ಟಿತ್ತು. ಅದರಂತೆ ಕೇಂದ್ರ ಚುನಾವಣಾ ಪೂರ್ವ ಬಜೆಟ್ ಎಲ್ಲರಿಗೂ ಒಳ್ಳೆಯದಾಗಲಿದೆ ಎಂಬ ಆಶಾ ಭಾವನೆ ಮೂಡಿಸಿತ್ತು. ಆದರೆ, ಬಜೆಟ್ ಘೋಷಣೆಯಾದ ನಂತರ ಅದೊಂದು ನಿರಾಶಾದಾಯಕ ಮತ್ತು ಉಳ್ಳವರ ಹೊಟ್ಟೆ ತುಂಬಿಸುವ ಬಜೆಟ್ ಎಂಬುದು ಸ್ಪಷ್ಟವಾಗಿದೆ. ಮನೆ ಹೊರನೋಟಕ್ಕೆ ನೋಡಲು ಸುಂದರವಾಗಿದ್ದು, ಒಳಗಡೆ ಮುರಿದ ಪರಿಕರಗಳು, ಸೋರುವ ಚಾವಣಿಯನ್ನು ಒಳಗೊಂಡಿರುವ ಖಾಲಿ ಅರೆಬೆಂದ ರುಚಿ ಇಲ್ಲದ ಬಜೆಟ್ ಆಗಿದೆ. **–ಎಂ.ಕೆ.ಸೋಮಶೇಖರ್, ಮಾಜಿ ಶಾಸಕ**

ದೇಶ ಸಾಲದ ಸುಳಿಯಿಂದ ಹೊರಬರುವ ಮಾರ್ಗಗಳೇ ಇಲ್ಲದ ಬಜೆಟ್



ಐದು ಟ್ರಿಲಿಯನ್ ಆರ್ಥಿಕತೆ ರೂಪಿಸುವುದಿರಲಿ, ದೇಶ ಸದ್ಯ ಸಿಲುಕಿರುವ ಸಾಲದ ಸುಳಿಯಿಂದ ಹೊರಬರಲೂ ಸಾಧ್ಯವಾಗದಷ್ಟು ಹಣಕಾಸು ದುಸ್ಥಿತಿಯನ್ನು ಬಿಜೆಪಿ ಸರ್ಕಾರ ಮಂಡಿಸಿರುವ ಮಧ್ಯಂತರ ಬಜೆಟ್ ಪ್ರಸ್ತಾವನೆಯಲ್ಲಿ ಗೋಚರಿಸುತ್ತಿದೆ. 25 ಲಕ್ಷ ಕೋಟಿ ರೂ. ಮೀರುವ ಹೊಸ ಸಾಲ ಪಡೆಯಲು ಮುಂದಾಗಿದ್ದಾರೆಂಬುದು ಬಜೆಟ್‌ನಿಂದ ಸ್ಪಷ್ಟವಾಗಿದೆ. ಬಿಜೆಪಿ ಸಿದ್ಧಾಂತದಂತೆ ಮತ್ತೆ ಕಾರ್ಪೊರೇಟ್ ತೆರಿಗೆ ಮನ್ನಾ ಮಾಡಲಾಗಿದೆ. ಮೂರು ಕರಾಳ ಕಾನೂನುಗಳನ್ನು ವಾಪಸು ಪಡೆದು ರೈತರ ಕ್ಷಮೆ ಕೋರಿದ್ದ ಪ್ರಧಾನಿ ಮೋದಿ, ಹಿಂಬಾಗಿಲಿನಿಂದ ಮರುಜಾರಿ ಮಾಡುತ್ತಿದ್ದಾರೆ. ಕೃಷಿಗೆ ಕನಿಷ್ಠ ಬೆಂಬಲ ಬೆಲೆ ಘೋಷಿಸಿಲ್ಲ ಮತ್ತು ಸ್ವಾಮಿನಾಥನ್ ಶಿಫಾರಸು ಪರಿಗಣಿಸಿಲ್ಲ. ಚುನಾವಣೆಗೋಸ್ಕರ ಅಗ್ಗದ ಪ್ರಚಾರಕ್ಕಾಗಿ ಕೆಲ ಘೋಷಣೆಗಳನ್ನು ಮಾಡಲಾಗಿದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

–ಎಚ್.ಎ.ವೆಂಕಟೇಶ್, ಕೆಪಿಸಿಸಿ ವಕ್ತಾರ

ಪ್ರವಾಸೋದ್ಯಮಕ್ಕೆ ವಿಶೇಷ ಆದ್ಯತೆ ನೀಡಿರುವ ಬಜೆಟ್



ಲಕ್ಷದ್ವೀಪ ಸೇರಿದಂತೆ ಇತರೆ ದ್ವೀಪಗಳಿಗೆ ಟೂರಿಂಗ್ ಪ್ಯಾಕೇಜ್, ದೇಶದ ಹಲವು ನಗರಗಳಲ್ಲಿ ಮೆಟ್ರೋ ರೈಲು ಮಾರ್ಗ ವಿಸ್ತರಣೆಗೆ ಅನುದಾನ, 40 ಸಾವಿರ ರೈಲ್ವೆ ಬೋಗಿಗಳನ್ನು ವಂದೇ ಭಾರತ್ ಬೋಗಿಗಳಾಗಿ ಪರಿವರ್ತನೆ, ಉಡಾನ್ ಯೋಜನೆಯಡಿ 517 ಹೊಸಮಾರ್ಗದ ಮೂಲಕ ಸಣ್ಣ ನಗರಗಳಿಗೂ ವಿಮಾನ ಸೇವೆ ಹಾಗೂ ಹೊಸ ವಿಮಾನಗಳ ಖರೀದಿ ಮೂಲಕ ಪ್ರವಾಸೋದ್ಯಮಕ್ಕೆ ವಿಶೇಷ ಆದ್ಯತೆ ನೀಡಿರುವ ಬಜೆಟ್ ಇದಾಗಿದೆ. ಚುನಾವಣೆ ನಂತರ ಮೈಸೂರಿಗೆ ಉಡಾನ್ ಯೋಜನೆಯಡಿ ಇನ್ನಷ್ಟು ವಿಮಾನ ಸೇವೆ ನೀಡುವಂತೆ ಮನವಿ ಮಾಡಲಾಗುವುದು.

–ಪ್ರಶಾಂತ್, ಅಧ್ಯಕ್ಷ, ಸಂಘ–ಸಂಸ್ಥೆಗಳ ಒಕ್ಕೂಟ

ಬಜೆಟ್‌ನಲ್ಲಿ ರಾಜ್ಯದ ರೈಲ್ವೇ ಯೋಜನೆಗಳಿಗೆ 7,524 ಕೋಟಿ ಅನುದಾನ

ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಪ್ರಕಟ



ಮೈಸೂರು,ಫೆ1 (ಆರ್‌ಕೆ)– ಇಂದು ಮಂಡಿಸಲಾದ 2024ರ ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕದ ರೈಲ್ವೇ ಯೋಜನೆಗಳಿಗೆ 7,524 ಕೋಟಿ ರೂ. ಅನುದಾನ ಮೀಸಲಿರಿಸಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಪ್ರಕಟಿಸಿದ್ದಾರೆ.

ಮೈಸೂರಿನ ವಿಭಾಗೀಯ ರೈಲ್ವೇ ವ್ಯವಸ್ಥಾಪಕರ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ನವದೆಹಲಿಯಿಂದ ವಿಡಿಯೋ ಕಾನ್‌ಫರೆನ್ಸ್ ಮೂಲಕ ಮಾಹಿತಿ ನೀಡಿದ ಅವರು, 2009 ರಿಂದ 2014 ರವರೆಗೆ ಕರ್ನಾಟಕ ರಾಜ್ಯದ ವಿವಿಧ ರೈಲ್ವೇ ಯೋಜನೆಗಳಿಗೆ ಅಂದಿನ ಸರ್ಕಾರ ಕೇವಲ 835 ಕೋಟಿ ರೂ ನೀಡಿತ್ತು. ಇದೀಗ ಪ್ರಧಾನಿ ಮೋದಿ ನೇತೃತ್ವದ ಸರ್ಕಾರವು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 7,524 ಕೋಟಿ ರೂ ರೈಲ್ವೆ ಯೋಜನೆಗಳನ್ನು ಘೋಷಿಸಿದೆ ಎಂದರು.



ಅದು ಹಿಂದಿನ ಸರ್ಕಾರಕ್ಕೆ ಹೋಲಿಸಿದರೆ 9 ಪಟ್ಟು ಜಾಸ್ತಿಯಾಗಿದೆ. ರಾಜ್ಯದ ರೈಲ್ವೆ ಹಳಿ ವಿದ್ಯುದ್ದೀಕರಣ ಯೋಜನೆ ಕಾಮಗಾರಿಯ ಶೇ.95 ರಷ್ಟು ಪೂರ್ಣಗೊಂಡಿದೆ. ಕಳೆದ 5 ವರ್ಷಗಳಲ್ಲಿ ರೈಲ್ವೇ ಯೋಜನೆಗಳಿಗೆ ನಮ್ಮ ಸರ್ಕಾರ 47, 346 ಕೋಟಿ ರೂ. ತೊಡಗಿಸಿದೆ ಎಂದರು.

ಕಳೆದ 10 ವರ್ಷಗಳಲ್ಲಿ ಕೇಂದ್ರ ಸರ್ಕಾರವು ದೇಶದ ರೈಲ್ವೇ ಅಭಿವೃದ್ಧಿ ಕಾರ್ಯ, ಹಳಿಗಳ ಉನ್ನತೀಕರಣ, ವಿದ್ಯುದ್ದೀಕರಣ, ರೈಲ್ವೇ ಅಂಡರ್‌ಬ್ರಿಡ್ಜ್‌ಗಳು, ಸ್ಟೇಷನ್‌ಗಳ ಉನ್ನತೀಕರಣಗಳಂತಹ ಹಲವು ಯೋಜನೆಗಳಿಗೆ ಒಟ್ಟು 2,52,000 ಕೋಟಿ ರೂ. ಅನುದಾನ ವ್ಯಯ ಮಾಡಿ ಪ್ರಯಾಣಿಕರ ಸ್ನೇಹಿಯಾಗಿ ರೈಲ್ವೇ ಇಲಾಖೆಯು ಕಾರ್ಯನಿರ್ವಹಿಸುತ್ತಿದೆ ಎಂದು ಅವರು ತಿಳಿಸಿದರು.

ಅಯೋಧ್ಯೆಗೆ ರೈಲ್ವೇ ಸಂಪರ್ಕ ಕಲ್ಪಿಸಲು ಆಯಾ ರಾಜ್ಯ ಭೂಮಿ ಸ್ವಾಧೀನಪಡಿಸಿ ತಮ್ಮ ಪಾಲಿನ ಅನುದಾನ ನೀಡಬೇಕಾಗಿದೆ. ಪರಸ್ಪರ ಸಮನ್ವಯದೊಂದಿಗೆ ರೈಲು ಹಳಿಗಳ ವಿಸ್ತರಣೆಯಂತಹ ಹೊಸ ಯೋಜನೆ ಅನುಷ್ಠಾನಗೊಳಿಸಿ ಮತ್ತಷ್ಟು ರೈಲು ಸಂಚಾರ ವ್ಯವಸ್ಥೆ ಕಲ್ಪಿಸಲು ಸಾಧ್ಯವಾಗುತ್ತದೆ ಎಂದು ಅಶ್ವಿನಿ ವೈಷ್ಣವ್ ತಿಳಿಸಿದರು. ಮೂಲಸೌಕರ್ಯಕ್ಕೆ 2,287 ಕೋಟಿ ರೂ., ಜೋಡಿ ಹಳಿಗೆ 1,531 ಕೋಟಿ ರೂ.ಗಳನ್ನು ಹಂಚಿಕೆ ಮಾಡಿದ್ದು, ಹೊಸದಾಗಿ ಹಾಸನ–ಬೇಲೂರು, ಸೇರಿ 11 ರೈಲು ಮಾರ್ಗ, 9 ಡಬ್ಲಿಂಗ್ ಯೋಜನೆಗಳಿಗೆ ಬಜೆಟಿನಲ್ಲಿ ಹಣ ಮೀಸಲಿರಿಸಲಾಗಿದೆ ಎಂದು ಸಚಿವರು ತಿಳಿಸಿದರು.


ಇದು ವಿನಾಶಕಾರಿ ಬಜೆಟ್



ಬೆಂಗಳೂರು, ಫೆ.1– ಬಡವರು, ರೈತರು, ಯುವಕರು ಮತ್ತು ಮಹಿಳೆಯರಿಗಾಗಿ ಈ ಬಜೆಟ್ ಅಂತಾರೆ. ಆದರೆ ಇದು ವಿನಾಶಕಾರಿ ಬಜೆಟ್ ಅಂತ ನಾನು ಹೇಳುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದ್ದಾರೆ. ಗೃಹಕಚೇರಿ ಕೃಷ್ಣಾದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಟ್ಟಾರೆ ಕೇಂದ್ರದ ಬಜೆಟ್ ನಿರಾಶಾದಾಯಕ ಬಜೆಟ್. ಇದು ಎಲೆಕ್ಷನ್ ಬಜೆಟ್ ಎಂದು ಹೇಳಿದ್ದಾರೆ. 16 ಲಕ್ಷದ 85 ಸಾವಿರದ 496 ಕೋಟಿ ರೂ. ಸಾಲ ಮಾಡಿದ್ದಾರೆ. 190 ಲಕ್ಷ ಕೋಟಿ ರೂ. ಸಾಲ ಕೇಂದ್ರದ ಮೇಲಿದೆ. ಈ ಬಜೆಟ್‌ನಲ್ಲಿ ಸಾಲಕ್ಕಾಗಿ 11 ಲಕ್ಷದ 91 ಸಾವಿರ ಕೋಟಿ ರೂ. ಬಡ್ಡಿ ಪಾವತಿ ಮಾಡಬೇಕಿದೆ. ಒಟ್ಟಾರೆಯಾಗಿ ಈ ಬಜೆಟ್ ನಿರಾಶಾದಾಯಕವಾಗಿದ್ದು, ಚುನಾವಣೆಗೋಸ್ಕರ ಮಾಡಿದ್ದಾರೆ. ಈ ಬಜೆಟ್ ವಿಶ್ಲೇಷಣೆ ಮಾಡುವುದು ಕಷ್ಟ ಎಂದರು. ಈ ಬಜೆಟ್ ಜನರ ಮುಂದೆ ಇಡುವುದಕ್ಕಿಂತ, ಮುಚ್ಚಿಟ್ಟಿರುವುದೇ ಜಾಸ್ತಿ. ನಿರುದ್ಯೋಗ, ಬೆಲೆ ಏರಿಕೆ, ರೈತರ ಸಮಸ್ಯೆ, ಬರಗಾಲದ ಬಗ್ಗೆ ಹೇಳಿಲ್ಲ. ಸಾಲ ಎಷ್ಟು ಮಾಡಿದ್ದೇವೆ ಎಂದೂ ಹೇಳಿಲ್ಲ. ವಿಕಸಿತ ಭಾರತ ಅಂತ ಎಲ್ಲಾ ಕಡೆ ಮೋದಿ ಸರ್ಕಾರದ ಸಾಧನೆ ಅಂತ ಪ್ರಚಾರ ಮಾಡುತ್ತಿದ್ದಾರೆ. ಇದು ವಿಕಸಿತ ಬಜೆಟ್ ಅಂತ ಹೇಳುತ್ತಿದ್ದಾರೆ. ವಿಕಸಿತ ಅಲ್ಲ, ಇದು ವಿನಾಶಕಾರಿ ಭಾರತ ಮಾಡುವ ಬಜೆಟ್ ಎಂದು ಕಿಡಿಕಾರಿದ್ದಾರೆ. ಇದು ಬಡವರ ಪರ ಬಜೆಟ್ ಅಲ್ಲ. ನಾವು ನಿಜವಾಗಿಯೂ ಬಡವರು, ರೈತರು, ಯುವಕರು ಮತ್ತು ಮಹಿಳೆಯರಿಗಾಗಿ ಕಾರ್ಯಕ್ರಮ ಕೊಟ್ಟಿದ್ದೇವೆ. ಅನ್ನಭಾಗ್ಯ, ಗೃಹಲಕ್ಷ್ಮಿ, ಯುವನಿಧಿ, ಗೃಹಜ್ಯೋತಿ, ಕೃಷಿಭಾಗ್ಯ ಭಾಗ್ಯಗಳನ್ನು ಕೊಟ್ಟಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಕೇಂದ್ರ ಮಧ್ಯಂತರ ಬಜೆಟ್ ಪ್ರಗತಿ ನಿಷ್ಠ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬಣ್ಣನೆ



ಬೆಂಗಳೂರು, ಫೆ.1(ಕೆಎಂಶಿ)–ಕೇಂದ್ರ ಮಧ್ಯಂತರ ಬಜೆಟ್ ರಾಷ್ಟ್ರದ 'ಪ್ರಗತಿನಿಷ್ಠ ಬಜೆಟ್' ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸ್ವಾಗತಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ನವ ಭಾರತ ಪರಿಕಲ್ಪನೆಯ ಸಾಕಾರದ ನಿಟ್ಟಿನಲ್ಲಿ, ದೇಶದ ಆರ್ಥಿಕತೆಯನ್ನು ಮತ್ತಷ್ಟು ಸದೃಢಗೊಳಿಸುವ ಬಜೆಟ್ ಎಂದಿದ್ದಾರೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಹಾಗೂ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಕೋಟಾ ಶ್ರೀನಿವಾಸ ಪೂಜಾರಿ, ಕೇಂದ್ರದ ಮಧ್ಯಂತರ ಬಜೆಟ್ ಅನ್ನು ಸ್ವಾಗತಿಸಿದ್ದು, ಭಾರತ ತಂತ್ರಜ್ಞಾನ ಹಾಗೂ ಆರ್ಥಿಕತೆಯ ಏಳಿಗೆಗೆ ಮಂಡಿಸಿರುವ ಬಜೆಟ್ ಇದಾಗಿದೆ ಎಂದು ಬಣ್ಣಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಇಂದು ಮಂಡಿಸಿದ ಮಧ್ಯಂತರ ಬಜೆಟ್ ಅನ್ನು ಸ್ವಾಗತಿಸಿದ್ದಾರೆ.

ಕೃಷಿ ವಲಯ ಮತ್ತು ಕೃಷಿಧಾನ್ಯಗಳ ಬೆಳೆಗೆ ಉತ್ತೇಜನ, ಉದ್ಯೋಗ ಸೃಷ್ಟಿ, ಯುವ ಉದ್ಯಮಿಗಳಿಗೆ ಪ್ರೋತ್ಸಾಹ, ಉತ್ಪಾದನೆಗೆ ಒತ್ತು ಇತ್ಯಾದಿ ಕ್ರಮಗಳು ಸೇರಿದಂತೆ ರಾಜ್ಯದ ಕರಾವಳಿ ಪ್ರವಾಸೋದ್ಯಮ ಬೆಳವಣಿಗೆಗೆ ಮನ್ನಣೆ ನೀಡಲಾಗಿದೆ.

ಇದೊಂದು ಜನಪರ, ಅಭಿವೃದ್ಧಿಪರ ಹಾಗೂ ವಿಕಾಸಪೂರಕ ಬಜೆಟ್, ಪ್ರಧಾನಿ ಮೋದಿ ಅವರ ದೂರದೃಷ್ಟಿ ಈ ಆಯವ್ಯಯದಲ್ಲಿ ಅಡಗಿದೆ, ಹಿಂದಿನ ಐದು ವರ್ಷದ ಆಡಳಿತದಲ್ಲಿ ಯಾವ ವಲಯಕ್ಕೆ ಶಕ್ತಿ ತುಂಬಿದ್ದೇವೆ ಎನ್ನುವ ಮಾಹಿತಿಯನ್ನು ಹಣಕಾಸು ಸಚಿವರು ನೀಡಿದ್ದಾರೆ.

ಯುವಜನತೆ ಸೇರಿ ಹಲವು ವರ್ಗಕ್ಕೆ ಹೆಚ್ಚಿನ ಆರ್ಥಿಕ ಶಕ್ತಿ ನೀಡುವ ಭರವಸೆ ನೀಡಿದ್ದಾರೆ, ಉತ್ಪಾದನಾ ಕ್ಷೇತ್ರದ ಅಭಿವೃದ್ಧಿಗೆ ಇಂಬು ಕೊಡಲಾಗಿದೆ.

ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ಕೇಂದ್ರ ಬಿಜೆಪಿ ನಾಯಕರ ಜತೆ ಮುಕ್ತವಾಗಿ ಚರ್ಚೆ ಮಾಡಲಾಗುವುದು, ಇದು ಮಧ್ಯಂತರ ಬಜೆಟ್ ಆದ್ದರಿಂದ ಚುನಾವಣೆ ಬಳಿಕ ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವೆ, ರಾಜ್ಯದ ಸಮಸ್ಯೆಗಳ ಬಗ್ಗೆ ಅರಿವಿದೆ. ಎಲ್ಲಿ ಅನ್ಯಾಯವಾಗಿದೆ ಅದೆಲ್ಲವನ್ನೂ ಸರಿಮಾಡುವಲ್ಲಿ ಕೇಂದ್ರದ ಮನವೊಲಿಸುತ್ತೇವೆ ಎಂದು ಹೇಳಿದರು.

ಜನಸಂಖ್ಯೆ ನಿಯಂತ್ರಣಕ್ಕೆ ಸಮಿತಿ ರಚನೆ

ನವದೆಹಲಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಧ್ಯಂತರ ಬಜೆಟ್‌ನಲ್ಲಿ ಜನಸಂಖ್ಯೆ ನಿಯಂತ್ರಣದ ಕುರಿತು ಉನ್ನತ ಮಟ್ಟದ ಸಮಿತಿಯನ್ನು ರಚಿಸುವುದಾಗಿ ಘೋಷಿಸಿದ್ದಾರೆ.

ಜನಸಂಖ್ಯೆಯ ವೇಗದ ಬೆಳವಣಿಗೆ ಮತ್ತು ಬದಲಾವಣೆಗಳಿಂದ ಉದ್ಭವಿಸಿರುವ ಸವಾಲುಗಳನ್ನು ಸಮಗ್ರವಾಗಿ ಪರಿಶೀಲಿಸಲು ಸರ್ಕಾರವು ಉನ್ನತ ಅಧಿಕಾರದ ಸಮಿತಿಯನ್ನು ರಚಿಸಲಿದೆ ಎಂದು ಪ್ರಕಟಿಸಿದ್ದಾರೆ. ಆದರೆ, ಇದಕ್ಕೆ ಅಪಸ್ವರ ತೆಗೆದಿರುವ ವಿಪಕ್ಷದ ಸದಸ್ಯರು ಮುಸ್ಲಿಮರನ್ನು ದೂಷಿಸುವುದಕ್ಕೆ ಬಜೆಟ್‌ನಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಲಾಗಿದೆ ಎಂದು ಆರೋಪಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಸಿಪಿಐ(ಎಂ) ಸಂಸದ (ರಾಜ್ಯಸಭೆ) ಜಾನ್ ಬ್ರಿಟ್ಟಾಸ್, ಇದು ಮುಸ್ಲಿಂ ಸಮುದಾಯಕ್ಕೆ ಕಳಂಕ ತರುವ ಯತ್ನವಾಗಿದೆ. ವಾಸ್ತವವಾಗಿ ಜನಸಂಖ್ಯೆಯನ್ನು ನಿಯಂತ್ರಿಸಲು ಕಾರಣವಾಗುವ ಶಿಕ್ಷಣವನ್ನು ಒದಗಿಸುವಂತಹ ಮೂಲಭೂತ ಕಾಳಜಿಗಳನ್ನು ಪರಿಹರಿಸುವ ಬದಲು, ಈ ಸರ್ಕಾರವು ಬೇರೆಯದ್ದೆ ಯೋಚಿಸುತ್ತಿದೆ ಎಂದಿದ್ದಾರೆ.

ಜನಸಂಖ್ಯೆ ನಿಯಂತ್ರಣ ಕಾನೂನನ್ನು ರೂಪಿಸಲು ಸರ್ಕಾರ ಕೆಲಸ ಮಾಡುತ್ತಿದೆ. ತಾನು ಸಚಿವರಾಗುವ ಮುನ್ನ ಲೋಕಸಭೆಯಲ್ಲಿ ಮಂಡಿಸಿದ ಖಾಸಗಿ ಸದಸ್ಯರ ಮಸೂದೆಯಲ್ಲಿ, ದೇಶ ಎದುರಿಸುತ್ತಿರುವ ಬಹುಪಾಲು ಸಮಸ್ಯೆಗಳಿಗೆ ಮೂಲ ಕಾರಣ ಜನಸಂಖ್ಯೆಯ ಅನಿಯಂತ್ರಿತ ಬೆಳವಣಿಗೆ ಎಂದು ಬಿಜೆಪಿ ಸಂಸದ ಸಂಜೀವ್ ಬಲ್ಯಾನ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೂರನೇ ಬಾರಿಗೆ ಅಧಿಕಾರ ವಿಶ್ವಾಸ

ನವದೆಹಲಿ: ಕೇಂದ್ರ ಸರ್ಕಾರದ ಉತ್ತಮ ನೀತಿ–ನಿರೂಪಣೆ, ಯೋಜನೆಗಳು ಹಾಗೂ ಸರ್ಕಾರ ಮಾಡಿರುವ ಕೆಲಸಗಳು ಸತತ 3ನೇ ಬಾರಿಗೆ ಬಿಜೆಪಿಯನ್ನು ಅಧಿಕಾರಕ್ಕೆ ಮರಳಲು ಸಹಾಯ ಮಾಡುತ್ತದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಭರವಸೆ ವ್ಯಕ್ತಪಡಿಸಿದರು.

ಲೋಕಸಭೆಯಲ್ಲಿ ಮಧ್ಯಂತರ ಬಜೆಟ್ ಮಂಡಿಸಿ ಮಾತನಾಡಿದ ಅವರು, ನಮ್ಮ ಯುವಜನತೆಯನ್ನೊಳಗೊಂಡ ದೇಶವು ಹೆಚ್ಚಿನ ಆಕಾಂಕ್ಷೆಗಳನ್ನು ಹೊಂದಿದೆ. ಇಂದಿನ ವರ್ತಮಾನದ ಬಗ್ಗೆ ಹೆಮ್ಮೆ ಮತ್ತು ಉಜ್ವಲ ಭವಿಷ್ಯದ ಭರವಸೆ ಮತ್ತು ವಿಶ್ವಾಸವನ್ನು ಹೊಂದಿದೆ. ನಮ್ಮ ಸರ್ಕಾರದ ಉತ್ತಮ ಕೆಲಸ ಕಂಡು ವಿಶ್ವಾಸದಿಂದ ದೇಶದ ಜನರು ಮತ್ತೊಮ್ಮೆ ಆಶೀರ್ವದಿಸುವ ವಿಶ್ವಾಸದಲ್ಲಿ ನಾವಿದ್ದೇವೆ ಎಂದರು. ಕಳೆದ 10 ವರ್ಷಗಳಲ್ಲಿ 25 ಕೋಟಿ ಜನರಿಗೆ ಬಡತನದಿಂದ ಹೊರ ಬರಲು ಸರ್ಕಾರ ಸಹಾಯ ಮಾಡಿದೆ ಎಂದರು.

ದಕ್ಷಿಣ ಭಾರತಕ್ಕೆ ಪ್ರತ್ಯೇಕ ರಾಷ್ಟ್ರದ ಕೂಗು ಎತ್ತಿದ ಸಂಸದ ಡಿ.ಕೆ.ಸುರೇಶ್



ಬೆಂಗಳೂರು: ಕೇಂದ್ರ ಸರ್ಕಾರದಿಂದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತಿದೆ ಎಂದು ದೂರಿರುವ ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್, ದಕ್ಷಿಣ ಭಾರತಕ್ಕೆ ಪ್ರತ್ಯೇಕ ರಾಷ್ಟ್ರ ಕೂಗು ಎತ್ತಿದ್ದಾರೆ. ಈ ಮೂಲಕ ಹೊಸ ವಿವಾದಕ್ಕೆ ನಾಂದಿ ಹಾಡಿದ್ದಾರೆ. ಕೇಂದ್ರ ಬಜೆಟ್ ಕುರಿತು ವರದಿಗಾರರಿಗೆ ಪ್ರತಿಕ್ರಿಯಿಸಿದ ಡಿ.ಕೆ.ಸುರೇಶ್, ದಕ್ಷಿಣ ಭಾರತದ ತೆರಿಗೆ ಹಣವನ್ನು ಉತ್ತರ ಭಾರತಕ್ಕೆ ಹಂಚಿಕೆ ಮಾಡುತ್ತಿದ್ದಾರೆ. ಇದರಿಂದ ನಮಗೆ ಆರ್ಥಿಕವಾಗಿ ಅನ್ಯಾಯವಾಗುತ್ತಿದೆ ಎಂದರು. ನಮ್ಮ ರಾಜ್ಯಗಳ ಹಣ ನಮಗೇ ಹಂಚಿಕೆಯಾಗಬೇಕಾದರೆ ಪ್ರತ್ಯೇಕ ರಾಷ್ಟ್ರದ ಕೂಗು ಅನಿವಾರ್ಯವಾಗಿದೆ. ಮುಂದೆ ದಕ್ಷಿಣ ಭಾರತದ ರಾಜ್ಯಗಳು ಪ್ರತ್ಯೇಕ ರಾಷ್ಟ್ರದ ಕೂಗು ಎತ್ತಲಿವೆ ಎಂದು ಕಾಂಗ್ರೆಸ್ ಸಂಸದ ಹೇಳಿದ್ದಾರೆ.

ಪ್ರತ್ಯೇಕ ರಾಷ್ಟ್ರದ ಕೂಗು ಏಳುವ ಮುನ್ನವೇ ಕೇಂದ್ರ ಸರ್ಕಾರ ಈ ಸಮಸ್ಯೆಯನ್ನು ಸರಿಪಡಿಸಿಕೊಳ್ಳಬೇಕು. ದಕ್ಷಿಣ ಭಾರತದ ತೆರಿಗೆ ಹಣವನ್ನು ದಕ್ಷಿಣ ಭಾರತಕ್ಕೇ ಖರ್ಚು ಮಾಡಬೇಕು. ನಮ್ಮ ಹಣವನ್ನು ಉತ್ತರ ಭಾರತಕ್ಕೆ ಹಂಚಿಕೆ ಮಾಡಬಾರದು ಎಂದು ಡಿ.ಕೆ.ಸುರೇಶ್ ಹೇಳಿದ್ದಾರೆ.

ಎಲ್‌ಪಿಜಿ ಸಬ್ಸಿಡಿಗಾಗಿ 11,925 ಕೋಟಿ ಮೀಸಲು

ನವದೆಹಲಿ: 2024ರ ಮಧ್ಯಂತರ ಬಜೆಟ್‌ನಲ್ಲಿ ಒಟ್ಟು ಎಲ್‌ಪಿಜಿ ಸಬ್ಸಿಡಿಗಾಗಿ 11,925.01 ಕೋಟಿ ರೂ.ಗಳನ್ನು ಸರ್ಕಾರ ಘೋಷಿಸಿದೆ.

ನೇರ ಲಾಭ ವರ್ಗಾವಣೆ (ಡಿಬಿಟಿ) ಯೋಜನೆಯಡಿ ನೇರ ಲಾಭ ವರ್ಗಾವಣೆಗಾಗಿ ತೈಲ ಮಾರುಕಟ್ಟೆ ಕಂಪನಿಗಳಿಗೆ (ಒಎಂಸಿ) 1500 ಕೋಟಿ ರೂ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (IOCL), ಹಿಂದೂಸ್ತಾನ್ ಪೆಟ್ರೋಲಿಯಂ ಲಿಮಿಟೆಡ್ ಕಾರ್ಪೊರೇಷನ್ ಲಿಮಿಟೆಡ್ (HPCL), ಅಥವಾ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (BPCL) ನಂತಹ ತೈಲ ಕಂಪನಿಗಳು ನೇರವಾಗಿ ಗ್ರಾಹಕರಿಗೆ LPG ನಗದು ಸಬ್ಸಿಡಿಗಳನ್ನು ಒದಗಿಸುತ್ತವೆ. ಹೆಚ್ಚುವರಿಯಾಗಿ, ಬಡ ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕಗಳನ್ನು ಒದಗಿಸಲು 9094 ಕೋಟಿ ರೂಗಳನ್ನು ನಿಗದಿಪಡಿಸಲಾಗಿದ್ದು, ಶುದ್ಧ ಇಂಧನ ಆಯ್ಕೆಗಳಿಗೆ ಪರಿವರ್ತನೆಯಲ್ಲಿ ಬಿಪಿಎಲ್ ಕುಟುಂಬಗಳನ್ನು ಬೆಂಬಲಿಸುವ ಗುರಿಯನ್ನು ಇದು ಹೊಂದಿದೆ.



ವಿತ್ತೀಯ ವರ್ಷ 2025ಕ್ಕೆ ಈಶಾನ್ಯ ರಾಜ್ಯಗಳಲ್ಲಿ ಆಡಳಿತದ ಬೆಲೆ ಕಾರ್ಯವಿಧಾನದ (ಎಪಿಎಂ) ಅಡಿಯಲ್ಲಿ ನೈಸರ್ಗಿಕ ಅನಿಲ ಮಾರಾಟಕ್ಕೆ ಸಬ್ಸಿಡಿ ನೀಡಲು ಸರ್ಕಾರವು 1200 ಕೋಟಿ ರೂ ಮೀಸಲಿಟ್ಟಿದ್ದು, ಆದರೆ, ಅಂತರರಾಷ್ಟ್ರೀಯ ಕಚ್ಚಾ ತೈಲ ಅಥವಾ ಎಲ್‌ಪಿಜಿ ಬೆಲೆಗಳು ಏರಿದರೆ ಮತ್ತು ಕಂಪನಿಗಳ ಶಕ್ತಿ ಪರಿವರ್ತನೆಗೆ 1500 ಕೋಟಿ ಅಸಮರ್ಪಕವಾಗಬಹುದು ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ICRAಯ ಉಪಾಧ್ಯಕ್ಷ ಮತ್ತು ಸಹ–ಮುಖ್ಯಸ್ಥ ಪ್ರಶಾಂತ್ ವಸಿಷ್ಠ ಈ ಬಗ್ಗೆ ಮಾತನಾಡಿದ್ದು, DBT ಗಾಗಿ ಬಜೆಟ್ ಹಂಚಿಕೆಯು 1500 ಕೋಟಿ ರೂ.ಗಳಲ್ಲಿ ಸಮರ್ಪಕವಾಗಿ ತೋರುತ್ತಿದೆಯಾದರೂ, ಅಂತರರಾಷ್ಟ್ರೀಯ ಕಚ್ಚಾ ತೈಲ ಅಥವಾ LPG ಬೆಲೆಗಳು ಹೆಚ್ಚಾದರೆ ಅದು PSU OMCಗಳಿಗೆ ಅಪಾಯವನ್ನು ಉಂಟುಮಾಡಬಹುದು ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಪ್ರಧಾನ ಮಂತ್ರಿ ಉಜ್ವಲ ಯೋಜನೆ (PMUY) ಅಡಿಯಲ್ಲಿ ಹೆಚ್ಚಿದ ಸಬ್ಸಿಡಿಯಿಂದಾಗಿ 2024–25ರ ಸಬ್ಸಿಡಿ ಹೊರೆ ಹೆಚ್ಚಾಗಬಹುದು. ಬಡ ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕಗಳಿಗಾಗಿ 9094 ಕೋಟಿ ರೂ.ಗಳ ಬಜೆಟ್ ಹಂಚಿಕೆಯು ನಿಜವಾದ ಹೊರಹರಿವಿನ ವಿರುದ್ಧ ಕಡಿಮೆಯಾಗಬಹುದು ಎಂದು ಅವರು ಉಲ್ಲೇಖಿಸಿದ್ದಾರೆ.

ದೇಶದ ಅಭಿವೃದ್ಧಿಯ ದೂರದೃಷ್ಟಿತ್ವ ಬಜೆಟ್



ಮಧ್ಯಂತರ ಬಜೆಟ್‌ನಲ್ಲೂ ಉದ್ಯೋಗ ಸೃಷ್ಟಿ ಮತ್ತು ಉದ್ಯಮಕ್ಕೆ ಒತ್ತು ನೀಡಿರುವುದು ದೇಶದ ಅಭಿವೃದ್ಧಿಗೆ ಪೂರಕವಾಗಿದೆ. ಭಾರತ, ಸೌರಶಕ್ತಿ ವಲಯಗಳಲ್ಲಿ ಹೆಚ್ಚಿನ ಮೌಲ್ಯವರ್ಧಿತ ಹಂತಕ್ಕೇರಲು ಸಹಕಾರಿಯಾಗಿದೆ. ಒಟ್ಟಾರೆ ವಿತ್ತ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ ಪ್ರಧಾನಿ ನರೇಂದ್ರ ಮೋದಿ ಸರ್ಕಾರದ 2ನೇ ಅವಧಿಯ ಕೊನೆಯ ಬಜೆಟ್‌ನಲ್ಲಿ ಆರ್ಥಿಕ ಶಿಸ್ತು, ದೇಶದ ಅಭಿವೃದ್ಧಿಯ ದೂರದೃಷ್ಟಿತ್ವವಿದೆ. **–ಜಿ.ಡಿ.ಹರೀಶ್‌ಗೌಡ, ಶಾಸಕರು, ಹುಣಸೂರು ಕ್ಷೇತ್ರ**

ಮಹಿಳಾ ಸಬಲೀಕರಣ, ಪ್ರವಾಸೋದ್ಯಮಕ್ಕೆ ಆದ್ಯತೆ



ಮಹಿಳಾ ಸಬಲೀಕರಣ ಮತ್ತು ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಲಾಗಿದೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ಹಣಕಾಸಿನ ಶಿಸ್ತು ಕಾಯ್ದಿರಿಸಿಕೊಳ್ಳಲಾಗಿದೆ. ಮಹಿಳಾ ಸಬಲೀಕರಣದ ಲಖ್‌ಪತಿ ದೀದಿ ಯೋಜನೆ ಉತ್ತಮವಾದುದು. ಆಯುಷ್ಮಾನ್ ಭಾರತ್ ಯೋಜನೆಯನ್ನು ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರಿಗೆ ವಿಸ್ತರಿಸಿರುವುದು ಸ್ವಾಗತಾರ್ಹ. ನಾರಿಶಕ್ತಿ ವೃದ್ಧಿಸಲು ಇದು ಸ್ಫೂರ್ತಿದಾಯಕ.

–ಡಾ.ಆರ್.ಹೆಚ್.ಪವಿತ್ರ, ಸಹಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮುಕ್ತ ವಿವಿ, ಮೈಸೂರು.

2047ರ ಅಭಿವೃದ್ಧಿ ಭಾರತದ ನೀಲನಕ್ಷೆ



ಈ ಬಜೆಟ್ 2047ರ ಅಭಿವೃದ್ಧಿ ಭಾರತದ ನೀಲನಕ್ಷೆಯಾಗಿದೆ. ಅನ್ನದಾತ, ನಾರಿಶಕ್ತಿ (ಮಹಿಳಾ ಸಬಲೀಕರಣ), ಗರೀಬ್ ಕಲ್ಯಾಣ್ ನಂತಹ ಯೋಜನೆಗಳ ಮೂಲಕ ಜನಕೇಂದ್ರೀತ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಸುಸ್ಥಿರ ಅಭಿವೃದ್ಧಿಗೆ ಗಮನ ನೀಡಲಾಗಿದೆ. ಇದು ಅತ್ಯಂತ ಸೂಕ್ತವಾಗಿದೆ. ನೈಜ ಅಭಿವೃದ್ಧಿ ಅಂಶಗಳಿಗೆ ಆದ್ಯತೆ ನೀಡಲಾಗಿದೆ. ಸೂಕ್ಷ್ಮ, ಸಣ್ಣ, ಮಧ್ಯಮ ಉದ್ಯಮಗಳಿಗೆ ಉತ್ತೇಜನ ನೀಡುವುದನ್ನು ಮುಂದುವರೆಸಲಾಗಿದೆ. ಇದು ಸರಿಯಾದ ದಿಕ್ಕಿನಲ್ಲಿರುವ ಬಜೆಟ್ ಎಂದು ಕರೆಯಬಹುದು. **–ಪ್ರೊ.ನವಿತಾ ತಿಮ್ಮಯ್ಯ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮೈಸೂರು ವಿವಿ.**

ನೀರಸ–ನಿರಾಶಾದಾಯಕ ಬಜೆಟ್



ಇದು ನೀರಸ–ನಿರಾಶಾದಾಯಕ ಬಜೆಟ್. ಚುನಾವಣೆ ಇದ್ದಾಗ್ಯೂ ಯಾವುದೇ ವಿನಾಯಿತಿ–ರಿಯಾಯಿತಿ ನೀಡಿಲ್ಲ. ಈಗಾಗಲೇ ಇರುವ ಯೋಜನೆಗಳಿಗೆ ತೇಪೆ ಹಾಕಿ ಮತ್ತೆ ಘೋಷಣೆ ಮಾಡಲಾಗಿದೆ. ಕೈಗಾರಿಕಾ ಕ್ಷೇತ್ರದ ನಿರೀಕ್ಷೆ ಹುಸಿಯಾಗಿದೆ. ಮೈಸೂರಿನಲ್ಲಿ ಕೈಗಾರಿಕಾ ಕ್ಲಸ್ಟರ್ ಇಲ್ಲ. ಹಾಗಾಗಿ ಇದನ್ನು ಘೋಷಿಸುವ ನಿರೀಕ್ಷೆ ಇತ್ತು. ಎಂಎಸ್‌ಎಂಇ ನೀತಿಯನ್ನು ಪುನರ್ ಪರಿಷ್ಕರಣೆ ಮೂಲಕ ಉದ್ಯಮಿ ಸ್ನೇಹಿಯಾಗಿಸುವ ಕಾರ್ಯಕ್ರಮ ಘೋಷಿಸುವ ನಿರೀಕ್ಷೆ ಇತ್ತು. ಆದರೆ ಈ ಯಾವುವೂ ಆಗಿಲ್ಲ. ಹಳೇ ಯೋಜನೆಗಳನ್ನು ಹೇಳಿಕೊಂಡಿದ್ದು, ಬಜೆಟ್‌ನಲ್ಲಿ ಯಾವುದೇ ಸ್ಪಷ್ಟ ನಿಲುವುಗಳು ಇಲ್ಲ.

–ಸುರೇಶ್‌ಕುಮಾರ್‌ಜೈನ್, ಪ್ರಧಾನ ಕಾರ್ಯದರ್ಶಿ, ಮೈಸೂರು ಕೈಗಾರಿಕೆಗಳ ಸಂಘ.

ಆಶಾದಾಯಕ ಬಜೆಟ್, ಉದ್ಯೋಗ ಸೃಷ್ಟಿಗೆ ಪೂರಕ



ಯಾವುದೇ ತೆರಿಗೆಗಳನ್ನು ಏರಿಸದೇ ಸಮತೋಲನ ಕಾಯ್ದುಕೊಂಡಿರುವುದು ಎಲ್ಲರಿಗೂ ತೃಪ್ತಿ ತಂದಿರುವ ವಿಚಾರ. ರಾಷ್ಟ್ರದಾದ್ಯಂತ ಪ್ರವಾಸೋದ್ಯಮ ಕ್ಷೇತ್ರಕ್ಕೆ 75 ಸಾವಿರ ಕೋಟಿ ರೂ. ಮೀಸಲಿಟ್ಟಿರುವುದು ಸ್ವಾಗತಾರ್ಹ. ಇದರಿಂದ ಉದ್ಯೋಗ ಸೃಷ್ಟಿಗೆ ಪೂರಕ ವಾತಾವರಣ ನಿರ್ಮಾಣವಾಗಲಿದೆ. ಪ್ರವಾಸೋದ್ಯಮ ಕ್ಷೇತ್ರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿರುವುದು ಸೂಕ್ತವಾಗಿದೆ. ಅದರಲ್ಲೂ ಪ್ರವಾಸಿತಾಣಗಳಲ್ಲಿ ಹೋಟೆಲು ಉದ್ಯಮ ಸ್ಥಾಪಿಸುವವರಿಗೆ ಬಡ್ಡಿರಹಿತ ಸಾಲ ಸೌಲಭ್ಯ ಮತ್ತು ಸಾಲ ಮರುಪಾವತಿಯಲ್ಲಿ ರಿಯಾಯಿತಿ (ಸಬ್ಸಿಡಿ) ನೀಡುವ ಮೂಲಕ ಪ್ರವಾಸೋದ್ಯಮ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

–ಸಿ.ನಾರಾಯಣಗೌಡ, ಅಧ್ಯಕ್ಷರು, ಹೋಟೆಲ್ ಮಾಲೀಕರ ಸಂಘ, ಮೈಸೂರು.

ಉತ್ತಮ ಆರ್ಥಿಕ ವ್ಯವಸ್ಥೆಗೆ ಪೂರಕ ಬಜೆಟ್



ಯಾವುದೇ ಹೊಸ ತೆರಿಗೆಗಳನ್ನು ಜನಸಾಮಾನ್ಯರ ಮೇಲೆ ಹಾಕದೇ ಮೂಲಸೌಕರ್ಯಗಳ ಅಭಿವೃದ್ಧಿ ಕಡೆ ಹೆಚ್ಚಿನ ಗಮನ ನೀಡಲಾಗಿದೆ. ಇದೊಂದು ಉತ್ತಮ ಆರ್ಥಿಕ ವ್ಯವಸ್ಥೆಗೆ ಪೂರಕ ಬಜೆಟ್. ಯುವಜನತೆ, ಬಡವರು, ಮಹಿಳೆಯರ ಪರ ಬಜೆಟ್. ಬಂಡವಾಳ ವೆಚ್ಚವನ್ನು ಶೇ.11.1ರಷ್ಟು ಹೆಚ್ಚಿಸಲು ತೀರ್ಮಾನಿಸಿ, 11.11 ಲಕ್ಷ ಕೋಟಿ ರೂ.ಗೆ ಹೆಚ್ಚಿಸುವ ಉದ್ದೇಶ ಹೊಂದಿರುವುದು ಸ್ವಾಗತಾರ್ಹ. ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ ಮಾಡಿದ್ದು, ಹೀಗಾಗಿ ಎಲ್ಲಾ ಕ್ಷೇತ್ರಗಳಲ್ಲಿ ವಿಪುಲ ಉದ್ಯೋಗಾವಕಾಶಗಳು ಸೃಷ್ಟಿಯಾಗುವಲ್ಲಿ ಸಂಶಯವಿಲ್ಲ.

–ಕೆ.ಬಿ.ಲಿಂಗರಾಜು, ಅಧ್ಯಕ್ಷರು, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ.

ಬಂಡವಾಳಶಾಹಿ ಪರ ಬಜೆಟ್



ದೇಶಿ, ಸಂಸ್ಕೃತಿ, ರಾಷ್ಟ್ರೀಯತೆ ಆಧಾರದಲ್ಲಿ ರಾಜಕೀಯ ಮಾಡುತ್ತಿರುವ ಪಕ್ಷ ಇಂದು ಕೇಂದ್ರದಲ್ಲಿ ಆಡಳಿತದಲ್ಲಿ ಇದ್ದರೂ ಬಿತ್ತನೆ ಬೀಜ, ಕೃಷಿ ಪದ್ಧತಿ ವಿಚಾರದಲ್ಲಿ ದೇಶಿ ಮಂತ್ರ ಬಿಟ್ಟು, ವಿದೇಶಿ ಮಂತ್ರ ಜಪಿಸಲಾಗುತ್ತಿದೆ. ಇದು ಆಘಾತಕಾರಿ. ಸಾಫ್ಟ್‌ವೇರ್ ನವೋದ್ಯಮಗಳಿಗೆ ಲಕ್ಷ ಕೋಟಿ ಮೀಸಲಿಟ್ಟು ಅವರಿಗೆ ಬಡ್ಡಿರಹಿತ ಸಾಲ ಕೊಡುವ ಯೋಜನೆ ಘೋಷಿಸಲಾಗಿದೆ. ಅಲ್ಲದೆ, ಕಂಪನಿಗಳ ನಿವ್ವಳ ಲಾಭಾಂಶ ಆಧಾರದಲ್ಲಿ ಕಂಪನಿಗಳ ಕಾರ್ಪೊರೇಟ್ ಟ್ಯಾಕ್ಸ್ ಅನ್ನು ಶೇ.30ರಿಂದ 22ಕ್ಕೆ ಇಳಿಸಲಾಗಿದೆ. ಒಟ್ಟಾರೆ ಬಂಡವಾಳಶಾಹಿ ಪರ ಬಜೆಟ್ ಇದು.

–ಮಂಜುಕಿರಣ್, ಸಾಮೂಹಿಕ ನಾಯಕತ್ವ ಕರ್ನಾಟಕ ರಾಜ್ಯ ರೈತ ಸಂಘ.

ಕೃಷಿ, ಕೃಷಿಕರನ್ನು ಮೇಲೆತ್ತುವ ಕಾರ್ಯಕ್ರಮ ಇಲ್ಲ



ಇದು ಚುನಾವಣಾ ವರ್ಷ, ಇಂದು ಮಂಡಿಸಿದ ಬಜೆಟ್ ಕೇವಲ ಲೇಖಾನುದಾನ ಪಡೆಯಲು ಸೀಮಿತವಾಗಿರುವ ಬಜೆಟ್. ಕೃಷಿ ಮತ್ತು ಕೃಷಿಕರನ್ನು ಮೇಲೆತ್ತುವ ಯಾವುದೇ ಸ್ಪಷ್ಟ ಕಾರ್ಯಕ್ರಮ ಮತ್ತು ಅನುದಾನ ಈ ಬಜೆಟ್‌ನಲ್ಲಿ ಇಲ್ಲ. 10 ವರ್ಷಗಳನ್ನು ಪೂರೈಸುತ್ತಿರುವ ನರೇಂದ್ರ ಮೋದಿಯವರ ಸರ್ಕಾರ ಕೊನೆಗೂ ಸ್ವಾಮಿನಾಥನ್ ವರದಿ ಅನ್ವಯ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಲೇ ಇಲ್ಲ. ರೈತರ ಆದಾಯವನ್ನು ದ್ವಿಗುಣಗೊಳಿಸಲೇ ಇಲ್ಲ. ಚುನಾವಣೆಗೆ ರಾಮ ಜಪ ಮಾತ್ರ ಸಾಕು. ಈ ದೇಶದ ದುಡಿಯುವ ಜನರಿಗೆ ಯಾವುದೇ ಕಾರ್ಯಕ್ರಮ ಬೇಕಿಲ್ಲ ಎಂಬ ತೀರ್ಮಾನಕ್ಕೆ ಬಿಜೆಪಿ ಬಂದಂತಿದೆ.

–ಬಡಗಲಪುರ ನಾಗೇಂದ್ರ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ.

ರೈತರ ಪಾಲಿಗೆ ನಿರಾಶಾದಾಯಕ ಬಜೆಟ್



ರೈತರ ಪಾಲಿಗೆ ನಿರಾಶದಾಯಕವಾದ ಬಜೆಟ್ ಇದು. ರೈತರ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯ ಖಾತ್ರಿ ಕಾನೂನು ಮಾಡುತ್ತೇವೆ ಎಂದು ಕಳೆದ ವರ್ಷ ಪ್ರಧಾನಿಗಳು ಭರವಸೆ ನೀಡಿದ್ದರು. ಸ್ವಾಮಿನಾಥನ್ ವರದಿ ಜಾರಿಗೊಳಿಸುತ್ತೇವೆ ಎಂದೂ ಹೇಳಿದ್ದರು. ಆ ಬಗ್ಗೆ ಬಜೆಟ್‌ನಲ್ಲಿ ಯಾವುದೇ ಸ್ಪಷ್ಟತೆ ಇಲ್ಲ. ಕೃಷಿ ಕ್ಷೇತ್ರವನ್ನು ನಿರ್ಲಕ್ಷ್ಯವಾಗಿ ನೋಡಲಾಗಿದೆ. 12 ಲಕ್ಷ ಕೋಟಿ ಉದ್ಯಮಿಗಳ ಸಾಲ ಮನ್ನಾ ಮಾಡಿದರು. ಆದರೆ ರೈತರ ಸಾಲ ಮನ್ನದ ಬಗ್ಗೆ ಚಕಾರ ಎತ್ತುತ್ತಿಲ್ಲ. ರೈತರಿಗೆ ಬೇಕಾದಂತೆ ಬೆಳೆ ವಿಮೆ ಪದ್ಧತಿ ಬದಲಾವಣೆಗೂ ಮುಂದಾಗಿಲ್ಲ.

–ಕುರುಬೂರು ಶಾಂತಕುಮಾರ್, ರಾಜ್ಯಾಧ್ಯಕ್ಷ, ರಾಜ್ಯ ರೈತ ಸಂಘಟನೆಗಳ ಒಕ್ಕೂಟ

ದೇಶದ ಆರ್ಥಿಕಾಭಿವೃದ್ಧಿಗೆ ಪ್ರೇರಕ ಬಜೆಟ್



ಕೇಂದ್ರದ ಮಧ್ಯಂತರ ಬಜೆಟ್ ನಿರ್ಮಾಣ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿದೆ. ಪಿಎಂ ಆವಾಸ್ ಯೋಜನೆಯಡಿ 2 ಕೋಟಿಗೂ ಅಧಿಕ ಮನೆಗಳ ನಿರ್ಮಾಣ ಕೈಗೆತ್ತಿಕೊಳ್ಳುವ ಯೋಜನೆ ಹಾಕಿಕೊಳ್ಳಲಾಗಿದೆ. ಪಿಎಂ ಗತಿಶಕ್ತಿ ಯೋಜನೆಯಡಿ ಟೈರ್–2 ಮತ್ತು ಟೈರ್–3 ನಗರಗಳಲ್ಲಿ ರೈಲ್ವೆ ಮತ್ತು ರಸ್ತೆ ಮಾರ್ಗ ಸಂಪರ್ಕ ಯೋಜನೆಗೆ ಒತ್ತು ನೀಡಲಾಗಿದೆ. ಹೊರೆ ಇಲ್ಲದಂತೆ ಅಭಿವೃದ್ಧಿಗೆ ಪೂರಕ ಬಜೆಟ್ ಮಂಡಿಸಿದ್ದು, ದೇಶದ ಆರ್ಥಿಕಾಭಿವೃದ್ಧಿ ಬಲಗೊಳಿಸುವ ದೃಷ್ಟಿಕೋನ ಹೊಂದಿರುವ ಬಜೆಟ್. **–ನಾಗರಾಜ್ ಬೈರಿ, ಅಧ್ಯಕ್ಷರು, ಬಿಎಐ, ಮೈಸೂರು ಘಟಕ.**

ಬಾಲಕಿಯರಿಗೆ ಗರ್ಭಕಂಠ ಕ್ಯಾನ್ಸರ್ ತಡೆಗಾಗಿ ಉಚಿತ ಲಸಿಕೆ

ನವದೆಹಲಿ: ಗರ್ಭಕಂಠ ಕ್ಯಾನ್ಸರ್ ತಡೆಗಾಗಿ 9–14 ವರ್ಷದೊಳಗಿನ ಬಾಲಕಿಯರಿಗೆ ಉಚಿತವಾಗಿ ಲಸಿಕೆ ನೀಡಲಾಗುವುದು ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ. ಗರ್ಭಕಂಠ ಕ್ಯಾನ್ಸರ್ ತಡೆಯುವ ನಿಟ್ಟಿನಲ್ಲಿ ಲಸಿಕೆ ಕ್ರಮಕ್ಕೆ ಮುಂದಾಗಲಿದೆ. ತಾಯಿ–ಮಕ್ಕಳ ಆರೈಕೆಗೆ ವಿವಿಧ ಯೋಜನೆಗಳನ್ನು ಒಂದು ಸಮಗ್ರ ಕಾರ್ಯಕ್ರಮದ ಅಡಿಯಲ್ಲಿ ತರಲಾಗುವುದು. ಸಕ್ಷಮ ಅಂಗನವಾಡಿ ಅಡಿ ಅಂಗನವಾಡಿ ಕೇಂದ್ರಗಳನ್ನು ಉನ್ನತೀಕರಿಸುವ ಮತ್ತು ಪೋಷಣ್ 2.0 ಮೂಲಕ ಮಕ್ಕಳ ಆರೈಕೆ ಮತ್ತು ಅಭಿವೃದ್ಧಿ ಸೇರಿದಂತೆ ಸುಧಾರಿತ ಪೌಷ್ಟಿಕಾಂಶ ವಿತರಣೆಗಾಗಿ ತ್ವರಿತ ಕ್ರಮ ಕೈಗೊಳ್ಳಲಾಗುವುದು ಎಂದರು.

ವಸತಿ ಶಾಲೆ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಮನೋಭಾವ ಬೆಳೆಸಿ

● ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಮ್ ಸಲಹೆ ● ಇಲಾಖೆ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ಸಭೆ

ಮಡಿಕೇರಿ, ಫೆ.1–ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಮ್ ಅವರು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳೊಂದಿಗೆ ನಗರದಲ್ಲಿ ಗುರುವಾರ ಪ್ರಗತಿ ಪರಿಶೀಲನೆ ಸಭೆ ನಡೆಸಿದರು.

ನಗರದ ಸುದರ್ಶನ ಅತಿಥಿ ಗೃಹದಲ್ಲಿ ಸಭೆ ನಡೆಸಿದ ಆಯೋಗದ ಅಧ್ಯಕ್ಷರು, ಮೊರಾರ್ಜಿ ದೇಸಾಯಿ ಮತ್ತು ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ, ಮಕ್ಕಳ ಸಂಖ್ಯೆ, ಮತ್ತಿತರ ಬಗ್ಗೆ ಮಾಹಿತಿ ಪಡೆದರು. ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಜೊತೆಗೆ ಸ್ಪರ್ಧಾತ್ಮಕ ಮನೋಭಾವ ಬೆಳೆಸಬೇಕು. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗೆ ಉತ್ತೇಜನ ನೀಡಬೇಕು. ವಸತಿ ಶಾಲೆಯ ಎಲ್ಲಾ ಮಕ್ಕಳು ಉತ್ತಮ ಶಿಕ್ಷಣ ಪಡೆದು ಐಐಟಿ, ಐಐಎಂ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಉನ್ನತ ವ್ಯಾಸಂಗ ಮಾಡುವಂತಾಗಬೇಕು ಎಂದು ಹೇಳಿದರು.

ವಸತಿ ಹಾಗೂ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಎಲ್ಲರೊಂದಿಗೂ ಬೆರೆಯುವ ಗುಣ ಬೆಳೆಸಬೇಕು. ನಾಡಿನ ಪ್ರತಿಯೊಬ್ಬರೂ ಮನುಷ್ಯರು, ಕನ್ನಡಿಗರು, ಭಾರತೀಯರು ಎಂಬ ಮನೋಭಾವ ಬರಬೇಕು. ಧಾರ್ಮಿಕವಾಗಿ ಯಾರನ್ನು ಸಹ ವಿಂಗಡಿಸಬಾರದು. ಆ ನಿಟ್ಟಿನಲ್ಲಿ ಗುಣಮಟ್ಟದ ಶಿಕ್ಷಣ ಕೊಡುವತ್ತ ಗಮನಹರಿಸಬೇಕು. ಸಮಾಜದ ಧಾರ್ಮಿಕ ಮುಖಂಡರೊಂದಿಗೆ ಸಮಾಲೋಚನೆ ನಡೆಸಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ವಸತಿ ಶಾಲೆಗೆ ಸೇರಿಸಲು ಪ್ರೇರೇಪಿಸಬೇಕು. ವಸತಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುವ ಜೊತೆಗೆ ಅಗತ್ಯ ಸೌಲಭ್ಯಗಳ ಬಗ್ಗೆ ತಿಳಿಸಬೇಕು ಎಂದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ದಿವಾಕರ ಮಾತನಾಡಿ, ಜಿಲ್ಲೆಯಲ್ಲಿ ವಸತಿ ಹಾಗೂ ಸರ್ಕಾರಿ ಶಾಲೆಗಳಲ್ಲಿ ಶೇ.100ರಷ್ಟು ಫಲಿತಾಂಶ ಇದೆ. ಜಿಲ್ಲೆಯಲ್ಲಿ ವಿದ್ಯಾರ್ಥಿ ನಿಲಯಕ್ಕೆ ಬೇಡಿಕೆ ಇದ್ದು, ಆ ನಿಟ್ಟಿನಲ್ಲಿ ಮಡಿಕೇರಿಯಲ್ಲಿ ಬಾಲಕಿಯರ ಮತ್ತು ಬಾಲಕರ ವಿದ್ಯಾರ್ಥಿನಿಲಯ. ಹಾಗೆಯೇ ಕುಶಾಲನಗರದಲ್ಲಿ ಬಾಲಕಿಯರ ವೃತ್ತಿಪರ ವಿದ್ಯಾರ್ಥಿನಿಲಯ ಆರಂಭಕ್ಕೆ ಅವಕಾಶ ಮಾಡಬೇಕಿದೆ ಎಂದು ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಲ್ಲಿ ಮನವಿ ಮಾಡಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವ್ಯಾಪ್ತಿಯ ಎರಡು ವಸತಿ ಶಾಲೆಗಳಲ್ಲಿ 560 ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶವಿದ್ದು, 370 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇದರಲ್ಲಿ 84 ವಿದ್ಯಾರ್ಥಿಗಳು ಅಲ್ಪಸಂಖ್ಯಾತರಿದ್ದಾರೆ. ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಶಿಕ್ಷಕರು ಹಾಗೂ ಸಿಬ್ಬಂದಿ ಕೊರತೆ ಇದ್ದು, ಖಾಲಿ ಹುದ್ದೆಗಳನ್ನು ತುಂಬುವಂತಾಗಬೇಕು. ವಿದ್ಯಾರ್ಥಿ ವೇತನ, ಶ್ರಮಶಕ್ತಿ, ಗಂಗಾ ಕಲ್ಯಾಣ ಯೋಜನೆ ಮತ್ತಿತರ ಬಗ್ಗೆ ಮಾಹಿತಿ ನೀಡಿದರು.

ರಾಜ್ಯ ಅಲ್ಪಸಂಖ್ಯಾತರ ಆಯೋಗದ ಮುಜಾಬುಲ್ಲಾ ಝುಫಾರಿ, ಜಿಲ್ಲೆಯ ವಸತಿ ಶಾಲೆಗಳಲ್ಲಿ 560 ವಿದ್ಯಾರ್ಥಿಗಳಲ್ಲಿ 84 ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಇದ್ದು, ತುಂಬಾ ಕಡಿಮೆ. ಆದ್ದರಿಂದ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡಲು ಹೆಚ್ಚಿನ ಅರಿವು ಮೂಡಿಸಬೇಕು ಎಂದು ಹೇಳಿದರು.

ಸರ್ಕಾರದ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಂಡು ಇತರರಂತೆ ಬದುಕು ಕಟ್ಟಿಕೊಳ್ಳುವಂತಾಗಬೇಕು. ಸಮಾಜದ ಮುಖಂಡರ ಜೊತೆ ಸಮಾಲೋಚನೆ ನಡೆಸಿ, ವಸತಿ ಶಾಲೆಗಳಲ್ಲಿ ಸೌಲಭ್ಯ ಪಡೆಯಲು ಅಗತ್ಯ ಮಾಹಿತಿ ನೀಡುವಂತೆ ಸಲಹೆ ನೀಡಿದರು. ವಕ್ಫ್ ಅಧಿಕಾರಿ ಮಹಮ್ಮದ್ ಇರ್ಫಾನ್, ವಸತಿ ಶಾಲೆಯ ಪ್ರಾಂಶುಪಾಲ ಮಹೇಶ್, ಮುಖ್ಯಶಿಕ್ಷಕಿ ಶ್ವೇತಾ ಹಲವು ಮಾಹಿತಿ ನೀಡಿದರು.


ಮಡಿಕೇರಿಯ ಸುದರ್ಶನ ಅತಿಥಿ ಗೃಹದಲ್ಲಿ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಮ್ ಅವರು ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಕೊಡಗು ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ 2 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ, 1 ಮೊರಾರ್ಜಿ, 1 ಡಾ.ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ ಹಾಗೂ 1 ಮೌಲಾನಾ ಆಜಾದ್ ಮಾದರಿ ಶಾಲೆ ಸೇರಿದಂತೆ ಒಟ್ಟು 5 ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಈ 4 ಶಾಲೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮೌಲಾನಾ ಆಜಾದ್ ಮಾದರಿ ಶಾಲೆ ಸರ್ಕಾರಿ ಪ್ರಾಥಮಿಕ ಶಾಲೆಯ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.
–ದಿವಾಕರ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ.

ತಾಲೂಕು ಆಡಳಿತ ವರ್ತನೆ ಖಂಡನೀಯ

ವಿರಾಜಪೇಟೆ, ಫೆ.1–ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿ ವತಿಯಿಂದ ತಾಲೂಕು ಮೈದಾನದಲ್ಲಿ ಆಯೋಜಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗಿದ್ದು, ತಾಲೂಕು ಆಡಳಿತದ ಈ ವರ್ತನೆ ಖಂಡನೀಯ ಎಂದು ಪುರಸಭೆಯ ಬಿಜೆಪಿ ಸದಸ್ಯ ಸುಭಾಷ್ ಮಹಾದೇವ್ ಹೇಳಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತ ಜನಪ್ರತಿನಿಧಿಗಳು, ತಹಸೀಲ್ದಾರ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು, ಅಧಿಕಾರಿಗಳು ಮತ್ತು ಸನ್ಮಾನಿತರಿಗೆ ಸರ್ಕಾರದ ಶಿಷ್ಟಾಚಾರ ಪ್ರಕಾರ ಕಾರ್ಯಕ್ರಮದ ವೇದಿಕೆಯಲ್ಲಿ ಅವಕಾಶವಿದೆ. ಆದರೆ, ರಾಷ್ಟ್ರೀಯ ಕಾರ್ಯಕ್ರಮವಾಗಬೇಕಿದ್ದ ಗಣರಾಜ್ಯೋತ್ಸವ ಆಚರಣೆ ವೇದಿಕೆ ಕಾಂಗ್ರೆಸ್ ಕಾರ್ಯಕ್ರಮವಾಗಿ ಮಾರ್ಪಟ್ಟಿತು ಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ವೇದಿಕೆಯಲ್ಲಿ ಬಹುತೇಕ ಪುರಸಭೆಯ ಸದಸ್ಯರು ಉಪಸ್ಥಿತರಿದ್ದರು. ಸೌಜನ್ಯಕ್ಕಾದರು ಬಿಜೆಪಿ ಸದಸ್ಯರನ್ನು ವೇದಿಕೆಗೆ ಆಹ್ವಾನಿಸಿಲ್ಲ. ಕ್ಷೇತ್ರದ ಶಾಸಕರ ಮೇಲೆ ಅಪಾರ ಗೌರವವಿದೆ. ಆದರೆ, ಶಾಸಕರು ಕೂಡ ಆಯೋಜಕರಿಗೆ ಹೇಳಲಿಲ್ಲ. ಸರ್ಕಾರಿ ಶಾಲಾ ಶಿಕ್ಷಕರೊಬ್ಬರು ವೇದಿಕೆಯಲ್ಲಿದ್ದ ಕಾಂಗ್ರೆಸ್ ಕಾರ್ಯಕರ್ತರ ಹೆಸರನ್ನು ಬರೆದು ಕೊಟ್ಟು ವಯಕ್ತಿಕವಾಗಿ ಸ್ವಾಗತಿಸಿದರು. ಚುನಾವಣೆಯಲ್ಲಿ ಮಾತ್ರ ರಾಜಕೀಯ ಮಾಡೋಣ. ಶಾಸಕರು ಇಂಥ ಘಟನೆಗಳು ಮರುಕಳಿಸದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಿವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಪುರಸಭೆ ಸದಸ್ಯರಾದ ಜೂನಾ ಸುನೀತಾ, ಅನಿತಾ, ಆಶಾ ಸುಬ್ಬಯ್ಯ ಉಪಸ್ಥಿತರಿದ್ದರು.


ಸುದ್ದಿಗೋಷ್ಠಿಯಲ್ಲಿ ಪುರಸಭೆ ಬಿಜೆಪಿ ಸದಸ್ಯ ಸುಭಾಷ್ ಮಹಾದೇವ್ ಮಾತನಾಡಿದರು. ಜೂನಾ ಸುನೀತಾ, ಅನಿತಾ, ಆಶಾ ಸುಬ್ಬಯ್ಯ ಇದ್ದರು.

ಬಿಜೆಪಿ ಸದಸ್ಯರಿಂದ ಕೀಳು ಮಟ್ಟದ ಪ್ರಚಾರ


ಸುದ್ದಿಗೋಷ್ಠಿಯಲ್ಲಿ ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ ಮಾತನಾಡಿದರು. ಪುರಸಭೆ ಸದಸ್ಯರಾದ ಡಿ.ಪಿ.ರಾಜೇಶ್, ಮಹಮದ್ ರಾಫಿ ಮತೀನ್ ಇದ್ದರು.

ವಿರಾಜಪೇಟೆ, ಫೆ.1–ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಆಡಳಿತದ ವತಿಯಿಂದ ಪಟ್ಟಣದ ತಾಲೂಕು ಮೈದಾನದಲ್ಲಿ ಏರ್ಪಡಿಸಿದ್ದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗಿದೆ ಎಂದು ಬಿಜೆಪಿಯ ಕೆಲ ಸದಸ್ಯರು ಆರೋಪಿಸಿ, ಕೀಳು ಮಟ್ಟದ ಪ್ರಚಾರ ಪಡೆದುಕೊಳ್ಳುತ್ತಿದ್ದಾರೆ ಎಂದು ಪುರಸಭೆ ಸದಸ್ಯ ಹಾಗೂ ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ ಹೇಳಿದರು.

ಸರ್ಕಾರದ ಶಿಷ್ಟಾಚಾರ ಪ್ರಕಾರ ಕಾರ್ಯಕ್ರಮಕ್ಕೆ ತಹಸೀಲ್ದಾರ್, ಪುರಸಭೆ ಎಲ್ಲಾ ಸದಸ್ಯರಿಗೆ ಆಹ್ವಾನ ನೀಡಲಾಗಿದೆ. ಆದರೆ, ಬಿಜೆಪಿಯ ಕೆಲ ಸದಸ್ಯರು ಉದ್ದೇಶ ಪೂರ್ವಕವಾಗಿ ಧ್ವಜಾರೋಹಣಕ್ಕೆ ಗೈರಾಗಿ, ತಮಗಿಷ್ಟ ಬಂದ ಸಮಯಕ್ಕೆ ಸಮಾರಂಭದಲ್ಲಿ ಹಾಜರಾಗಿದ್ದರು. ವೇದಿಕೆಯಲ್ಲಿ ಶಾಸಕರು ಸೇರಿ ಎಲ್ಲಾ ಗಣ್ಯರು ಆಸೀನರಾಗಿದ್ದರು. ಕಾರ್ಯಕ್ರಮ ಪ್ರಾರಂಭವಾಗಿದ್ದ ಕಾರಣ ಆಯೋಜಕರು ಇವರಿಗೆ ಸ್ವಾಗತ ಕೋರಿ ವೇದಿಕೆಗೆ ಆಹ್ವಾನಿಸಿಲ್ಲ ಅಷ್ಟೇ. ಆದ್ದರಿಂದ ಇವರು ಸಭೆಯಿಂದ ನಿರ್ಗಮಿಸಿ, ತಾಲೂಕು ಆಡಳಿತ ಶಿಷ್ಟಾಚಾರ ಉಲ್ಲಂಘಿಸಿದೆ ಎಂದು ಬಹಿರಂಗ ಹೇಳಿಕೆ ನೀಡುತ್ತಾ ಆಯೋಜಕರು ಮತ್ತು ಶಾಸಕರ ಮೇಲೆ ಅಪಪ್ರಚಾರ ಮಾಡುತ್ತಿರುವುದು ಶೋಭೆಯಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪುರಸಭೆ ಸದಸ್ಯ ಡಿ.ಪಿ.ರಾಜೇಶ್ ಮಾತನಾಡಿ, ರಾಜ್ಯ ಸರ್ಕಾರ ಬಡವರ ಏಳಿಗೆಗೆ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳನ್ನು ಕಾಂಗ್ರೆಸ್‌ಕ್ಕೆ ಮತ ಹಾಕಿದವರು ಮಾತ್ರ ಪಡೆದುಕೊಳ್ಳುತ್ತಿಲ್ಲ. ಎಲ್ಲಾ ವರ್ಗದ ಜನರು ಪಡೆದುಕೊಳ್ಳುತ್ತಿದ್ದಾರೆ. ಕಳೆದ 20 ವರ್ಷಗಳಿಂದ ಅಭಿವೃದ್ಧಿ ಮಾಡದವರು ಸಾರ್ವಜನಿಕರ ತೆರಿಗೆ ಹಣದಿಂದ ಗ್ಯಾರಂಟಿ ಯೋಜನೆಗಳನ್ನು ನೀಡುತ್ತಿದ್ದಾರೆ ಎಂದು ಹೇಳಿಕೆ ನೀಡುತ್ತಿದ್ದಾರೆ ಎಂದರು.

ಪುರಸಭೆ ಸದಸ್ಯ ಮಹಮದ್ ರಾಫಿ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಪುರಸಭೆ ಸದಸ್ಯ ಮತೀನ್, ಆರ್ಜಿ ಗ್ರಾಪಂ ಸದಸ್ಯ ಉಪೇಂದ್ರ ಉಪಸ್ಥಿತರಿದ್ದರು.

ಇತಿಹಾಸ ಸೃಷ್ಟಿಸಲು ಅಂಬೇಡ್ಕರ್ ಚಿಂತನೆ ಅಳವಡಿಸಿಕೊಳ್ಳಿ

ಮಡಿಕೇರಿ: ಇತಿಹಾಸ ಸೃಷ್ಟಿಸಬೇಕಾದರೆ ಮೊದಲು ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆ ಮತ್ತು ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ದಲಿತ ಚಳವಳಿಯ ಹೋರಾಟಗಾರ ಜಯಪ್ಪ ಹಾನಗಲ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಕೊಡಗು ಜಿಲ್ಲಾ ಸಮಿತಿ ವತಿಯಿಂದ ನಡೆದ ಸಮಿತಿಯ 50ನೇ ಸುವರ್ಣ ಸಂಭ್ರಮೋತ್ಸವ ಹಾಗೂ ಸಂವಿಧಾನ ದಿನಾಚರಣೆ ಉದ್ಘಾಟಿಸಿ, ಮಾತನಾಡಿದ ಅವರು, ಜಾತಿ ಪ್ರತಿಷ್ಠೆ ಹಾಗೂ ಅಸ್ಪೃಶ್ಯತೆಯ ತೊಡಕುಗಳಿಲ್ಲದ ಸಮತಭಾವದ ದೇಶವನ್ನು ಕಟ್ಟಬೇಕು. ಕೆಳ ವರ್ಗದವರಲ್ಲಿ ಮಾನವೀಯ ಘನತೆಯ ಸ್ವಾಭಿಮಾನವನ್ನು ಚಿಗುರಿಸುವುದು ಅಂಬೇಡ್ಕ ಅವರ ಬದುಕಿನ ಧ್ಯೇಯವಾಗಿತ್ತು ಎಂದರು.

ದಲಿತ ಜನಾಂಗದ ಬದುಕಿನ ಇತಿಹಾಸದಲ್ಲಿ ಅಸ್ಪೃಶ್ಯತೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಅದನ್ನು ಕೊನೆಗೊಳಿಸಬೇಕು ಎಂಬ ಹೋರಾಟಕ್ಕೆ ಇಳಿದ ಮೊಟ್ಟ ಮೊದಲ ವ್ಯಕ್ತಿ ಅಂಬೇಡ್ಕರ್. ಅಸಮಾನತೆ ಮೇಲು ಕೀಳು ಮಾನವ ನಿರ್ಮಿತವಲ್ಲ. ಆದ್ದರಿಂದ ದಲಿತರಿಗೆ ಶಿಕ್ಷಣ ಕೊಡುವ ಮೂಲಕ ಅವರನ್ನು ಮುಖ್ಯ ವಾಹಿನಿಗೆ ತರಬೇಕು. ಅವರನ್ನು ಸಬಲರನ್ನಾಗಿ ಮಾಡಿದರೆ ಅವರು ಹಿಂದುಳಿಯಲು ಸಾಧ್ಯವಿಲ್ಲ ಎಂದು ಹೇಳಿದರು.

ಚಿಂತಕ ಕಾಳಿಸ್ವಾಮಿ ಮಾತನಾಡಿ, ಅಂಬೇಡ್ಕರ್ ಭಾರತಕ್ಕೆ ಸುಭದ್ರ ಸಂವಿಧಾನ ನೀಡಿದ್ದಾರೆ. ನಾವೆಲ್ಲರೂ ಸಂವಿಧಾನದ ಅಡಿಯಲ್ಲಿ ಬದುಕುತ್ತಿರುವುದು ಅವರ ಕೊಡುಗೆಯಾಗಿದೆ. ಸಮಾಜಕ್ಕೆ ವಿದ್ಯಾವಂತರಾಗಿರಿ, ಸಂಘಟಿತರಾಗಿ ಮತ್ತು ಉತ್ತೇಜಿತರಾಗಿರಿ ಎಂಬ ಸಲಹೆಗಳ ಮೂಲಕ ಜೀವನ ದೀರ್ಘವಾಗಿರುವುದಕ್ಕಿಂತ ಉತ್ತಮವಾಗಿರಬೇಕು ಎಂಬ ಅನೇಕ ವಿಚಾರಗಳನ್ನು ದೇಶಕ್ಕಾಗಿ ನೀಡಿದರು. ಮಹಿಳಾ ಹಕ್ಕುಗಳನ್ನು ನೀಡಿದ ಮಹಾನ್ ವಿದ್ವಾಂಸರು ಎಂದು ಬಣ್ಣಿಸಿದರು.

ಕರ್ನಾಟಕ ದಸಂಸ ಜಿಲ್ಲಾ ಸಂಚಾಲಕಿ ಗಾಯತ್ರಿ ನರಸಿಂಹ ಮಾತನಾಡಿದರು.

ಜಿಲ್ಲಾ ಸಂಘಟನಾ ಸಂಚಾಲಕ ಬಾವಾ ಮಾಲ್ದಾರೆ ಭಾರತದ ಸಂವಿಧಾನ ಪೀಠಿಕೆಯನ್ನು ಓದಿದರು.

ಇದೇ ಸಂದರ್ಭ ಜಯಪ್ಪ ಹಾನಗಲ್ ಹಾಗೂ ಕಾಳಿಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಸಂಘಟನಾ ಸಂಚಾಲಕರಾಗಿ ಬಸವಣ್ಣ, ವಚನಕಾರರಾದ ಕರಿಯಯ್ಯ ಬ್ಯಾಡಗೊಟ್ಟ, ಬಾವಾ ಮಾಲ್ದಾರೆ, ಎಂ.ಚಿರಂಜೀವಿ ಕುಶಾಲನಗರ, ಬೋಜ ವಿರಾಜಪೇಟೆ, ಅಯ್ಯಪ್ಪ ಪೊನ್ನಂಪೇಟೆ, ಮನೋಜ್ ಕುಮಾರ್, ಜಿಲ್ಲಾ ಸಮಿತಿ ಸದಸ್ಯರಾಗಿ ಕುಳಿಯ ವಿರಾಜಪೇಟೆ, ಮಡಿಕೇರಿ ತಾಲೂಕು ಸಂಚಾಲಕಿ ಗೌರಮ್ಮ ಅವರನ್ನು ನೇಮಕ ಮಾಡಲಾಯಿತು.

ಫೆ.10, ಪ್ರವೇಶ ಪರೀಕ್ಷೆ

ಮಡಿಕೇರಿ: ಗಾಳಿಬೀಡಿನ ನವೋದಯ ವಿದ್ಯಾಲಯದಲ್ಲಿ 9 ಮತ್ತು 11ನೇ ತರಗತಿಯ ಪ್ರವೇಶ ಪರೀಕ್ಷೆ ಫೆ.10ರಂದು ನವೋದಯ ವಿದ್ಯಾಲಯದಲ್ಲಿ ನಡೆಯಲಿದೆ.

ಮಾಹಿತಿಗೆ ಮೊ.:9611862835 ಅಥವಾ 8840383521 ಅನ್ನು ಸಂಪರ್ಕಿಸಿ.

ಸಿದ್ದರಾಮಯ್ಯ ಕಾರಿಗೆ ಮೊಟ್ಟೆ ಹೊಡೆದ ಪ್ರಕರಣ
ಒಂದೂವರೆ ವರ್ಷದ ಬಳಿಕ ನೋಟಿಸ್

ಮಡಿಕೇರಿ: 2022ರ ಆಗಸ್ಟ್‌ನಲ್ಲಿ ಕೊಡಗಿಗೆ ಬಂದಿದ್ದ ಅಂದು ವಿಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯ ಕಾರಿಗೆ ಮೊಟ್ಟೆ ಹೊಡೆದ ಪ್ರಕರಣ ಸಂಬಂಧ 10 ಆರೋಪಿಗಳಿಗೆ ಒಂದೂವರೆ ವರ್ಷದ ಬಳಿಕ ತಹಶೀಲ್ದಾರ್ ನ್ಯಾಯಾಲಯ ನೋಟಿಸ್ ನೀಡಿದೆ.

ಜ.25ರಂದು ಕೊಡಗಿಗೆ ಸಿಎಂ ಸಿದ್ದರಾಮಯ್ಯ ಆಗಮಿಸಿದ್ದು, ಈ ವೇಳೆ ಗಲಾಟೆ, ದೊಂಬಿ ಏಳಿಸಬಹುದು. ಹೀಗಾಗಿ ಕೋರ್ಟ್ ನಿರ್ದೇಶನದಂತೆ ವಿಚಾರಣೆಗೆ ಆಗಮಿಸು ವಂತೆ ಬಿಜೆಪಿ ಹಾಗೂ ಹಿಂದೂಪರ ಸಂಘಟನೆಗಳ 10 ಜನರಿಗೆ ನೋಟಿಸ್ ನೀಡಲಾಗಿದೆ. ಸಿಎಂ ಸಿದ್ದರಾಮಯ್ಯ ಕೊಡಗಿಗೆ ಬಂದು ಹೋಗಿ 6 ದಿನ ಕಳೆದಿದೆ. ವಿನಾಕಾರಣ ನೋಟಿಸ್ ನೀಡಿರುವುದು ಏಕೆ? ಇದೊಂದು ದ್ವೇಷ ರಾಜಕಾರಣ. ಫೆ.1ರಂದು 11 ಗಂಟೆಗೆ ವಿಚಾರಣೆಗೆ ಬರುವಂತೆ ತಹಶೀಲ್ದಾರ್ ಕೋರ್ಟ್ ನೋಟಿಸ್ ನೀಡಿದೆ. ಈ ನೋಟಿಸ್‌ಗೆ ಬಿಜೆಪಿ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಬಿಜೆಪಿ, ಹಿಂದೂಪರ ಸಂಘಟನೆಗಳ ಕಾರ್ಯಕರ್ತರ ಸ್ಥೈರ್ಯ ಕುಗ್ಗಿಸುವ ಯತ್ನ. ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಜನರು ತಕ್ಕ ಉತ್ತರ ನೀಡಲಿದ್ದಾರೆ ಎಂದು ಬಿಜೆಪಿ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

150ನೇ ದಿನಕ್ಕೆ ಕಾಲಿಟ್ಟ ಕಾವೇರಿ ಹೋರಾಟ


ಚಾಮರಾಜನಗರದ ಭುವನೇಶ್ವರಿ ವೃತ್ತದ ಹೆದ್ದಾರಿಯಲ್ಲಿ ಕರ್ನಾಟಕ ಸೇನಾ ಪಡೆಯ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಫೆ.1–ಕಾವೇರಿ ನದಿ ನೀರನ್ನು ತಮಿಳುನಾಡಿಗೆ ಹರಿಸುತ್ತಿರುವ ಕ್ರಮ ಖಂಡಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರ ಹೋರಾಟ ಗುರುವಾರ 150ನೇ ದಿನಕ್ಕೆ ಕಾಲಿಟ್ಟಿತು.

149 ದಿನಗಳಿಂದಲೂ ನಿರಂತರವಾಗಿ ಪ್ರತಿಭಟಿಸುತ್ತಿರುವ ಕಾರ್ಯಕರ್ತರು, ಗುರುವಾರವೂ ಸೇನಾಪಡೆಯ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ನಗರದ ಭುವನೇಶ್ವರಿ ವೃತ್ತದಲ್ಲಿ ಹೆದ್ದಾರಿ ಸಂಚಾರ ತಡೆದು, ಕರ್ಪೂರ ಹಚ್ಚಿ, ಬೂದುಗುಂಬಳ ಹೊಡೆಯುವ ಮೂಲಕ ವಿನೂತನವಾಗಿ ಪ್ರತಿಭಟಿಸಿದರು.

ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ರಾಜ್ಯ ಸರ್ಕಾರ ಜನತೆ ಹಾಗೂ ರೈತರ ಪರವಾಗಿರಬೇಕು. ಆದರೆ, ಜನರ ಹಿತಾಸಕ್ತಿಯನ್ನು ಮರೆತು ತಮಿಳುನಾಡಿಗೆ ನೀರನ್ನು ಹರಿಸುತ್ತಿರುವುದು ಖಂಡನೀಯ. ರಾಜ್ಯದಲ್ಲಿ ಬಿಸಿಲಿನ ತಾಪ ಹೆಚ್ಚಾಗಿದೆ. ಜಲಾಶಯಗಳು ಬತ್ತುತ್ತಿವೆ. ಮುಂದಿನ ದಿನಗಳಲ್ಲಿ ಕುಡಿಯಲು ನೀರಿಲ್ಲದಂತಹ ಪರಿಸ್ಥಿತಿಗೆ ಸಿಲುಕಬೇಕಾಗುತ್ತದೆ. ತಮಿಳುನಾಡಿಗೆ ಹರಿಯುತ್ತಿರುವ ನೀರನ್ನು ತಕ್ಷಣ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸೇನಾಪಡೆಯ ಗು.ಪುರುಷೋತ್ತಮ್, ಚಾ.ವೆಂ.ರಾಜ್‌ಗೋಪಾಲ್, ಗಡಿನಾಡು ಕನ್ನಡ ರಕ್ಷಣ ಹೋರಾಟ ವೇದಿಕೆ ಅಧ್ಯಕ್ಷ ಚಾ.ರಂ.ಕುಮಾರ್, ಪಣ್ಯದಹುಂಡಿ ರಾಜು, ನಿಜಧ್ವನಿ ಗೋವಿಂದರಾಜು, ಚಾ.ಹಾ.ರಾಮು, ತಾಂಡವಮೂರ್ತಿ, ವೀರಭದ್ರ, ಸೋಮವಾರಪೇಟೆ ಮಂಜು, ರಾಚಪ್ಪ, ಲಿಂಗರಾಜು, ಸಾಗರ್‌ರಾವತ್, ಮಾದಲವಾಡಿ ಪಟೇಲ್, ಆಟೋ ನಾಗೇಶ್, ಫಯಾಜ್, ಚಿಕ್ಕಮೋಳೆ ಸಿದ್ದಶೆಟ್ಟಿ ಮತ್ತಿತರರಿದ್ದರು.

ಫೆ.6, ರೈತರ ಸಾಲ ಮನ್ನಾಗೆ ಆಗ್ರಹಿಸಿ ಬೆಂಗಳೂರು ಚಲೋ


ಕೊಳ್ಳೇಗಾಲದಲ್ಲಿ ಸುದ್ದಿಗೋಷ್ಠಿಯಲ್ಲಿ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿದರು.

ಕೊಳ್ಳೇಗಾಲ, ಫೆ.1–ರಾಜ್ಯ ಸರ್ಕಾರ ಫೆ.16ರಂದು ಮಂಡಿಸುವ ಬಜೆಟ್ಟಿನಲ್ಲಿ ರೈತರ ಸಂಪೂರ್ಣ ಸಾಲಮನ್ನಾ, ಸೇರಿದಂತೆ ಇತರೆ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕಬ್ಬು ಬೆಳೆಗಾರ ಸಂಘ ಸೇರಿದಂತೆ ರಾಜ್ಯ ರೈತ ಒಕ್ಕೂಟಗಳು ಫೆ.6ರಂದು ಬೆಂಗಳೂರು ಚಲೋ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಹೇಳಿದರು.

ರೈತರ ಸಾಲ ಸಂಪೂರ್ಣವಾಗಿ ಮನ್ನಾ ಆಗಬೇಕು. ಸರ್ಕಾರ ಅನ್ನದಾತನ ಸಮಸ್ಯೆಗಳನ್ನು ಗಂಭೀರವಾಗಿ ಅರಿಯಬೇಕು. ತೆಲಂಗಾಣದಲ್ಲಿ ಕಾಂಗ್ರೆಸ್ ಸರ್ಕಾರ ರೈತರ ಸಾಲಮನ್ನಾ ಮಾಡಿರುವ ರೀತಿ ರಾಜ್ಯದಲ್ಲೂ ಮನ್ನಾ ಮಾಡಬೇಕು. ಕಬ್ಬಿನ ಎಫ್‌ಆರ್‌ಪಿ ದರ ರೈತನ ಹೊಲದಲ್ಲಿನ ದರ ಎಂದು ಬದಲಾಗಬೇಕು. ಈಗಾಗಲೇ ಕಬ್ಬು ಕಟಾವು, ಸಾಗಣಿಕೆ ದರವನ್ನು ಸಕ್ಕರೆ ಕಾರ್ಖಾನೆಗಳು ಮನಬಂದಂತೆ ಕಡಿತ ಮಾಡಿರುವ ಹೆಚ್ಚುವರಿ ಹಣ ರೈತರಿಗೆ ವಾಪಸ್ ನೀಡಬೇಕು ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

2022–23ನೇ ಸಾಲಿನಲಿ ಕಬ್ಬಿಗೆ ಟನ್‌ಗೆ 150 ರೂ. ಹೆಚ್ಚುವರಿ ದರವನ್ನು ಕೂಡಲೇ ಸಕ್ಕರೆ ಕಾರ್ಖಾನೆಗಳು ರೈತರಿಗೆ ಪಾವತಿಸಲು ಕ್ರಮ ಕೈಗೊಳ್ಳಬೇಕು. ತಪ್ಪಿದಲ್ಲಿ ಸರ್ಕಾರವೇ ರೈತರಿಗೆ ಪಾವತಿಸಬೇಕು. ಇತರೆ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬೆಂಗಳೂರು ಚಲೋ ನಡೆಸಲಾಗುವುದು. ತೆಲಂಗಾಣದಲ್ಲಿ ಪ್ರತಿಯೊಬ್ಬರಿಗೂ ರಾಜ್ಯ ಸರ್ಕಾರವೇ ವಿಮಾ ಕಂತು ಪಾವತಿಸಿ, 5 ಲಕ್ಷ ರೂ. ಜೀವ ವಿಮೆ ಪಾಲಿಸಿ ನೀಡುತ್ತಿದೆ. ಆಕಸ್ಮಿಕ, ಅಪಘಾತ ಸಾವು, ಆತ್ಮಹತ್ಯೆಗೆ ಒಳಗಾದ ಕುಟುಂಬಕ್ಕೆ ಐದು ಲಕ್ಷ ರೂ. ಪರಿಹಾರ ನೀಡುವ ನಿಟ್ಟಿನಲ್ಲಿ ಕ್ರಮವಹಿಸಿದೆ. ಅದೇ ರೀತಿ ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ಕಿನಕಹಳ್ಳಿ ಬಸವಣ್ಣ, ಮೆಳ್ಳಹಳ್ಳಿ ಚಂದ್ರಶೇಖರಮೂರ್ತಿ, ನೀಲಕಂಠಪ್ಪ, ಪಟೇಲ್ ಶಿವಮೂರ್ತಿ, ಲಿಂಗರಾಜು, ಬಡಗಲಪುರ ನಾಗರಾಜು, ಪ್ರದೀಪ್, ಕೆಂಪರಾಜು, ಗುರು, ಉಡಿಗಾಲ ರಾಜು, ರೇವಣ್ಣ ಇನ್ನಿತರಿದ್ದರು.

ಜನರ ಬಳಿ ತೆರಳಿ ಅಹವಾಲು ಆಲಿಸುವ ಕಾರ್ಯ

● ಮಾನವ ಹಕ್ಕು ಉಲ್ಲಂಘನೆ ಪ್ರಕರಣಗಳ ಇತ್ಯರ್ಥ ● ಆಯೋಗದ ಅಧ್ಯಕ್ಷ ಎಲ್.ನಾರಾಯಣಸ್ವಾಮಿ ಮಾಹಿತಿ

ಚಾಮರಾಜನಗರ, ಫೆ.1–ರಾಜ್ಯ ಮಾನವ ಹಕ್ಕುಗಳ ಆಯೋಗ ಜನರ ಬಳಿ ತೆರಳಿ ಆಯೋಗದಲ್ಲಿ ದಾಖಲಾಗಿರುವ ದೂರುಗಳನ್ನು ಇತ್ಯರ್ಥಪಡಿಸುವ ಜೊತೆಗೆ ಅಹವಾಲುಗಳನ್ನು ಆಲಿಸುವ ನೂತನ ಕಾರ್ಯಕ್ಕೆ ಮುಂದಾಗಿದೆ ಎಂದು ಆಯೋಗದ ಅಧ್ಯಕ್ಷ ಎಲ್.ನಾರಾಯಣಸ್ವಾಮಿ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಆವರಣದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ನಡೆದ ಆಯೋಗದಲ್ಲಿ ದಾಖಲಾಗಿರುವ ಪ್ರಕರಣಗಳ ವಿಚಾರಣೆ, ಸಾರ್ವಜನಿಕರಿಂದ ಅಹವಾಲು ಸ್ವೀಕಾರ ಹಾಗೂ ಅಧಿಕಾರಿಗಳ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಪ್ರಕರಣಗಳ ವಿಚಾರಣೆಯನ್ನು ಬೆಂಗಳೂರಿನಲ್ಲಿ ಇತ್ಯರ್ಥ ಮಾಡಲಾಗುತ್ತಿತ್ತು. ಆದರೆ, ಜನರಿಗೆ ಅನುಕೂಲವಾಗಲೆಂದು ಆಯಾ ಜಿಲ್ಲೆಯಲ್ಲೇ ವಿಚಾರಣೆ ನಡೆಸಿ ಪ್ರಕರಣಗಳನ್ನು ಆಯೋಗ ಬಗೆಹರಿಸುತ್ತಿದೆ. ಇದರಿಂದ ಉತ್ತಮ ಫಲಿತಾಂಶ ಸಿಗುತ್ತಿದೆ ಎಂದರು.

ನಾವೇ ದೂರುದಾರರ ಬಳಿ ಹೋಗಿ ಅಧಿಕಾರಿಗಳ ಗಮನಕ್ಕೆ ತಂದು ದೂರುಗಳನ್ನು ಬಗೆಹರಿಸುತ್ತಿದ್ದೇವೆ. ದೂರುದಾರರು ಬೆಂಗಳೂರಿಗೆ ಬಂದು ತಮ್ಮ ಪ್ರಕರಣಗಳು, ದೂರುಗಳನ್ನು ದಾಖಲಿಸಬಹುದು. ಮಾಧ್ಯಮದಲ್ಲಿ ಬರುವ ವರದಿ ಆಧಾರದ ಮೇಲೂ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳನ್ನು ಆಯೋಗ ಸ್ವಯಂ ಪ್ರೇರಿತವಾಗಿ ದಾಖಲು ಮಾಡಿಕೊಂಡು ವಿಚಾರಣೆ ನಡೆಸಲಿದೆ. ಹೀಗಾಗಿ ಮಾಧ್ಯಮಗಳ ಪಾತ್ರ ಬಹು ಮುಖ್ಯವಾಗಿದೆ ಎಂದು ತಿಳಿಸಿದರು.


ಚಾಮರಾಜನಗರದ ಜಿಪಂ ಸಭಾಂಗಣದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಎಲ್.ನಾರಾಯಣಸ್ವಾಮಿ ಮಾತನಾಡಿದರು. ಸದಸ್ಯರಾದ ಟಿ.ಶ್ಯಾಮ್ ಭಟ್, ಎಸ್.ಕೆ.ವಂಟಿಗೋಡಿ, ಜಿಲ್ಲಾಧಿಕಾರಿ ಶಿಲ್ಪಾನಾಗ್ ಇದ್ದರು.

ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದಿವೆ. ಕಾನೂನು, ಸೌಲಭ್ಯಗಳು ಸಮರ್ಪಕವಾಗಿ ತಲುಪುತ್ತಿವೆಯೇ ಎಂದು ನೋಡಬೇಕಿದೆ. ವಸತಿ ಶಾಲೆಗಳು, ಹಾಸ್ಟೆಲ್‌ಗಳಲ್ಲಿ ಯಾವ ತೊಂದರೆ ಇದೆ, ಅಪೌಷ್ಟಿಕತೆ ನಿವಾರಣೆ, ಹಾಡಿ, ಅರಣ್ಯದಂಚಿನ ಪ್ರದೇಶಗಳ ಜನತೆಗೆ ಮೂಲಸೌಕರ್ಯ ಸಿಕ್ಕಿವೆಯೇ, ಅರಣ್ಯ ಕಾಯ್ದೆ ಅನುಕೂಲಕ್ಕೆ ಬಂದಿದೆಯೇ ಎಂದು ಅಧಿಕಾರಿಗಳು ಗಮನಹರಿಸಬೇಕಿದೆ. ಜನರ ಸೇವೆಗಳಿಗೆ ವಿಳಂಬ ಮಾಡುವುದು ಬೇಡ. ಶೀಘ್ರಗತಿಯಲ್ಲಿ ಸ್ಪಂದಿಸಬೇಕಿದೆ ಎಂದು ಸೂಚಿಸಿದರು.

ಆಯೋಗದ ಸದಸ್ಯ ಎಸ್.ಕೆ.ವಂಟಿಗೋಡಿ ಮಾತನಾಡಿ, ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸರಿಸಮಾನರು. ಸರ್ಕಾರದ ಸೌಲಭ್ಯಗಳು ಜನರಿಗೆ ಮುಟ್ಟಲಿಲ್ಲವೆಂದರೆ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಸರ್ಕಾರದ ಪ್ರತಿನಿಧಿಗಳಾದ ಅಧಿಕಾರಿಗಳು ಮಾನವ ಹಕ್ಕುಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು. ನಿಷ್ಠೆ, ಶ್ರದ್ಧೆಯಿಂದ ಕರ್ತವ್ಯ ನಿರ್ವಹಿಸಿದರೆ ಉಲ್ಲಂಘನೆ ಕಡಿಮೆಯಾಗಲಿದೆ. ಮೂಲ ಸೌಲಭ್ಯಗಳಾದ ರಸ್ತೆ, ವಿದ್ಯುತ್, ಆರೋಗ್ಯ, ಶಿಕ್ಷಣದಿಂದ ಜನರನ್ನು ವಂಚಿಸಿದರೆ ಅವರ ಹಕ್ಕುಗಳನ್ನು ಮೊಟಕುಗೊಳಿಸಿದಂತಾಗುತ್ತದೆ ಎಂದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ಸರ್ಕಾರಿ ಅಧಿಕಾರಿಗಳು, ನೌಕರರು ತಮಗೆ ಸಿಕ್ಕಿರುವ ಅವಕಾಶವನ್ನು ಜನರ ಸೇವೆಗೆ ಮುಡುಪಿಡಬೇಕು. ಯಾವುದೇ ಉದಾಸೀನ ತೋರದೆ ಕೆಲಸ ಮಾಡಬೇಕು. ಸಮಸ್ಯೆಗಳು ಬಂದಾಗ ಕೈಚೆಲ್ಲಬಾರದು. ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು, ಸದಸ್ಯರು ನೀಡಿರುವ ಮಾರ್ಗದರ್ಶನ, ಸಲಹೆ ಅನುಸಾರ ಕರ್ತವ್ಯ ನಿರ್ವಹಿಸಬೇಕು ಎಂದು ಹೇಳಿದರು.

ನಂತರ ಆಯೋಗದಲ್ಲಿ ದಾಖಲಾಗಿರುವ ದೂರುಗಳ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರು, ಜಿಲ್ಲೆಯಲ್ಲಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಕುರಿತು ಸಲ್ಲಿಸಿದ ಕ್ರೋಢೀಕೃತ ವರದಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಮಾದರಿಯನ್ನು ಇತರೆ ಜಿಲ್ಲೆಗಳು ಅನುಸರಿಸಬೇಕೆಂದು ತಿಳಿಸಿದರು.

ಕಾರ್ಯಾಗಾರದ ಬಳಿಕ ದಾಖಲಾಗಿರುವ ಪ್ರಕರಣಗಳ ವಿಚಾರಣೆಯನ್ನು ಆಯೋಗ ನಡೆಸಿತು. ನಂತರ ಸಾರ್ವಜನಿಕರಿಂದ ದೂರು, ಅಹವಾಲುಗಳನ್ನು ಆಯೋಗದ ಅಧ್ಯಕ್ಷರು, ಸದಸ್ಯರು ಆಲಿಸಿದರು. ಇದೇ ಸಂದರ್ಭದಲ್ಲಿ ಅಧಿಕಾರಿಗಳಿಗೆ ಪಾಲಿಸಬೇಕಿರುವ ಕ್ರಮಗಳ ಬಗ್ಗೆ ಸೂಚಿಸಿದರು.

ಆಯೋಗದ ಕಾರ್ಯದರ್ಶಿ ಅರುಣ್ ಪೂಜಾರ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಬಿಆರ್‌ಟಿ ಹುಲಿ ಯೋಜನೆ ನಿರ್ದೇಶಕಿ ದೀಪಾ ಜೆ.ಕಂಟ್ರಾಕ್ಟರ್ ಉಪಸ್ಥಿತರಿದ್ದರು.


"ಮಾನವ ಹಕ್ಕುಗಳ ಸಂರಕ್ಷಣೆ ಜವಾಬ್ದಾರಿ ಸರ್ಕಾರದ್ದಾಗಿದೆ. ಜನರು ಅಧಿಕಾರಿಗಳ ಬಳಿ ದೂರು ತಂದಾಗ ಸೌಜನ್ಯದಿಂದ ವರ್ತಿಸಿದರೆ ದೂರುದಾರರ ಆತಂಕ ಕಡಿಮೆಯಾಗುತ್ತದೆ. ಆಯೋಗ ಅಧಿಕಾರಿಗಳಿಗೆ ಉಲ್ಲಂಘನೆ ಪ್ರಕರಣಗಳಲ್ಲಿ ವರದಿ ಕೇಳಿದಾಗ ವಿಳಂಬ ಮಾಡದೇ ಸಲ್ಲಿಸಬೇಕು. ಜನರ ಅಹವಾಲು, ಸಮಸ್ಯೆಗಳನ್ನು ಪರಿಹರಿಸಬೇಕು.
– ಟಿ.ಶ್ಯಾಮ್ ಭಟ್, ಮಾನವ ಹಕ್ಕುಗಳ ಆಯೋಗದ ಸದಸ್ಯ

ನಾಳೆ ಮುಖ್ಯ ಶಿಕ್ಷಕರ ಕೌನ್ಸೆಲಿಂಗ್

ಚಾಮರಾಜನಗರ, ಫೆ.1– ಮುಖ್ಯ ಶಿಕ್ಷಕರ ಹುದ್ದೆಗಳಿಗೆ ಬಡ್ತಿ ನೀಡುವ ಸಂಬಂಧ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರು ವಲಯ ಬದಲಾವಣೆ ಕೋರಿ ಮನವಿ ಸಲ್ಲಿಸಿದ್ದು, ವಲಯ ಬದಲಾವಣೆ ಆನ್‌ಲೈನ್ ಕೌನ್ಸೆಲಿಂಗ್ ಅನ್ನು ಫೆ.3ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ನಡೆಸಲಾಗುವುದು.

ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು 2021ರ ಡಿ.31ರ ಮಕ್ಕಳ ಅನುಪಾತ (ಪಿಟಿಆರ್) ದಂತೆ ಶಾಲಾವಾರು ಅಂತಿಮವಾಗಿ ಹಂಚಿಕೆ ಮಾಡಿರುವ ಹುದ್ದೆಗಳಂತೆ ಜಿಲ್ಲೆಯಲ್ಲಿ ಖಾಲಿ ಮುಖ್ಯಶಿಕ್ಷಕರ ಹುದ್ದೆಗಳಿಗೆ ಭರ್ತಿ ನೀಡುವ ಸಂಬಂಧ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರು ವಲಯ ಬದಲಾವಣೆಗೆ ಮನವಿ ಸಲ್ಲಿಸಿದ್ದಾರೆ. ಅರ್ಹ ಮುಖ್ಯ ಶಿಕ್ಷಕರ ಪಟ್ಟಿಯನ್ನು ಬಿಇಓ ಕಚೇರಿ ಪ್ರಕಟಣಾ ಫಲಕ ಹಾಗೂ ವಾಟ್ಸ್‌ಆ್ಯಪ್ ಮೂಲಕ ಮಾಹಿತಿ ನೀಡಲಾಗಿದೆ. ಮುಖ್ಯ ಶಿಕ್ಷಕರು ಕೌನ್ಸೆಲಿಂಗ್‌ಗೆ ಹಾಜರಾಗಿ ವಲಯ ಬದಲಾವಣೆ ಅವಕಾಶ ಸದುಪಯೋಗ ಮಾಡಿಕೊಳ್ಳುವಂತೆ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಚಾಮರಾಜನಗರ ತಾಲೂಕಿನ ಕೂಡ್ಲೂರು ಮಾರ್ಗವಾಗಿ ಮಾದಾಪುರ ಗ್ರಾಮಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥಾಗೆ ಗ್ರಾಪಂ ವತಿಯಿಂದ ಸ್ವಾಗತಿಸಲಾಯಿತು. ಗ್ರಾಪಂ ಅಧ್ಯಕ್ಷ ರೋಪೇಶ್, ಸದಸ್ಯರಾದ ಸುಜನಾಕುಮಾರಿ, ಸೈಯದ್ ನಜಿರುಲ್ಲಾ, ಸಿದ್ದರಾಜಮ್ಮ, ಮಂಜುನಾಥ್, ರಾಚ್ಚೀಗೌಡ, ಪಿಡಿಓ ಭಾಗ್ಯಲಕ್ಷ್ಮೀ, ಕಾರ್ಯದರ್ಶಿ ರವೀಶ್, ಗ್ರಾಮದ ಮುಖಂಡರು ಇದ್ದರು.


ಚಾ.ನಗರದ ಕೆಎಸ್‌ಎಂಸಿಎಲ್‌ನಲ್ಲಿ ವಯೋ ನಿವೃತ್ತಿ ಹೊಂದಿದ ಸುರೇಶ್‌ಗೌಡ ಅವರನ್ನು ಗೌರವಿಸಲಾಯಿತು. ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜಿ, ಡಾ.ಪರಮೇಶ್ವರಪ್ಪ ಇದ್ದರು.

ಪಾದಚಾರಿಗೆ ಬೈಕ್ ಡಿಕ್ಕಿ: ಇಬ್ಬರ ಸಾವು


ಹರ್ಷಿತ್


ತಾಂಡವಾಚಾರಿ

ದಡದಹಳ್ಳಿ: ಬೈಕ್ ಡಿಕ್ಕಿಯಾಗಿ ಬಾಲಕ ಮತ್ತು ಪಾದಚಾರಿ ಇಬ್ಬರು ಮೃತಪಟ್ಟಿರುವ ಘಟನೆ ಚಾಮರಾಜನಗರ ತಾಲೂಕಿನ ಚಂದಕವಾಡಿ ಹೋಬಳಿಯ ಸರಗೂರು ಗ್ರಾಮದ ಬಳಿ ಬುಧವಾರ ರಾತ್ರಿ ನಡೆದಿದೆ.

ಸರಗೂರು ಗ್ರಾಮದ ಹರ್ಷಿತ್(15) ಮತ್ತು ತಾಂಡವಾಚಾರಿ(70) ಅಪಘಾತದಲ್ಲಿ ಮೃತಪಟ್ಟಿದ್ದು, ಹರ್ಷಿತ್ ಚಾಮರಾಜನಗರದ ಇಂಗ್ಲಿಷ್ ಯುನಿವರ್ಸ್ ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ. ಈತ ಸಂಜೆ ಶಾಲೆ ಮುಗಿಸಿ ಮನೆಗೆ ಬಂದಿದ್ದು, ಚಂದಕವಾಡಿಗೆ ಬೈಕ್ ತೆಗೆದುಕೊಂಡು ಹೋಗಿ ಮನೆಗೆ ವಾಪಸ್ಸಾಗುತ್ತಿದ್ದ. ಈ ವೇಳೆ ಅದೇ ಗ್ರಾಮದ ತಾಂಡವಾಚಾರಿ, ಜಮೀನಿನಲ್ಲಿ ಕೆಲಸ ಮುಗಿಸಿ ಮನೆಗೆ ಬರುತ್ತಿದ್ದಾಗ ಹಿಂದಿನಿಂದ ಬೈಕ್‌ನಲ್ಲಿ ಬಂದ ಹರ್ಷಿತ್ ಅವರಿಗೆ ಡಿಕ್ಕಿ ಹೊಡೆದಿದ್ದಾನೆ ಬಾಲಕ ಹರ್ಷಿತ್ ಸ್ಥಳದಲ್ಲೇ ಮೃತಪಟ್ಟಿದ್ದು, ತಾಂಡವಾಚಾರಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ.

ಈ ಸಂಬಂಧ ರಾಮಸಮುದ್ರ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂರನೇ ಪುಟದಿಂದ

ಅನ್ನದಾತರು ಆದ್ಯತೆ

ಎಂದು ತಿಳಿಸಿದರು. ಸಮಗ್ರ ಸರ್ವವ್ಯಾಪಕತೆ, ಸರ್ವರನ್ನು ಒಳಗೊಳ್ಳುವ ಅಭಿವೃದ್ಧಿಯನ್ನು ಖಾತರಿಪಡಿಸುವುದರತ್ತ ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ. ಗ್ರಾಮೀಣ ಮಹಿಳೆಯರು ಬಹುಜೀವನೋಪಾಯ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಅನುಷ್ಠಾನಗೊಳಿಸಿರುವ 'ಲಖ್‌ಪತಿ ದೀದಿ' ಯೋಜನೆಯಡಿ 3 ಕೋಟಿ ಮಹಿಳೆಯರಿಗೆ ತರಬೇತಿ ನೀಡಲಾಗುವುದು ಎಂದು ಪ್ರಕಟಿಸಿದರು. ಈ ಯೋಜನೆಯಡಿ ಹಳ್ಳಿಗಳಲ್ಲಿಯೇ ಸಣ್ಣ ಉದ್ಯಮಗಳ ಸ್ಥಾಪನೆಗೆ ಸ್ವಸಹಾಯ ಗುಂಪಿನ ಸದಸ್ಯರಿಗೆ ಪ್ರೋತ್ಸಾಹ ನೀಡಲಾಗುವುದು. ಆ ಮೂಲಕ ಅವರು ವರ್ಷಕ್ಕೆ ಕನಿಷ್ಠ 1 ಲಕ್ಷ ರೂ.ಗಳ ಆದಾಯ ಗಳಿಸುವಂತೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶ. ಈ ಮೊದಲು ಈ ಯೋಜನೆಯಡಿ 2 ಕೋಟಿ ಮಹಿಳೆಯರಿಗೆ ತರಬೇತಿ ನೀಡುವ ಗುರಿ ಹೊಂದಲಾಗಿತ್ತು. ದೇಶಾದ್ಯಂತ 83 ಲಕ್ಷ ಸ್ವಸಹಾಯ ಗುಂಪುಗಳಲ್ಲಿ 9 ಕೋಟಿ ಮಹಿಳೆಯರಿದ್ದಾರೆ. ಸ್ವಾವಲಂಬನೆ ಸಾಧಿಸುವುದರ ಜೊತೆಗೆ ಗ್ರಾಮೀಣ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಅಪಾರ ಕೊಡುಗೆ ನೀಡುತ್ತಿದ್ದಾರೆ. ಈಗಾಗಲೇ ಕೋಟಿ ಮಹಿಳೆಯರು ಲಕ್ಷಾಧಿಪತಿಗಳಾಗಿದ್ದಾರೆ. ಪ್ರಸಕ್ತ ಬಜೆಟ್‌ನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿ 26 ಸಾವಿರ ಕೋಟಿ ಅನುದಾನ ನೀಡಲಾಗಿದ್ದು, ಇದು ಕಳೆದ ಬಾರಿಗಿಂತ ಶೇ.2.52ರಷ್ಟು ಹೆಚ್ಚಿದೆ.

'ಸಕ್ಷಮ್ ಅಂಗನವಾಡಿ' ಮತ್ತು 'ಪೋಷಣ್ 2.0' ಯೋಜನೆಗೆ 21 ಸಾವಿರದ 200 ಕೋಟಿ ನೀಡಲಾಗಿದ್ದು, ಮಹಿಳಾ ಸಬಲೀಕರಣದ 'ಮಿಷನ್ ಶಕ್ತಿ' ಯೋಜನೆಗೆ 3,145.97 ಕೋಟಿ, ಮಕ್ಕಳ ರಕ್ಷಣೆಯ 'ಮಿಷನ್ ವಾತ್ಸಲ್ಯ' ಯೋಜನೆಗೆ 1,472 ಕೋಟಿ ಹಂಚಿಕೆ ಮಾಡಲಾಗಿದೆ. ಮಹಿಳೆಯರ ಸುರಕ್ಷತೆ ಮತ್ತು ರಕ್ಷಣೆಯ ಸಂಬಂಧ ವಿವಿಧ ಸರ್ಕಾರಿ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಕ್ರೋಢೀಕರಿಸಿ ಮಹಿಳೆಯರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು ಮಿಷನ್ ಶಕ್ತಿ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಮಕ್ಕಳ ಸಮಗ್ರ ಅಭಿವೃದ್ಧಿಗೆ ಪೂರಕವಾದ ಸುರಕ್ಷಿತ ವಾತಾವರಣವನ್ನು ಕಲ್ಪಿಸುವುದು ವಾತ್ಸಲ್ಯ ಯೋಜನೆಯ ಗುರಿಯಾಗಿದೆ. ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗೆ ಸಂಬಂಧ ಸ್ವಾಯತ್ತ ಸಂಸ್ಥೆಗಳಿಗೆ ಈ ಸಲ ಕಡಿಮೆ ಹಣ ಹಂಚಿಕೆ ಮಾಡಲಾಗಿದೆ. ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ, ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ರಾಷ್ಟ್ರೀಯ ಮಹಿಳಾ ಆಯೋಗ ಇತ್ಯಾದಿ ಸ್ವಾಯತ್ತ ಸಂಸ್ಥೆಗಳಿಗೆ ಈ ಬಾರಿ ಕೇವಲ 153 ಕೋಟಿ ಮಾತ್ರ ಹಂಚಿಕೆ ಮಾಡಲಾಗಿದೆ.

ಆಯುಷ್ಮಾನ್ ಭಾರತ್ ಆರೋಗ್ಯ ಯೋಜನೆ

ಸೃಷ್ಟಿ ಮತ್ತು ಉದ್ಯಮಶೀಲತೆಗಳನ್ನು ಉತ್ತೇಜಿಸಲಾಗಿದೆ. ಅಭಿವೃದ್ಧಿ ಉಪಕ್ರಮಗಳು ಬೃಹತ್ ಪ್ರಮಾಣದಲ್ಲಿ ಜನರನ್ನು ತಲುಪಿವೆ ಎಂದು ಅವರು ಹೇಳಿದರು. ವಸತಿ, ನೀರು, ವಿದ್ಯುತ್, ಅಡುಗೆ ಅನಿಲ ಮತ್ತು ಆರ್ಥಿಕ ಸೇರ್ಪಡೆಯಂತಹ ಅಗತ್ಯ ಸೇವೆಗಳೊಂದಿಗೆ ಮನೆಗಳು ಮತ್ತು ವ್ಯಕ್ತಿಗಳನ್ನು ಗುರಿಯಾಗಿಸಿಕೊಂಡಿದೆ. 80 ಕೋಟಿ ಜನರಿಗೆ ಉಚಿತ ಪಡಿತರವನ್ನು ಒದಗಿಸುವ ಮೂಲಕ ಆಹಾರ ಭದ್ರತೆಗೆ ಸಂಬಂಧಿಸಿದ ಕಳವಳವನ್ನು ನಿವಾರಿಸಲಾಗಿದೆ. ನಮ್ಮ ರಾಷ್ಟ್ರದ ಬೆನ್ನೆಲುಬಾಗಿರುವ ರೈತರ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಗಳನ್ನು ಕಾಲಕಾಲಕ್ಕೆ ಹೆಚ್ಚಿಸಲಾಗಿದೆ.

2047ಕ್ಕೆ ಅಭಿವೃದ್ಧಿ ಭಾರತ: 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಮಹತ್ವಾಕಾಂಕ್ಷೆಯ ಕಡೆಗೆ ಕೆಲಸ ಮಾಡುವುದು ನಮ್ಮ ಗುರಿ. ನಮ್ಮ ಪ್ರಯತ್ನಗಳು ಸಮಾಜದ ಪ್ರತಿಯೊಂದು ವಿಭಾಗವನ್ನೂ ಒಳಗೊಳ್ಳುವ ಸಮಗ್ರ ಪ್ರಗತಿಯತ್ತ ನಿರ್ದೇಶಿಸಲ್ಪಟ್ಟಿವೆ ಎಂದು ತಿಳಿಸಿದರು.

ಕೋಟಿ ಮನೆಗೆ ಉಚಿತ ವಿದ್ಯುತ್: ಒಂದು ಕೋಟಿ ಮನೆಗಳಿಗೆ ಪ್ರತಿ ತಿಂಗಳು 300 ಯೂನಿಟ್ ಉಚಿತ ವಿದ್ಯುತ್ ನೀಡುವುದಾಗಿ ಘೋಷಣೆ ಮಾಡಿದ ಅವರು, ಮನೆಯ ಮೇಲ್ಛಾವಣಿ ಮೇಲಿನ ಸೌರಶಕ್ತಿ ಫಲಕದಿಂದ 1 ಕೋಟಿ ಮನೆಗಳಿಗೆ ಪ್ರತಿ ತಿಂಗಳು 300 ಯೂನಿಟ್ ಉಚಿತ ವಿದ್ಯುತ್ ಸಿಗಲಿದೆ ಎಂದು ಘೋಷಣೆ ಮಾಡಿದರು.

ಮೂರು ಕೋಟಿ ಮನೆ: ಕೋವಿಡ್ ಸವಾಲುಗಳ ನಡುವೆಯೂ, ಪ್ರಧಾನಮಂತ್ರಿ ಆವಾಸ್ ಯೋಜನೆ ಗ್ರಾಮೀಣ ಅನುಷ್ಠಾನ ಯಶಸ್ವಿಯಾಗಿ ಮುಂದುವರೆದಿದೆ. ನಾವು 3 ಕೋಟಿ ಮನೆ ನಿರ್ಮಾಣ ಗುರಿಯ ಸಮೀಪದಲ್ಲೇ ಇದ್ದೇವೆ. ಮುಂದಿನ 5 ವರ್ಷಗಳಲ್ಲಿ 2 ಕೋಟಿ ಹೆಚ್ಚಿನ ಮನೆಗಳ ನಿರ್ಮಾಣಕ್ಕೆ ಅನುದಾನ ಒದಗಿಸಲಾಗುವುದು. ಹಾಗೆಯೇ ಒಂದು ಕೋಟಿ ಮನೆಗಳಿಗೆ ಪ್ರತಿ ತಿಂಗಳು 300 ಯೂನಿಟ್ ಉಚಿತ ವಿದ್ಯುತ್ ನೀಡಲಾಗುವುದು ಎಂದು ಹೇಳಿದರು.

ಬಡವರಿಗೆ ಛಾವಣಿ ಯೋಜನೆ: ಕೇಂದ್ರ ಸರ್ಕಾರ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳನ್ನು ಗುರಿಯಾಗಿಸಿಕೊಂಡು 'ಪ್ರಧಾನಮಂತ್ರಿ ಸೂರ್ಯೋದಯ ಯೋಜನೆ' ಘೋಷಣೆ ಮಾಡಲಾಗಿದೆ. ವಿದ್ಯುತ್ ಬಿಲ್‌ಗಳನ್ನು ಕಡಿಮೆ ಮಾಡಲು ಮತ್ತು ಅವರ ವಿದ್ಯುತ್ ಅಗತ್ಯಗಳಿಗಾಗಿ ಸೌರಶಕ್ತಿ ಅವಲಂಬಿಸುವ ಮೂಲಕ ನಿಜವಾದ ಆತ್ಮನಿರ್ಭರ್ ಆಗಲು ಪ್ರತಿ ಮನೆಯವರು ಸೂರ್ಯನ ಶಕ್ತಿಯನ್ನು ಬಳಸಿಕೊಳ್ಳಬಹುದು. ಈ ಯೋಜನೆಯಡಿ 1 ಕೋಟಿ ಮನೆಯ ಮೇಲ್ಛಾವಣಿ ಮೇಲೆ ಸೌರಶಕ್ತಿ ಫಲಕ ಅಳವಡಿಕೆ ಮಾಡಲಾಗುತ್ತದೆ. ಇದರಿಂದಾಗಿ ಮನೆಗಳು ಸೌರಶಕ್ತಿ ವಿದ್ಯುತ್ ಪಡೆಯುವ ಜೊತೆಗೆ ಹೆಚ್ಚಿನ ವಿದ್ಯುತ್ ಅನ್ನು ಮಾರಾಟ ಮಾಡಲು ಸಹ ಅವಕಾಶ ಕಲ್ಪಿಸಲಾಗುತ್ತದೆ.

ಆದಾಯ ತೆರಿಗೆ ಯಥಾಸ್ಥಿತಿ

ಮುಂದುವರೆದಿದ್ದು, ಹೊಸ ತೆರಿಗೆ ಪದ್ಧತಿಯನ್ನೂ ಹಿಂದಿನಂತೆಯೇ ಮುಂದುವರೆಸಲಾಗಿದೆ. ಕಳೆದ 10 ವರ್ಷಗಳಲ್ಲಿ ಆದಾಯ ತೆರಿಗೆ ಸಂಗ್ರಹ ದುಪ್ಪಟ್ಟಾಗಿದೆ ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ಆದಾಯ ತೆರಿಗೆ ಮಾತ್ರವಲ್ಲದೆ, ಆಮದು ಸುಂಕ ಸೇರಿದಂತೆ ಇನ್ನಿತರ ತೆರಿಗೆಗಳನ್ನೂ ಕೂಡ ಯಥಾಸ್ಥಿತಿಯಲ್ಲಿ ಉಳಿಸಿಕೊಂಡಿದ್ದು, ಸಣ್ಣ ಆದಾಯ ಹಿಂತೆಗೆತ ತೆರಿಗೆಗೆ ಸಂಬಂಧಿಸಿದ ಯೋಜನೆಯೊಂದನ್ನು ಘೋಷಿಸಿದ್ದಾರೆ. ಬಾಕಿ ಉಳಿದಿರುವ ನೇರ ತೆರಿಗೆ ಬೇಡಿಕೆಗಳನ್ನು 2009–10ರವರೆಗಿನ ಅವಧಿಗೆ ಸಂಬಂಧಿಸಿದಂತೆ 25 ಸಾವಿರ ರೂ.ಗಳವರೆಗೆ, 2013–14ರವರೆಗಿನ ಅವಧಿಗೆ ಸಂಬಂಧಿಸಿದಂತೆ 10 ಸಾವಿರ ರೂ.ಗಳವರೆಗೆ ಹಿಂಪಡೆಯಲಾಗುತ್ತಿದೆ. ಇದರಿಂದ 1 ಕೋಟಿ ತೆರಿಗೆದಾರರು ಲಾಭ ಪಡೆಯಲಿದ್ದಾರೆ ಎಂದು ಸಚಿವರು ಹೇಳಿದರು. ಆದಾಯ ತೆರಿಗೆ ದರಗಳು ಈಗಾಗಲೇ ಕಡಿಮೆಯಾಗಿದ್ದು, ಸರ್ಕಾರವು ಪ್ರತೀ ವರ್ಷಕ್ಕೆ 2.4 ಲಕ್ಷ ರೂ.ಗಳಿಂದ 7.5 ಲಕ್ಷ ರೂ.ಗಳವರೆಗೆ ಪ್ರಮಾಣಿತ ಕಡಿತವನ್ನು ಹೆಚ್ಚಿಸಿದೆ. 2013–14ನೇ ಸಾಲಿನಲ್ಲಿ ತೆರಿಗೆ ಮರುಪಾವತಿ ಸರಾಸರಿ ಪ್ರಕ್ರಿಯೆ ಸಮಯವನ್ನು 93 ದಿನಗಳಿಂದ 10 ದಿನಗಳಿಗೆ ಇಳಿಸಲಾಗಿದ್ದು, ಇದರಿಂದ ಮರುಪಾವತಿಯನ್ನು ವೇಗವಾಗಿ ಮಾಡಬಹುದಾಗಿದೆ ಎಂದರು. ಕಳೆದ 10 ವರ್ಷದಲ್ಲಿ ತೆರಿಗೆ ಮರುಪಾವತಿಯನ್ನು ಸಲ್ಲಿಸುವವರ ಸಂಖ್ಯೆ 2.4 ಪಟ್ಟು ಹೆಚ್ಚಾಗಿದೆ ಎಂದು ಹೇಳಿದ ವಿತ್ತ ಸಚಿವರು, ಈ ಅವಧಿಯಲ್ಲಿ ನೇರ ತೆರಿಗೆ ಸಂಗ್ರಹ 3 ಪಟ್ಟು ಹೆಚ್ಚಾಗಿದೆ. ಆರ್ಥಿಕ ವರ್ಷ 2018ರಿಂದ ಜಿಎಸ್‌ಟಿ ತೆರಿಗೆ ಮೂಲ ಸರಾಸರಿ ಮಾಸಿಕ ಜಿಎಸ್‌ಟಿ ಕೂಡ ದ್ವಿಗುಣಗೊಂಡಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

ಇದು 'ವಿಕಸಿತ ಭಾರತ' ಬಜೆಟ್

ಮಾತನಾಡಿದರೆ, ಒಂದು ರೀತಿಯಲ್ಲಿ ಇದು 'ಸ್ವೀಟ್ ಸ್ಪಾಟ್'. ಇದರೊಂದಿಗೆ, 21ನೇ ಶತಮಾನದ ಭಾರತದ ಆಧುನಿಕ ಮೂಲಸೌಕರ್ಯ ನಿರ್ಮಾಣದೊಂದಿಗೆ ಯುವಜನತೆಗೆ ಹೊಸ ಉದ್ಯೋ ಗಾವಕಾಶಗಳನ್ನು ಕಲ್ಪಿಸಲಾಗುವುದು ಎಂದರು. ಈ ಬಜೆಟ್ ಬಡವರು, ಮಧ್ಯಮ ವರ್ಗದವರ ಸಬಲೀಕರಣ ಮತ್ತು ಅವರಿಗೆ ಹೊಸ ಉದ್ಯೋಗಾವಕಾಶಗಳ ಸೃಷ್ಟಿಗೆ ಒತ್ತು ನೀಡುತ್ತದೆ. ಬಡವ ರಿಗೆ ಇನ್ನೂ 2 ಕೋಟಿ ಮನೆಗಳನ್ನು ನಿರ್ಮಿಸಿ ಕೊಡುವುದಾಗಿ ಘೋಷಿಸಲಾಗಿದೆ. ನಾವು ಈಗ 3 ಕೋಟಿ **'ಲಖ್ಪತಿ ದೀದಿ ಯೋಜನೆ'** ಹೊಂದುವ ಗುರಿ ಹೊಂದಿದ್ದೇವೆ. ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಆಯುಷ್ಮಾನ್ ಭಾರತ್ ಯೋಜನೆ ಪ್ರಯೋಜನ ಪಡೆಯುತ್ತಾರೆ ಎಂದು ಸಮರ್ಥಿಸಿಕೊಂಡರು.

ತಲಾ ಎರಡು ಸೀರೆ ವಿತರಣೆ

ನಿಯಮಾವಳಿಗಳಿಗೆ ಮಾಡಿರುವ ತಿದ್ದುಪಡಿಗೆ ಅನುಮೋದನೆ ನೀಡಲಾಗಿದೆ. ನಬಾರ್ಡ್ ನೆರವಿನೊಂದಿಗೆ ರಾಜ್ಯದ ಆರು ಜಿಲ್ಲೆಗಳಲ್ಲಿ ಬಹು ಉತ್ಪನ್ನ ಶೀಥಲ ಗೃಹಗಳನ್ನು 65.97 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ರಾಜ್ಯದ ಆರು ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು 100 ಕೋಟಿ ರೂ. ವೆಚ್ಚದಲ್ಲಿ ಉನ್ನತೀಕರಿಸಲು ಸಭೆ ಸಮ್ಮತಿಸಿದೆ.

ಮೈಸೂರು ಸೇರಿ ಹಲವೆಡೆ ಐಟಿಐ ಉನ್ನತೀಕರಣ: ಮೈಸೂರು, ಕಲಬುರಗಿ, ಬೆಂಗಳೂರು, ರಾಯಚೂರು, ಬಳ್ಳಾರಿ ಹಾಗೂ ವಿಜಯಪುರ ತರಬೇತಿ ಸಂಸ್ಥೆಗಳಲ್ಲಿ ಉನ್ನತೀಕರಣ ನಡೆಯಲಿದೆ. ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ 450 ಹಾಸಿಗೆ ಸಾಮರ್ಥ್ಯದ ಕಟ್ಟಡ ನಿರ್ಮಾಣ ಕಾಮಗಾರಿಯ ಪರಿಷ್ಕೃತ ಅಂದಾಜು 142.47 ಕೋಟಿ ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ದೊಡ್ಡ ಹುಣಸೂರಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ: ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ದೊಡ್ಡ ಹುಣಸೂರು ಗ್ರಾಮದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕಾಗಿ ಜಮೀನು ಮಂಜೂರು ಮಾಡಲಾಯಿತು. ರಾಜ್ಯದ 104 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ 60 ಕೋಟಿ ರೂ. ವೆಚ್ಚದಲ್ಲಿ ಕಲಿಕಾ ವಾತಾವರಣ ಅಭಿವೃದ್ಧಿಗೆ ಸಂಪುಟ ಅನುಮತಿ ನೀಡಿದೆ. ವಿಧಾನಮಂಡಲದ ಉಭಯ ಸದನಗಳನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಲಿರುವ ಭಾಷಣಕ್ಕೆ ಸಂಪುಟ ಅನುಮೋದನೆ ನೀಡಿದೆ.

ಸಾಮಾನ್ಯ ರೈಲು ಬೋಗಿ ವಂದೇ ಭಾರತ್ ದರ್ಜೆಗೆ

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ತಾವು ಮಂಡಿಸಿದ ಬಜೆಟ್‌ನಲ್ಲಿ ಕೆಲ ರೈಲ್ವೆ ಯೋಜನೆಗಳನ್ನು ಘೋಷಿಸಿದ್ದಾರೆ. ಸಾಮಾನ್ಯ ರೈಲುಗಳ ಬೋಗಿಗಳನ್ನು ವಂದೇ ಭಾರತ್ ದರ್ಜೆಗೇರಿಸಲು ಸರ್ಕಾರ ಸಿದ್ಧತೆ ನಡೆಸಿದೆ ಅಲ್ಲದೇ ಮೆಟ್ರೋ ಮತ್ತು ನಮೋ ರೈಲನ್ನು ಇನ್ನೂ ಹೆಚ್ಚಿನ ನಗರಗಳಿಗೆ ವಿಸ್ತರಿಸಲಾಗುವುದು. ಸುಮಾರು 40 ಸಾವಿರ ರೈಲು ಬೋಗಿಗಳನ್ನು ವಂದೇ ಭಾರತ್ ದರ್ಜೆಗೆ ಪರಿವರ್ತಿಸಲಾಗುವುದು ಎಂದ ಅವರು, ಇದರೊಂದಿಗೆ 3 ಹೊಸ ರೈಲು ಕಾರಿಡಾರ್‌ಗಳ ನಿರ್ಮಾಣ ಮಾಡಲಾಗುವುದು. ಜೊತೆಗೆ ಸರಕು ಸಾಗಿಗೆ ಕಾರಿಡಾರ್‌ನ ಕಾಮಗಾರಿಯೂ ಮುಂದುವರೆಯುತ್ತದೆ.

ಕೆಲ ಕಾಯಕ ಸಮುದಾಯಗಳನ್ನು ಪ್ರವರ್ಗ–1ಕ್ಕೆ ಸೇರಿಸಿ ಮೀಸಲಾತಿ ಪ್ರಮಾಣ ಹೆಚ್ಚಿಸುವುದು ಅಗತ್ಯ

ಅಂಕಣಕಾರ ರಘು ಕೌಟಿಲ್ಯ ಅಭಿಮತ



ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದಲ್ಲಿ ಗಣ್ಯರು ಪುಷ್ಪಾರ್ಚನೆ ಮಾಡುತ್ತಿರುವುದು.

ಮೈಸೂರು,ಫೆ.1(ಎಂಟಿವೈ)– ಮಡಿವಾಳ ಸಮುದಾಯ ಸೇರಿದಂತೆ ಕೆಲ ಕಾಯಕ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸಲು ಅವುಗಳನ್ನು ಪ್ರವರ್ಗ –1ಕ್ಕೆ ಸೇರಿಸಿ ಮೀಸಲಾತಿ ಪ್ರಮಾಣ ಹೆಚ್ಚಿಸುವ ಅಗತ್ಯವಿದೆ ಎಂದು ಅಂಕಣಕಾರ ರಘು ಆರ್.ಕೌಟಿಲ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡಿದ ಅವರು, ಪ್ರಸ್ತುತ ಮಡಿವಾಳ ಸಮುದಾಯ ಪ್ರವರ್ಗ '2ಎ'ನಲ್ಲಿದೆ. ಮೀಸಲಾತಿ ಸೌಲಭ್ಯ ನಮ್ಮ ಸಮುದಾಯಕ್ಕೆ ಸರಿಯಾಗಿ ತಲುಪುತ್ತಿಲ್ಲ. ಅದನ್ನು ಪಡೆಯುವುದು ಸುಲಭವೂ ಆಗಿಲ್ಲ. ಕಾಯಕ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸಬೇಕಾದರೆ ಕೆಲವು ಮಾರ್ಪಾಡು ಮಾಡಬೇಕು. ಪ್ರಸ್ತುತ ಪ್ರವರ್ಗ–'2ಎ'ಗೆ ನೀಡಲಾಗಿರುವ ಮೀಸಲಾತಿಯಲ್ಲಿ ಸ್ವಲ್ಪ ಕಡಿಮೆ ಮಾಡಿ, ಪ್ರವರ್ಗ –1ಕ್ಕೆ ಶೇ.7ರಷ್ಟು ಮೀಸಲಾತಿ ಪ್ರಮಾಣ ನೀಡಬೇಕು. ಪ್ರವರ್ಗ–1ರಲ್ಲಿ ಗೊಲ್ಲರು, ಗಂಗಾಮತಸ್ಥರು, ಉಪ್ಪಾರ ಸಮುದಾಯ ಹಾಗೂ 46 ಅಲೆಮಾರಿ ಸಮುದಾಯಗಳಿವೆ. '2ಎ' ನಲ್ಲಿರುವ ವಿಶ್ವಕರ್ಮ, ಮಡಿವಾಳ, ಗಾಣಿಗ, ಹಡಪದ ಸಮುದಾಯವನ್ನು ಪ್ರವರ್ಗ 1ಕ್ಕೆ ಸೇರಿಸಿದರೆ ಸಾಮಾಜಿಕ ನ್ಯಾಯ ಒದಗಿಸಿದಂತಾಗುತ್ತದೆ ನಮ್ಮ ಪಾಲನ್ನು ನಮಗೆ ಕೊಡಿ ಎಂದು ಕೇಳುತ್ತಿದ್ದೇವೆ ಎಂದರು.

ಮಡಿವಾಳ ಸಮಾಜದವರು ಯಾವುದಾದರೂ ಜನಪ್ರತಿನಿಧಿಗಳು, ಸಚಿವರು ಬಂದಾಗ ತಮಗೆ ಮನೆ, ಭೂಮಿ, ನಿವೇಶನ ನೀಡಿ ಎಂದು ಕೇಳುವುದೇ ಇಲ್ಲ. ಬದಲಿಗೆ ಬಟ್ಟೆ ಸ್ವಚ್ಛ ಮಾಡಲು ಉತ್ತಮ ನೀರಿನ ವ್ಯವಸ್ಥೆಯಿರುವ ದೋಬಿಘಾಟ್ ನೀಡುವಂತೆ ಕೇಳುತ್ತಾರೆ. ಇನ್ನು ಮುಂದೆ ಮಡಿವಾಳ ಸಮುದಾಯ ಭೂಮಿ, ಉದ್ಯೋಗ ಮತ್ತು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವಂತೆ ಸರ್ಕಾರವನ್ನು ಒತ್ತಾಯಿಸಬೇಕು. ಆ ಕುರಿತು ಜಾಗೃತಿ ಮೂಡಬೇಕು ಎಂದು ತಿಳಿಸಿದರು.

ವಚನ ರಕ್ಷಿಸಿದ ಮಾಚಿದೇವ: ಭಾರತ ಭವ್ಯ ಇತಿಹಾಸ, ಪರಂಪರೆ ಹೊಂದಿದೆ. ರಾಮಾಯಣ, ಮಹಾಭಾರತ ಮನುಕುಲಕ್ಕೆ ಬೆಳಕು ಚೆಲ್ಲಿದ ಮಹಾಗ್ರಂಥಗಳು. 12ನೇ ಶತಮಾನದಲ್ಲಿ ಬಸವಾದಿ ಶರಣರ ವಚನ ಸಾಹಿತ್ಯ ಮಾನವ ಧರ್ಮದ ಶ್ರೇಷ್ಠತೆ ಸಾರಿದೆ. ತನ್ನ ಪ್ರಾಣವನ್ನು ಲೆಕ್ಕಿಸದೆ ವಚನಗಳನ್ನು ಸಂರಕ್ಷಿಸಿದ ವೀರ ಮಡಿವಾಳ ಮಾಚಿದೇವ ಕರ್ನಾಟಕದ ಹೆಮ್ಮೆ. ಅರಸುತನ ಮೇಲಲ್ಲ ಅಗಸತನ ಕೀಳಲ್ಲ ಎಂದ ಮಾಚಿದೇವ ಮಹಾಸ್ವಾಭಿಮಾನಿ. ಮಾಚಿದೇವ ವೀರಭದ್ರನ ಅವತಾರವೆಂದು ಪುರಾಣಗಳಲ್ಲಿದೆ. ಅರಸ ಬಿಜ್ಜಳನಿಗೂ ಹೆದರದ ಧೀರ. ಅನುಭವ ಮಂಟಪ ಪ್ರವೇಶಿಸಲು ಮಡಿವಾಳ ಮಾಚಿದೇವನ ಅನುಮತಿ ಪಡೆಯಬೇಕಿತ್ತು. ಮಡಿವಾಳ ಮಾಚಿದೇವರು 344 ವಚನಗಳನ್ನು ಬರೆದಿದ್ದಾರೆ. ಕಾಯಕ ಸಮಾಜಗಳನ್ನು ಒಗ್ಗೂಡಿಸಿದ ಬಸವಣ್ಣ ಅವರು ಸಾಮಾಜಿಕ ಕ್ರಾಂತಿ ಮಾಡಿದರು. ಇದರ ದಂಡನಾಯಕ ಮಡಿವಾಳ ಮಾಚಿದೇವ ಎಂದು ಹೇಳಿದರು.

ನಾವು ಇಂದು ರಾಮರಾಜ್ಯದ ಕನಸು ಕಾಣುತ್ತಿದ್ದೇವೆ. ನಮ್ಮಲ್ಲಿ ಯಾರೂ ರಾಮನನ್ನು ನೋಡಿಲ್ಲ. ಆದರೆ ರಾಮನ ರೂಪದಲ್ಲಿ ಕೃಷ್ಣರಾಜ ಒಡೆಯರ್ ಬಂದಿದ್ದಾರೆ. ಎಲ್ಲಾ ಸಮುದಾಯಗಳಿಗೆ ಎಲ್ಲಾ ಸವಲತ್ತು ನೀಡಿ, ಸಮಾನತೆಯಿಂದ ಕಂಡರು. ಮೈಸೂರು ಪ್ರಾಂತ್ಯದಲ್ಲಿ ರಾಮರಾಜ್ಯ ಸ್ಥಾಪಿಸಿದರು. ಅಂತಹ ಸಮಾಜವನ್ನು ನಾವು ಅಪೇಕ್ಷಿಸುತ್ತಿದ್ದೇವೆ ಎಂದರು.

ಮಡಿವಾಳ ಸಮುದಾಯ ಮಾಚಿದೇವರ ಜಯಂತಿ ಆಚರಣೆ ವೇಳೆ ಸಮುದಾಯದ ಸಾಧಕರನ್ನು ಸ್ಮರಿಸಬೇಕು. ಈ ಹಿಂದೆ ಗುರುಮಿಟ್‌ಕಲ್ ಕ್ಷೇತ್ರದಿಂದ ಮಡಿವಾಳ ಸಮುದಾಯದ ವಿದ್ಯಾದರ ಗುರೂಜಿ ಸಂಸದರಾಗಿ ಆಯ್ಕೆಯಾಗಿದ್ದರು. ನೆಹರು ಅವರಿಗೆ ಆಪ್ತರಾಗಿದ್ದ ಕೊಲ್ಲೂರು ಮಲ್ಲಪ್ಪ ವಿರುದ್ಧ ವಿದ್ಯಾದರ ಗುರೂಜಿ ಗೆಲ್ಲುತ್ತಾರೆ. ಸಮುದಾಯಕ್ಕೆ ಸೇರಿರುವ ಕೀರ್ತನ ಐಎಎಸ್ ಅಧಿಕಾರಿಯಾಗಿದ್ದಾರೆ. ಡಾ.ರವಿಕುಮಾರ್ ಮುಖ್ಯಮಂತ್ರಿಗಳ ಆರೋಗ್ಯ ಸಲಹೆಗಾರರಾಗಿ, ಕೆಪಿಎಸ್‌ಸಿ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರನ್ನು ಸ್ಮರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಮಡಿವಾಳ ಮಾಚಿದೇವರು ವಚನ ಸಾಹಿತ್ಯ ಮಾತ್ರವಲ್ಲದೆ, ಸಮಾಜದ ಸುಧಾರಣೆ ಮಾಡಿದರು. ವಚನಗಳ ಮೂಲಕ ಸಮಾಜಕ್ಕೆ ಸಂದೇಶ ಸಾರಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಆರ್. ಲೋಕನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ನಗರಪಾಲಿಕೆ ಉಪ ಆಯುಕ್ತ (ಕಂದಾಯ) ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ಮುಖಂಡ ರವೀಂದ್ರ ಕುಮಾರ್ ಇದ್ದರು. ಇದಕ್ಕೂ ಮುನ್ನ ಪ್ರಭುರಾವ್ ಮತ್ತು ತಂಡ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟಿತು.

ಮಾಚಿದೇವರ ಭಾವಚಿತ್ರ ಮೆರವಣಿಗೆ: ಮಾಚಿದೇವರ ಜಯಂತಿ ಹಿನ್ನೆಲೆಯಲ್ಲಿ ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿಯಿಂದ ಅಲಂಕೃತ ವಾಹನ ಹಾಗೂ ಸಾರೋಟ್‌ನಲ್ಲಿ ಮಾಚಿದೇವರ ಭಾವಚಿತ್ರವನ್ನು ವಿವಿಧ ಜಾನಪದ ಕಲಾತಂಡಗಳು, ಕಳಸ ಹೊತ್ತ ಮಹಿಳೆಯರೊಂದಿಗೆ ಮೆರವಣಿಗೆ ನಡೆಸಲಾಯಿತು. ಕೆ.ಆರ್.ವೃತ್ತ, ದೇವರಾಜ ಅರಸ್ ರಸ್ತೆ ನಾರಾಯಣಶಾಸ್ತ್ರಿ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿತು. ಈ ವೇಳೆ ವಿವಿಧ ಸಂಘಟನೆಗಳ ಮುಖಂಡರಾದ ಕೆ.ಎಸ್.ಶಿವರಾಂ, ಎಂ.ಚಂದ್ರಶೇಖರ್, ಮೈಸೂರು ಜಿಲ್ಲಾ ಮಡಿವಾಳ ಸಂಘದ ಅಧ್ಯಕ್ಷ ರವಿನಂದನ್, ಗೌರವಾಧ್ಯಕ್ಷ ರವಿಕುಮಾರ್, ಕಾರ್ಯದರ್ಶಿ ಮಹೇಶ್, ಖಜಾಂಚಿ ಪುಟ್ಟರಾಜು, ಮಹೇಶ್, ವೆಂಕಟೇಶ್, ನಾಗೇಶ್, ಎಂಪಿ ರವಿಕುಮಾರ್, ಧರ್ಮರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಶಿಷ್ಯ ವೇತನಕ್ಕೆ ಆಗ್ರಹಿಸಿ ಸಂಶೋಧನಾ ವಿದ್ಯಾರ್ಥಿಗಳ ಪ್ರತಿಭಟನೆ



ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವಂತೆ ಒತ್ತಾಯಿಸಿ ಮಾನಸಗಂಗೋತ್ರಿ ಕುವೆಂಪು ಪ್ರತಿಮೆ ಬಳಿ ಸಂಶೋಧನಾ ವಿದ್ಯಾರ್ಥಿಗಳು ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಫೆ.1(ಜಿಎ)– ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವಂತೆ ಒತ್ತಾಯಿಸಿ ಮೈಸೂರು ವಿಶ್ವವಿದ್ಯಾನಿಲಯದ ನೂತನ ಸಂಶೋಧನಾ ವಿದ್ಯಾರ್ಥಿಗಳು ಮಾನಸಗಂಗೋತ್ರಿಯ ಕುವೆಂಪು ಪ್ರತಿಮೆ ಬಳಿ ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನೆಗೆ ಸಂಬಂಧಿಸಿದಂತೆ ಎಸ್‌ಸಿ, ಎಸ್‌ಟಿ ವಿಶೇಷ ಘಟಕದಿಂದ 2021–22ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಎಲ್ಲಾ ಸಂಶೋಧಕರಿಗೂ ಶಿಷ್ಯವೇತನ ನೀಡಲಾಗಿದೆ. 2022–23ನೇ ಸಾಲಿನಲ್ಲಿ ಶಿಷ್ಯವೇತನಕ್ಕೆ ಅರ್ಜಿ ಕರೆದಿಲ್ಲ. ಪ್ರಸ್ತುತ 2023–24ನೇ ಸಾಲಿನಲ್ಲಿ ಶಿಷ್ಯವೇತನಕ್ಕೆ ಅರ್ಜಿ ಕರೆದಿದ್ದು 39 ಸಂಶೋಧಕರು ಅರ್ಜಿ ಸಲ್ಲಿಸಿದ್ದಾರೆ. ಆದರೆ, ವಿವಿ ಕೇವಲ 20 ಸಂಶೋಧಕರಿಗೆ ಮಾತ್ರ ಶಿಷ್ಯವೇತನ ನೀಡಿದೆ. ಇದರಿಂದ 19 ಸಂಶೋಧಕರು ಶಿಷ್ಯವೇತನದಿಂದ ವಂಚಿತರಾಗಿದ್ದಾರೆ. ವಿಶ್ವವಿದ್ಯಾನಿಲಯದ ನಿಯಮಾವಳಿಯಂತೆ ವರ್ಷಕ್ಕೆ 20 ಸಂಶೋಧಕರಿಗೆ ಎಂದರೂ ಎರಡು ವರ್ಷಕ್ಕೆ 40 ಸಂಶೋಧಕರಿಗೆ ಶಿಷ್ಯ ವೇತನ ನೀಡಬೇಕು. ಆದರೆ, ವಿವಿ ಸಾಮಾಜಿಕ ನ್ಯಾಯವನ್ನು ಗಾಳಿಗೆ ತೂರುತ್ತಿದೆ ಎಂದು ಪ್ರತಿಭಟನಾಕಾರರು ಆಪಾದಿಸಿದರು.

ಅರ್ಜಿ ಸಲ್ಲಿಸಿದ ಎಲ್ಲಾ ಎಸ್‌ಸಿ, ಎಸ್‌ಟಿ ಸಂಶೋಧಕರು ಮೂಲತಃ ಗ್ರಾಮೀಣ ಭಾಗದವರಾಗಿದ್ದು, ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಇದರಿಂದಾಗಿ ಪೂರ್ಣ ಪ್ರಮಾಣದಲ್ಲಿ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಅರ್ಜಿ ಸಲ್ಲಿಸಿದ 39 ಸಂಶೋಧನಾ ವಿದ್ಯಾರ್ಥಿಗಳಿಗೂ ಶಿಷ್ಯವೇತನ ನೀಡಿ ಗುಣಮಟ್ಟದ ಸಂಶೋಧನೆಗೆ ಅನುವು ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಶೋಧನಾ ವಿದ್ಯಾರ್ಥಿಗಳಾದ ಲಿಂಗರಾಜ್.ಎಲ್, ಪ್ರದೀಪ್ ಮುಮ್ಮಡಿ, ಶರತ್ ಬಂಡಳ್ಳಿ, ಪ್ರಮೋದ್, ಯೋಗೇಶ್, ಕಿರಣ್ ಕುಮಾರ್, ಹರೀಶ್, ಚೇತನ್, ಶಂಕರ್, ಸುಬ್ರಹ್ಮಣ್ಯ ಮತ್ತಿತರರು ಪಾಲ್ಗೊಂಡಿದ್ದರು.

ಕಾದಾಟದಲ್ಲಿ ಗಂಡು ಹುಲಿ ಸಾವು



ಬಂಡೀಪುರದ ಮದ್ದೂರು ವಲಯದಲ್ಲಿ ಕಾದಾಟದಿಂದ ಮೃತಪಟ್ಟ ಹುಲಿ ಕಳೇಬರವನ್ನು ಮರಣೋತ್ತರ ಪರೀಕ್ಷೆಗೂ ಮುನ್ನ ಅಧಿಕಾರಿಗಳು ಪರಿಶೀಲನೆ ನಡೆಸಿದರು.


ಬಂಡೀಪುರ, ಫೆ.1(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ವಲಯದ ಸೀಗನಬೆಟ್ಟ ಅರಣ್ಯ ಪ್ರದೇಶದಲ್ಲಿ ನಡೆದ ಕಾದಾಟದಲ್ಲಿ ಹುಲಿಯೊಂದು ಸಾವನ್ನಪ್ಪಿದೆ.

ಮದ್ದೂರು ವಲಯದ ಗಸ್ತು ಪ್ರದೇಶದ ವ್ಯಾಪ್ತಿಯ ಸೀಗನಬೆಟ್ಟ ಸರ್ಕಲ್‌ನಲ್ಲಿ 3ರಿಂದ 4 ವರ್ಷದ ಗಂಡು ಹುಲಿಯ ಕಳೇಬರ ಪತ್ತೆಯಾಗಿದ್ದು, ಅದನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಮತ್ತೊಂದು ಹುಲಿಯೊಂದಿಗೆ ಕಾದಾಟ ನಡೆಸಿ ಮೃತಪಟ್ಟಿರುವುದು ಖಚಿತವಾಗಿದೆ. ಕೂಡಲೇ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ. ಪಿ.ರಮೇಶ್ ಕುಮಾರ್, ಎಸಿಎಫ್ ಜಿ.ರವೀಂದ್ರ, ಮದ್ದೂರು ವಲಯದ ಆರ್‌ಎಫ್‌ಓ ಬಿ.ಎಂ.ಮಲ್ಲೇಶ್, ಪಶುವೈದ್ಯ ಡಾ. ಮಿರ್ಜಾ ವಾಸಿಂ ಭೇಟಿ ನೀಡಿ ಪರಿಶೀಲಿಸಿದರು.

ಬಳಿಕ ನಿಯಮಾನುಸಾರ ಎನ್‌ಟಿಸಿಎ ಪ್ರತಿನಿಧಿ ಕೃತಿಕಾ ಆಲನಹಳ್ಳಿ, ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ ರಘುರಾಂ, ಡಿಆರ್‌ಎಫ್‌ಓ ರವಿ ಸಂಗೂರ್, ಗಸ್ತು ವನಪಾಲಕರಾದ ಸಂಜಯ್ ಮತ್ತು ನವೀನ್ ಅವರ ಸಮ್ಮುಖದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಮರಣೋತ್ತರ ಪರೀಕ್ಷೆ ವೇಳೆ ಹುಲಿಯ ಹೊಟ್ಟೆಯಲ್ಲಿ ಮುಳ್ಳುಹಂದಿಯ ಮುಳ್ಳುಗಳು ಚುಚ್ಚಿಕೊಂಡಿರುವುದು ಪತ್ತೆಯಾಗಿದೆ. ಮತ್ತೊಂದು ಹುಲಿಯೊಂದಿಗೆ ಕಾದಾಟ ನಡೆಸಿ ಗಾಯಗೊಂಡ ಹುಲಿ ಹಸಿವಿನಿಂದ ಬಳಲಿ ಕಾಡುಹಂದಿಯನ್ನು ಬೇಟೆಯಾಡಲು ಹೋಗಿ ಮತ್ತೊಂದು ಗಾಯ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ಕರ್ನಾಟಕದ ವಾದ ಪುರಸ್ಕರಿಸಿದ CWMA; ತಮಿಳುನಾಡಿಗೆ ಸದ್ಯಕ್ಕೆ ನೀರು ಬಿಡುಗಡೆ ಇಲ್ಲ!

ಬೆಂಗಳೂರು: ರಾಜ್ಯದ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕಡಿಮೆ ಇರುವ ಹಿನ್ನೆಲೆಯಲ್ಲಿ ತಮಿಳುನಾಡಿಗೆ ಕಾವೇರಿ ನೀರು ಹರಿಸಲು ಸಾಧ್ಯವಿಲ್ಲ ಎಂಬ ಕರ್ನಾಟಕದ ಮನವಿಯನ್ನು ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ (CWMA) ಪುರಸ್ಕರಿಸಿದೆ.



ಎರಡೂ ರಾಜ್ಯಗಳಲ್ಲಿನ ಜಲಾಶಯಗಳಲ್ಲಿನ ಹಾಲಿ ಸಂಗ್ರಹಣೆ (live storage) ಯನ್ನು ಪರಿಗಣಿಸಿದ ಸಿಡಬ್ಲ್ಯುಎಂಎ–ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ, ಕರ್ನಾಟಕದಿಂದ ನೀರು (Cauvery Dispute) ಬಿಡುಗಡೆಗೆ ಯಾವುದೇ ನಿರ್ದೇಶನ ನೀಡಿಲ್ಲ. ದೆಹಲಿಯಲ್ಲಿ ಗುರುವಾರ ನಡೆದ ಸಿಡಬ್ಲ್ಯುಎಂಎ ಸಭೆಯಲ್ಲಿ ಕರ್ನಾಟಕ ಅಧಿಕಾರಿಗಳು, ರಾಜ್ಯದ ಜಲಾಶಯಗಳ ಸದ್ಯದ ಸ್ಥಿತಿಯನ್ನು ಪ್ರಾಧಿಕಾರದ ಗಮನಕ್ಕೆ ತಂದಿದ್ದಾರೆ.

ನೀರು ಬಿಡುಗಡೆಗೆ ತಮಿಳುನಾಡು ಒತ್ತಾಯ: 2024ರ ಮೇ ಅಂತ್ಯದವರೆಗೆ 18 ಟಿಎಂಸಿ ನೀರು (7.61 ಟಿಎಂಸಿ ಬಾಕಿ ಸೇರಿದಂತೆ) ಬಿಡುಗಡೆ ಮಾಡುವಂತೆ ತಮಿಳುನಾಡು ಒತ್ತಾಯಿಸಿತ್ತು. ಆದರೆ ನೀರಾವರಿ ಅವಧಿಯು ಜನವರಿ 31ಕ್ಕೆ ಕೊನೆಗೊಂಡಿರುವ ಅಂಶವನ್ನು ಮತ್ತು ಎರಡೂ ರಾಜ್ಯಗಳಲ್ಲಿನ ಜಲಾಶಯಗಳಲ್ಲಿನ ಹಾಲಿ ಸಂಗ್ರಹಣೆಯನ್ನು ಪರಿಗಣಿಸಿದ CWMA, ಕರ್ನಾಟಕದಿಂದ ನೀರು ಬಿಡುಗಡೆಗೆ ಯಾವುದೇ ನಿರ್ದೇಶನ ನೀಡಿಲ್ಲ.

ಜನವರಿ 18ರಂದು ನಡೆದಿದ್ದ ಸಿಡಬ್ಲ್ಯುಆರ್‌ಸಿಯ 92ನೇ ಸಭೆಯಲ್ಲಿ ಜನವರಿಯಲ್ಲಿ 1182 ಕ್ಯೂಸೆಕ್ ಹಾಗೂ ಫೆಬ್ರವರಿ ತಿಂಗಳಲ್ಲಿ 998 ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಬಿಡಲು ಕರ್ನಾಟಕಕ್ಕೆ ಕಾವೇರಿ ನೀರು ನಿಯಂತ್ರಣ ಸಮಿತಿ(CWRC) ಸೂಚಿಸಿತ್ತು.

ಸಮಿತಿ ಸದಸ್ಯರ ನಾಮನಿರ್ದೇಶನಕ್ಕೆ ಅರ್ಜಿ ಆಹ್ವಾನ

ಮೈಸೂರು.ಫೆ.1– ಆಟಿಸಂ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಹಾಗೂ ಬಹುವಿಧ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳ ಕ್ಷೇಮಾಭಿವೃದ್ಧಿಗಾಗಿ ಭಾರತ ಸರ್ಕಾರದ ನ್ಯಾಷನಲ್ ಟ್ರಸ್ಟ್ ಆಕ್ಟ್ 1999 ರಡಿಯಲ್ಲಿ ನೋಂದಣಿಯಾಗಿರುವ ವ್ಯಕ್ತಿ, ಸಂಸ್ಥೆಗಳಿಂದ ಜಿಲ್ಲಾ ಸ್ಥಳೀಯ ಮಟ್ಟದ ಸಮಿತಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವ್ಯಕ್ತಿ, ಸಂಸ್ಥೆಗಳು ಫೆ.12 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯ ಜಿಲ್ಲಾ ಕಚೇರಿ ಅಥವಾ ದೂ.ಸಂ. 0821–2490333 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಡಾನೆ ಮುಂದೆ ಕೀಟಲೆ: ಕೂದಲೆಳೆ ಅಂತರದಲ್ಲಿ ಪಾರಾದ ಇಬ್ಬರು

● ಸಾಮಾಜಿಕ ಜಾಲತಾಣಗಳಲ್ಲಿ 20 ಸೆಕೆಂಡ್‌ನ ವಿಡಿಯೋ ವೈರಲ್ ● ನಿರ್ಬಂಧಿತ ಪ್ರದೇಶದಲ್ಲಿ ಕಾರಿನಿಂದಿಳಿದು ಪೇಚಿಗೆ ಸಿಲುಕಿದ ಎಡಬಿಡಂಗಿಗಳು
● ಬಂಡೀಪುರ ಅರಣ್ಯದಲ್ಲಿ ಘಟನೆ ● ಸಿಸಿ ಕ್ಯಾಮೆರಾ ಪರಿಶೀಲನೆ ● ಕಿಡಿಗೇಡಿಗಳಿಗೆ ಕಠಿಣ ಶಿಕ್ಷೆ ನೀಡುವಂತೆ ವನ್ಯಪ್ರೇಮಿಗಳ ಆಗ್ರಹ

ಮೈಸೂರು, ಫೆ.1(ಎಂಟಿವೈ)– ಕಾಡಾನೆ ಮುಂದೆ ಸೆಲ್ಫಿ ತೆಗೆದುಕೊಳ್ಳಲು ಹೋದ ವ್ಯಕ್ತಿಗಳಿಬ್ಬರು ಕೂದಲೆಳೆ ಅಂತರದಲ್ಲಿ ಪಾರಾಗಿರುವ ಘಟನೆ ಗುರುವಾರ ಸಂಜೆ ನಡೆದಿದ್ದು, ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ವನ್ಯಪ್ರೇಮಿಗಳು ಆಗ್ರಹಿಸಿದ್ದಾರೆ.

ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ಮುಖ್ಯ ರಸ್ತೆಯ ಬದಿ ಕಾಡಾನೆಯೊಂದು ಹುಲ್ಲು ತಿನ್ನುತ್ತಿದ್ದ ವೇಳೆ ಕೇರಳ ನೋಂದಣಿ ಸಂಖ್ಯೆಯುಳ್ಳ ಕೆಂಪು ಬಣ್ಣದ ಕಾರಿನಲ್ಲಿ ಬಂದ ನಾಲ್ವರು ಆನೆ ಸಮೀಪ ಕಾರನ್ನು ನಿಲ್ಲಿಸಿದ್ದಾರೆ. ಅಲ್ಲದೆ ಇಬ್ಬರು ಕಾರಿನಿಂದ ಕೆಳಗಿಳಿದು ಕಾಡಾನೆ ಮುಂದೆ ಸೆಲ್ಫಿ ತೆಗೆದುಕೊಳ್ಳಲು ಮುಂದಾಗಿದ್ದಾರೆ. ಈ ವೇಳೆ ಏಕಾಏಕಿ ರಸ್ತೆಗೆ ನುಗ್ಗಿದ ಹೆಣ್ಣಾನೆ ಸೆಲ್ಫಿಗಾಗಿ ಕಾರಿನಿಂದ ಕೆಳಗಿಳಿದಿದ್ದವರನ್ನು ಅಟ್ಟಾಡಿಸಿದೆ.



ಆನೆಯ ವೇಗದ ಓಟಕ್ಕೆ ಗಾಬರಿಯಾದ ಕಿಡಿಗೇಡಿಗಳಿಬ್ಬರು ಸುಮಾರು 500 ಮೀಟರ್‌ನಷ್ಟು ಓಡಿದ್ದಾರೆ. ಈ ವೇಳೆ ದಡೂತಿ ವ್ಯಕ್ತಿ ಎಡವಿ ನೆಲಕ್ಕೆ ಬಿದ್ದಿದ್ದಾನೆ. ಆತನ ಬಳಿ ಬಂದ ಆನೆ ಮುಂಗಾಲು ಹಾಗೂ ಹಿಂಗಾಲಿನಲ್ಲಿ ಎರಡು ಬಾರಿ ಒದೆಯುವ ಪ್ರಯತ್ನ ಮಾಡಿದೆ. ಆದರೆ ಅದೃಷ್ಟವಶಾತ್ ಆತ ಆನೆ ಕಾಲಿಗೆ ಸಿಕ್ಕದೇ ತೆವಳಿ ಕೊಂಡು ಹಳ್ಳದಲ್ಲಿ ಆಶ್ರಯ ಪಡೆದು ಬಚಾವಾಗಿದ್ದಾನೆ.

ಆನೆ ದಾಳಿಯ ದೃಶ್ಯವನ್ನು ಮುಂದೆ ಇದ್ದ ಕಾರಿನ ಪ್ರಯಾಣಿಕರು ಚೀರಾಡುತ್ತಲೇ ಸೆರೆ ಹಿಡಿದಿದ್ದಾರೆ. ಕೇವಲ 20 ಸೆಕೆಂಡ್‌ನ ಆ ವಿಡಿಯೋ ಕಿಡಿಗೇಡಿಗಳು ಬದುಕಿ ಬಂದ ರೋಚಕ ದೃಶ್ಯವನ್ನು ತೆರೆದಿಟ್ಟಿದೆ. ಈ ಘಟನೆ ಬಂಡಿಪುರ ಅರಣ್ಯದಲ್ಲಿ ನಡೆದಿದೆ ಎಂಬುದು ಖಚಿತವಾಗಿದೆ.

ಈ ಸಂಬಂಧ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್ ಪ್ರತಿಕ್ರಿಯಿಸಿದ್ದು, ಬಂಡೀಪುರ ಸೇರಿದಂತೆ ಯಾವುದೇ ಅರಣ್ಯ ಪ್ರದೇಶದಲ್ಲಿ ವಾಹನದಿಂದ ಕೆಳಗಿಳಿಯದಂತೆ ಅರಣ್ಯ ಇಲಾಖೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದೆ. ಬಂಡೀಪುರದ ಮೇಲುಕಾಮನಹಳ್ಳಿ ಗೇಟ್, ಕೆಕ್ಕನಹಳ್ಳ (ಮದುಮಲೈ ಬಾರ್ಡರ್), ಮದ್ದೂರು, ಮೂಲೆಹೊಳೆ ಚೆಕ್‌ಪೋಸ್ಟ್‌ನಲ್ಲಿ ಎಲ್ಲಾ ವಾಹನಗಳ ಸವಾರರಿಗೂ ಜಾಗೃತಿ ಮೂಡಿಸಲಾಗುತ್ತದೆ. ಎಲ್ಲಿಯೂ ವಾಹನ ನಿಲ್ಲಿಸದಂತೆ, ತ್ಯಾಜ್ಯ ಎಸೆಯದಂತೆ, ಪ್ರಾಣಿಗಳು ರಸ್ತೆ ದಾಟುವಾಗ ಅಂತರ ಕಾಯ್ದುಕೊಳ್ಳುವುದೂ ಸೇರಿದಂತೆ ಕಡ್ಡಾಯವಾಗಿ ಅನುಸರಿಸಬೇಕಾದ ನಿಯಮಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ. ಆದರೂ ನಿಯಮ ಉಲ್ಲಂಘಿಸು ವವರಿಗೆ ದಂಡ ಹಾಕಲು ಗಸ್ತು ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದ ಅವರು, ಈ ಘಟನೆಯಲ್ಲಿ ಭಾಗಿಯಾದವರ ಪತ್ತೆಗಾಗಿ ಅರಣ್ಯದ ಎರಡೂ ಭಾಗದಲ್ಲಿರುವ ಸಿಸಿ ಕ್ಯಾಮೆರಾದ ದೃಶ್ಯಾವಳಿಗಳನ್ನು ಪರಿಶೀಲಿಸುವಂತೆ ನಮ್ಮ ಸಿಬ್ಬಂದಿಗೆ ಸೂಚನೆ ನೀಡಲಾಗಿದ್ದು, ಕಾರಿನ ನೋಂದಣಿ ಸಂಖ್ಯೆ ಆಧರಿಸಿ ಆರೋಪಿಗಳನ್ನು ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಅಲೆಮಾರಿ ಈ ಬದುಕು
ಫೆ.16ಕ್ಕೆ ತೆರೆಗೆ



ಮಾನವನ ಬದುಕೇ ಒಂಥರಾ ಅಲೆಮಾರಿ ಜೀವನ ಎಂಬ ಕಾನ್ಸೆಪ್ಟ್ ಇಟ್ಟುಕೊಂಡು ತಯಾರಾದ ಚಿತ್ರ ಅಲೆಮಾರಿ ಈ ಬದುಕು. ದಿವ್ಯಕುಮಾರ್ ಅವರ ನಿರ್ಮಾಣ ಹಾಗೂ ಸಿದ್ದು ಸಿ.ಕಟ್ಟಿಮನಿ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರವು ಫೆ.16ರಂದು ರಾಜ್ಯಾದ್ಯಂತ ತೆರೆಗೆ ಬರುತ್ತಿದೆ. ಬಿಡುಗಡೆಗೂ ಮುನ್ನ ಇತ್ತೀಚೆಗೆ ಈ ಚಿತ್ರದ ಟ್ರೇಲರ್‌ನ್ನು ರಿಲೀಸ್ ಮಾಡಲಾಯಿತು. ಚಿತ್ರದ ಹಾಡುಗಳನ್ನು ಸಿರಿ ಮ್ಯೂಸಿಕ್ ಹೊರತಂದಿದೆ. ಈ ಸಂದರ್ಭದಲ್ಲಿ ಫಿಲಂ ಚೇಂಬರ್ ಅಧ್ಯಕ್ಷ ಎನ್.ಎಂ.ಸುರೇಶ್, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್, ನಟ ಚೇತನ್ ಹಾಗೂ ಪ್ರಕೃತಿ ಪ್ರಸನ್ನ ಮುಖ್ಯ ಅತಿಥಿಗಳಾಗಿ ಆಗಮಿಸಿ ಚಿತ್ರತಂಡಕ್ಕೆ ಶುಭ ಕೋರಿದರು.

ಈ ಸಂದರ್ಭದಲ್ಲಿ ನಿರ್ದೇಶಕ ಸಿದ್ದು ಸಿ.ಕಟ್ಟಿಮನಿ ಮಾತನಾಡುತ್ತಾ, ನಮ್ಮ ಚಿತ್ರತಂಡದ ಬಹುತೇಕ ಸದಸ್ಯರು "ಅಲೆಮಾರಿ"ಗಳು. ಜೀವನದಲ್ಲಿ ಒಂದು ಹಂತ ತಲುಪಬೇಕೆಂದು ಅಲೆದು, ಅಲೆದು ಇಂದಿಲ್ಲಿ ಬಂದು ಕುಳಿತಿದ್ದೇವೆ. ಅಲೆಮಾರಿಗಳ ಕುರಿತಾಗಿಯೇ ನಮ್ಮ ಚಿತ್ರದ ಕಥೆಯಿದೆ. ಈ ಹಿಂದೆ ನಾನು "ಪ್ರೇಮಪೂಜ್ಯಂ" ಚಿತ್ರದಲ್ಲಿ ಸಹಾಯಕ ನಿರ್ದೇಶಕನಾಗಿದ್ದೆ. ನನ್ನ ಕಥೆಯನ್ನು ಇಷ್ಟಪಟ್ಟು ನಿರ್ಮಾಪಕರು ನನಗೆ ಅವಕಾಶ ಕೊಟ್ಟಿದ್ದಾರೆ, ನನ್ನ ನಿರ್ದೇಶನದ ಮೊದಲ ಚಿತ್ರವಿದು. ಕಥೆ, ಚಿತ್ರಕಥೆ, ಸಂಭಾಷಣೆ, ಗೀತರಚನೆಯ ಜೊತೆಗೆ ಆಕ್ಷನ್ ಕಟ್ ಹೇಳಿದ್ದೇನೆ ಎಂದರು. ನಿರ್ದೇಶಕರು ಹೇಳಿದ ಕಥೆ ನನಗೆ ತುಂಬಾ ಇಷ್ಟವಾಯಿತು. ಹಾಗಾಗಿ ನಿರ್ಮಾಣಕ್ಕೆ ಮುಂದಾದೆ. ಖಂಡಿತವಾಗಿ ಈ ಚಿತ್ರ ಎಲ್ಲರ ಮನಸ್ಸಿಗೂ ಹತ್ತಿರವಾಗುತ್ತದೆ ಎಂದು ನಿರ್ಮಾಪಕ ದಿವ್ಯಕುಮಾರ್ ಹೇಳಿದರು. ಚಿತ್ರದಲ್ಲಿ ಐದು ಹಾಡುಗಳಿವೆ ಎಂದ ಸಂಗೀತ ನಿರ್ದೇಶಕ ತ್ಯಾಗರಾಜ ಎಂ.ಎಸ್, ಹಾಡುಗಳ ಹಾಗೂ ಗಾಯಕರ ಬಗ್ಗೆ ಪರಿಚಯಿಸಿ ಸಿರಿಮ್ಯೂಸಿಕ್ ಮೂಲಕ ಈ ಚಿತ್ರದ ಹಾಡುಗಳು ಬಿಡುಗಡೆಯಾಗುತ್ತಿದೆ ಎಂದು ತಿಳಿಸಿದರು.

ಈ ಚಿತ್ರದ ಹಾಡುಗಳನ್ನು ನೋಡಿದಾಗ ತುಂಬಾ ಇಷ್ಟವಾಯಿತು. ಬೇರೆ ಬೇರೆ ಕಡೆ ಹರಿಯುವ ನದಿಗಳು ಒಂದೇ ಸಮುದ್ರವನ್ನು ಸೇರಿದಂತೆ. ಈ ತಂಡದವರು ಬೇರೆ ಬೇರೆ ಕಡೆಯಿಂದ ಬಂದು ಈ ಚಿತ್ರಕ್ಕಾಗಿ ಒಂದಾಗಿ, ಒಂದೊಳ್ಳೇ ಸಿನಿಮಾ ಕಟ್ಟಿಕೊಟ್ಟಿದ್ದಾರೆ ಎಂದು ಸಿರಿಮ್ಯೂಸಿಕ್‌ನ ಸುರೇಶ್ ಚಿಕ್ಕಣ್ಣ ಹೇಳಿದರು. ನಾನು ಮೂಲತಃ ರಂಗಭೂಮಿ ಕಲಾವಿದ. ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದೇನೆ ಜೊತೆಗೆ ಸಂಕಲನಕಾರನಾಗೂ ಕಾರ್ಯನಿರ್ವಹಿಸಿದ್ದೇನೆ ಎಂದು ನಟ ಶ್ರೀಧರ್ ಅಟವಿ ತಿಳಿಸಿದರು. ಉಳಿದಂತೆ ನಟರಾದ ಸಂದೀಪ್, ರಾಘವೇಂದ್ರ ಸಿ. ಕಟ್ಟಿಮನಿ, ನಟಿಯರಾದ ಸಹನ ಹಾಗೂ ನೀಲಾಂಬಿಕ ಮುಂತಾದವರು "ಅಲೆಮಾರಿ ಈ ಬದುಕು" ಚಿತ್ರದ ಕುರಿತಂತೆ ಮಾತನಾಡಿದರು.

ಜಸ್ಟ್‌ಪಾಸ್
ಟ್ರೈಲರ್ ಬಿಡುಗಡೆ ತರ್ಲೆ ಮಾಡೋ ಹುಡುಗರ ಕಥೆ



'ಜಸ್ಟ್‌ಪಾಸ್' ಚಿತ್ರದಲ್ಲಿ ಶ್ರೀ ಮಹದೇವ್ ಹಾಗೂ ಪ್ರಣತಿ

ಇದೇ ತಿಂಗಳು ರಾಜ್ಯಾದ್ಯಂತ ತೆರೆಕಾಣಲಿರುವ ಜಸ್ಟ್‌ಪಾಸ್ ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು. ರಾಯ್ಸ್ ಎಂಟರ್‌ಟೈನ್ಮೆಂಟ್ ಅಡಿ ಕೆ.ವಿ.ಶಶಿಧರ್ ಅದ್ದೂರಿಯಾಗಿ ನಿರ್ಮಿಸಿರುವ, ದೊಡ್ಡಹಟ್ಟಿ ಬೋರೇಗೌಡ ಖ್ಯಾತಿಯ ಕೆ.ಎಂ.ರಘು ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರದಲ್ಲಿ ಶ್ರೀ ಮಹದೇವ್ ಹಾಗೂ ಪ್ರಣತಿ ನಾಯಕ-ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಅಲ್ಲದೆ ಹಿರಿಯನಟ ರಂಗಾಯಣ ರಘು ಜಸ್ಟ್‌ಪಾಸ್ ಹುಡುಗರ ಕಾಲೇಜಿನ ಪ್ರಾಂಶುಪಾಲರ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ನಟ ದರ್ಶನ್ ಅವರು ಈ ಚಿತ್ರದ ಟ್ರೈಲರನ್ನು ಬಿಡುಗಡೆ ಮಾಡಬೇಕಿತ್ತು. ಕಾರಣಾಂತರದಿಂದ ಅವರು ಸಮಾರಂಭಕ್ಕೆ ಬಂದಿರಲಿಲ್ಲ. ನಿರ್ಮಾಪಕರ ತಾಯಿ ಶ್ರೀಮತಿ ಪ್ರೇಮ ಅವರು ಟ್ರೈಲರನ್ನು ಬಿಡುಗಡೆ ಮಾಡಿದರು. ಈಗಾಗಲೇ ಟ್ರೈಲರ್ ಅತ್ಯಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದ್ದು, ನೋಡಿದವರೆಲ್ಲ ಇದು ಜಸ್ಟ್ ಪಾಸ್ ಚಿತ್ರದ ಫಸ್ಟ್‌ಕ್ಲಾಸ್ ಟ್ರೇಲರ್ ಎನ್ನುತ್ತಿದ್ದಾರೆ. ಇದೇ ಸಮಾರಂಭದಲ್ಲಿ ಚಿತ್ರ ನೋಡಿದ ಕೂಡಲೇ ಎಂಬ ಸುಂದರ ಹಾಡನ್ನು ಪ್ರದರ್ಶಿಸಲಾಯಿತು.

ಟ್ರೇಲರ್ ಬಿಡುಗಡೆಯ ನಂತರ ಮಾತನಾಡಿದ ನಿರ್ದೇಶಕ ರಘು, ನಮ್ಮ ಚಿತ್ರ ಇಷ್ಟು ಅದ್ದೂರಿಯಾಗಿ ಮೂಡಿಬರಲು ನಿರ್ಮಾಪಕ ಕೆ.ವಿ. ಶಶಿಧರ್ ಅವರೇ ಕಾರಣ. ಚಿತ್ರೀಕರಣದ ಸಮಯದಲ್ಲಿ ಯಾವುದೇ ಕೊರತೆಯಾಗದ ಹಾಗೆ ನೋಡಿಕೊಂಡು ಸಿನಿಮಾ ಈ ಮಟ್ಟಕ್ಕೆ ಬರಲು ಕಾರಣರಾಗಿದ್ದಾರೆ. ಕಲಾವಿದರು ಹಾಗೂ ತಂತ್ರಜ್ಞರಿಗೂ ನಾನು ಈ ಸಮಯದಲ್ಲಿ ಧನ್ಯವಾದ ತಿಳಿಸುತ್ತೇನೆ ಎಂದರು.

ಟ್ರೈಲರ್ ನೋಡಿದ ಮೇಲೆ ಬಹಳ ಖುಷಿಯಾಯಿತು. ಚಿತ್ರ ಕೂಡ ಅಷ್ಟೇ ಚೆನ್ನಾಗಿ ಮೂಡಿಬಂದಿದೆ.ಫೆ. 9ರಂದು ಜಸ್ಟ್‌ಪಾಸ್ ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ನೋಡಿ. ಪ್ರೋತ್ಸಾಹ ನೀಡಿ ಎಂದು ನಿರ್ಮಾಪಕ ಶಶಿಧರ್ ಅವರು ಹೇಳಿದರು. ಈ ಚಿತ್ರದ ಹಾಡುಗಳು ಹಾಗೂ ಟ್ರೈಲರ್ ತುಂಬಾ ಚೆನ್ನಾಗಿ ಬಂದಿದೆ. ಚಿತ್ರ ಇನ್ನೂ ಚೆನ್ನಾಗಿದೆ. ನಮ್ಮ ಚಿತ್ರಕ್ಕೆ ನಿಮ್ಮ ಬೆಂಬಲವಿರಲಿ ಎಂದು ನಾಯಕ ಶ್ರೀ ಮಹದೇವ್ ಹೇಳಿದರು. ನಾಯಕಿ ಪ್ರಣತಿ ಮಾತನಾಡುತ್ತಾ, ನಾನು ಕೂಡ ಈ ಚಿತ್ರದಲ್ಲಿ ಜಸ್ಟ್‌ಪಾಸ್ ವಿದ್ಯಾರ್ಥಿನಿಯಾಗೇ ಕಾಣಿಸಿಕೊಂಡಿದ್ದೇನೆ ಎಂದು ತಮ್ಮ ಪಾತ್ರದ ಬಗ್ಗೆ ಹೇಳಿಕೊಂಡರು. ಸಂಗೀತ ನಿರ್ದೇಶಕ ಹರ್ಷವರ್ಧನ್ ರಾಜ್, ಛಾಯಾಗ್ರಾಹಕ ಸುಜಯ್ ಕುಮಾರ್, ಹಾಡು ಬರೆದಿರುವ ಪ್ರಮೋದ್ ಮರವಂತೆ ಹಾಗೂ ಚಿತ್ರದಲ್ಲಿ ಅಭಿನಯಿಸಿರುವ ಬಹುತೇಕ ಕಲಾವಿದರು ಜಸ್ಟ್‌ಪಾಸ್ ಚಿತ್ರದ ಕುರಿತಂತೆ ಮಾತನಾಡಿದರು.

ವಿಷ್ಯುಯಲ್ ಟ್ರೈಲರ್‌ನಲ್ಲೇ ಕುತೂಹಲ ಮೂಡಿಸಿದ 'ಕ್ರೀಂ'

ಹಿರಿಯ ಪತ್ರಕರ್ತ ಅಗ್ನಿ ಶ್ರೀಧರ್ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿರುವ ಕ್ರೀಂ ಚಿತ್ರದ ಟ್ರೈಲರ್ ಇದೀಗ ಬಿಡುಗಡೆಯಾಗಿದೆ. ಸಂಯುಕ್ತ ಹೆಗಡೆ ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಚಿತ್ರಕ್ಕೆ ಅಭಿಷೇಕ್ ಬಸಂತ್ ಆಕ್ಷನ್ ಕಟ್ ಹೇಳಿದ್ದಾರೆ. ಡಿ.ಕೆ.ದೇವೇಂದ್ರ ಅವರು ನಿರ್ಮಿಸಿದ್ದಾರೆ,



ಈ ಸಂದರ್ಭದಲ್ಲಿ ಮಾತನಾಡಿದ ಅಗ್ನಿ ಶ್ರೀಧರ್, ಎಲ್ಲಾ ಊರುಗಳಲ್ಲಿ, ಎಲ್ಲಾ ರಾಜ್ಯಗಳಲ್ಲಿ, ಎಲ್ಲಾ ಭಾಷೆಗಳಲ್ಲಿ ಯಾರಿಗೂ ಕಾಣದ ಗರ್ಭ ಅಂತ ಇರುತ್ತದೆ. ಅಲ್ಲಿ ಏನೆಲ್ಲಾ ನಡೆಯುತ್ತದೆ. ಬೆಂಗಳೂರಿನಲ್ಲೇ ನನಗೆ ಗೊತ್ತಿರುವ ಒಂದಷ್ಟು ಸಂಗತಿಗಳನ್ನಿಟ್ಟುಕೊಂಡು ಹತ್ತಾರು ವರ್ಷಗಳಿಂದ ಯೋಚನೆ ಮಾಡುತ್ತಿದ್ದೆ. ಆದರೆ ಅದನ್ನು ಸಿನಿಮಾ ಮಾಡಲು ಆಗಿರಲಿಲ್ಲ. ದೇವೇಂದ್ರ ತಾನು ಸಿನಿಮಾ ಮಾಡಲೇಬೇಕೆಂದು ನನ್ನ ಬಳಿ ಬಂದಾಗ ಈ ಕಥೆ ಹೇಳಿದೆ. ಇಂಥ ಸಿನಿಮಾ ಮಾಡುವುದಕ್ಕೆ ಧೈರ್ಯವಿರಬೇಕು. ಅದನ್ನು ದೇವೇಂದ್ರ ಮಾಡಿದ್ದಾರೆ. ಭಾರತದಲ್ಲಿ ಪ್ರತಿವರ್ಷ ಎರಡೂವರೆ ಸಾವಿರ ಮಹಿಳೆಯರು ಒಂದಲ್ಲಾ ಒಂದು ಕಾರಣದಿಂದ ಬಲಿಯಾಗುತ್ತಿದ್ದಾರೆ. ಅದಕ್ಕೆ ಕಾರಣವೇನು ಎಂಬುದನ್ನು ಈ ಚಿತ್ರ ಹೇಳುತ್ತದೆ. ನಟಿ ಸಂಯುಕ್ತ ಹೆಗಡೆ ಅವರು ಈ ಚಿತ್ರಕ್ಕಾಗಿ ತನ್ನ ಜೀವವನ್ನೇ ಕೊಟ್ಟುಬಿಟ್ಟಿದ್ದಾರೆ. ಅಂದರೆ ಬಹಳಷ್ಟು ಶ್ರಮ ಹಾಕಿದ್ದಾರೆ. ಈ ಚಿತ್ರದ ನಿರ್ದೇಶಕ ಅಭಿಷೇಕ್ ಬಸಂತ್ ನನ್ನ ತಮ್ಮನ ಮಗ. ಚಿತ್ರವನ್ನು ಚೆನ್ನಾಗಿ ತೆಗೆದುಕೊಂಡು ಹೋಗಿದ್ದಾನೆ ಎಂದು ಹೇಳಿದರು.

ನಂತರ ಮಾತನಾಡಿದ ಅಭಿಷೇಕ್ ಬಸಂತ್, ಚಿತ್ರತಂಡದ ಸಹಕಾರದಿಂದ ಇಪ್ಪತ್ತೆಂಟು ದಿನಗಳಲ್ಲೇ ಚಿತ್ರೀಕರಣ ಮುಗಿದಿದೆ. ಇಂದು ವಿಷುಯಲ್ ಟ್ರೈಲರ್‌ನ್ನು ಬಿಡುಗಡೆ ಮಾಡಿದ್ದೇವೆ. ಸದ್ಯದಲ್ಲೇ ಚಿತ್ರವೂ ಸಹ ಪ್ರೇಕ್ಷಕರ ಮುಂದೆ ಬರಲಿದೆ ಎಂದರು. ಸಂಯುಕ್ತ ಹೆಗಡೆ ಮಾತನಾಡುತ್ತಾ, ನಾನು ಈವರೆಗೂ ಮಾಡಿರದಂಥ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಈ ಚಿತ್ರದಲ್ಲಿ ತುಂಬಾ ರಿಸ್ಕಿ ಆಕ್ಷನ್ ಮಾಡಿದ್ದೇನೆ. ಫೈಟ್ ಮಾಡುವ ಸಂದರ್ಭದಲ್ಲಿ ನನ್ನ ಕಾಲು ಸಹ ಮುರಿದಿತ್ತು ಎಂದು ತಮ್ಮ ಅನುಭವ ಹೇಳಿಕೊಂಡರು. ನಿರ್ಮಾಪಕ ಡಿ.ಕೆ.ದೇವೇಂದ್ರ ಮಾತನಾಡುತ್ತಾ ಇಂಥ ಉತ್ತಮ ಕಥೆ ನೀಡಿರುವ ಅಗ್ನಿ ಶ್ರೀಧರ್ ಅವರಿಗೆ ಧನ್ಯವಾದ. ನನ್ನ ಇಡೀ ತಂಡ ಚಿತ್ರ ಚೆನ್ನಾಗಿ ಮೂಡಿಬರಲು ಪಟ್ಟಿರುವ ಶ್ರಮ ಅಷ್ಟಿಷ್ಟಲ್ಲ ಎಂದು ತಂಡದ ಬಗ್ಗೆ ಮೆಚ್ಚಿ ಮಾತನಾಡಿದರು. ಸಂಗೀತ ನಿರ್ದೇಶಕ ರೋಹಿತ್, ಕಲಾನಿರ್ದೇಶಕ ಶಿವಕುಮಾರ್ ಹಾಗೂ ಚಿತ್ರದಲ್ಲಿ ನಟಿಸಿರುವ ಕಲಾವಿದರೆಲ್ಲ ಚಿತ್ರದ ಕುರಿತಂತೆ ಮಾತನಾಡಿದರು. ನಿರ್ಮಾಪಕ ಕೆ.ಮಂಜು, ಸಂಜಯ್‌ಗೌಡ, ನವರಸನ್, ಶ್ರೀನಿವಾಸ್ ಹಾಗೂ ನಿರ್ದೇಶಕ ಜಡೇಶ್ ಕೆ.ಹಂಪಿ ಅತಿಥಿಗಳಾಗಿ ಆಗಮಿಸಿದ್ದರು.

'ಲೇಡಿಸ್ ಬಾರ್' ಟ್ರೈಲರ್ ಬಿಡುಗಡೆ



'ಲೇಡಿಸ್ ಬಾರ್' ಟೈಟಲ್ ಕೇಳಿದ ಯಾರಿಗಾದರೂ ಆಶ್ಚರ್ಯವಾಗುವುದು ಸಹಜ. ನಮ್ಮಲ್ಲಿ ಮಹಿಳೆಯರಿಗೆ ಅಂತ ಪ್ರತ್ಯೇಕ ಬಾರ್‌ಗಳಿಲ್ಲ, ವಿದೇಶಗಳಲ್ಲಿದೆ, ಆ ರೀತಿ ನಮ್ಮಲ್ಲೂ ಬಂದರೆ ಯಾವ ರೀತಿ ಆಗಬಹುದು ಎಂದು ಬಾರ್‌ಗೆ ಬರೋ ಒಂದಷ್ಟು ಮಹಿಳೆಯರ ಕಥೆಯ ಮೂಲಕ ಈ ಚಿತ್ರದಲ್ಲಿ ಹೇಳಲಾಗಿದೆ. ಮೂಲತಃ ಉದ್ಯಮಿಯಾದ ಟಿ.ಎಂ. ಸೋಮರಾಜು ಅವರು ಈ ಚಿತ್ರವನ್ನು ನಿರ್ಮಿಸುವುದರ ಜೊತೆಗೆ ಸಮಾಜ ಸುಧಾರಕನೊಬ್ಬನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮುತ್ತು ಅವರ ನಿರ್ದೇಶನದ ಲೇಡಿಸ್ ಬಾರ್ ಚಿತ್ರದ ಟ್ರೈಲರನ್ನು ಫಿಲಂ ಚೇಂಬರ್ ಅಧ್ಯಕ್ಷ ಎನ್.ಎಂ. ಸುರೇಶ್ ಹಾಗೂ ನಟ ಧರ್ಮ ಕೀರ್ತಿರಾಜ್ ಬಿಡುಗಡೆ ಮಾಡಿದರು.

ಎನ್.ಎಂ.ಸುರೇಶ್ ಮಾತನಾಡುತ್ತಾ, ಹೊಸಬರು ಸಿನಿಮಾ ಮಾಡಿದಾಗ ನಾವೆಲ್ಲ ಸಪೋರ್ಟ್ ಮಾಡಬೇಕು. ಟ್ರೈಲರ್ ನೋಡಿದಾಗ ಏನೋ ವಿಶೇಷತೆಯಿರುವುದು ಕಾಣುತ್ತದೆ. ಡೈರೆಕ್ಟರ್‌ಗೆ ಕಾನ್ಫಿಡೆಂಟ್ ಇದೆ. ನಿಮ್ಮ ಕೆಲಸದಲ್ಲಿ ಶ್ರದ್ಧೆ, ಪ್ರಾಮಾಣಿಕತೆ ಇದ್ದರೆ ಖಂಡಿತ ಗೆಲುವು ಸಿಗುತ್ತದೆ ಎಂದು ಹೇಳಿದರು.

ನಂತರ ಮಾತನಾಡಿದ ಧರ್ಮ ಕೀರ್ತಿರಾಜ್, ನಿರ್ದೇಶಕ ಮುತ್ತು ನಮ್ಮ ರೋನಿ ಸಿನಿಮಾಗೆ ಅಸೋಸಿಯೇಟ್ ಆಗಿದ್ದರು, ಒಂದೊಳ್ಳೇ ಮೆಸೇಜನ್ನು ಈ ಚಿತ್ರದಲ್ಲಿ ಇಟ್ಟಿದ್ದಾರೆ ಎಂದರು. ನಿರ್ದೇಶಕ ಮುತ್ತು ಮಾತನಾಡಿ, ಚಿತ್ರದಲ್ಲಿ ಅದ್ಭುತವಾದ ಕಥೆಯಿದೆ, ಅದೇ ಇಲ್ಲಿ ಹೀರೋ. ಚಿತ್ರದ ಪ್ರತಿಕ್ಷಣ ಎಂಟರ್‌ಟೈನಿಂಗ್ ಆಗಿದೆ. ಹೆಣ್ಣುಮಕ್ಕಳು ಬಾರ್‌ಗೆ ಹೋದರೆ ಏನಾಗುತ್ತದೆ ಎಂದು ಚಿತ್ರದಲ್ಲಿ ಹೇಳಿದ್ದೇವೆ ಎಂದರು. ನಂತರ ನಿರ್ಮಾಪಕ ಸೋಮರಾಜ್ ಮಾತನಾಡಿ, ನಮ್ಮ ಸಮಾಜದಲ್ಲಿ ಯಾವ ವ್ಯವಸ್ಥೆ ಇದೆ ಅನ್ನೋದನ್ನು ತೋರಿಸಿಯೇ ಮೆಸೇಜ್ ಹೇಳಬೇಕಾಗುತ್ತದೆ, ಅದನ್ನು ತೋರಿಸಿ ಸಂದೇಶ ಹೇಳಿದರೆ, ಜನರಿಗದು ಸುಲಭವಾಗಿ ಅರ್ಥವಾಗುತ್ತದೆ ಎಂದರು. ನಟ ಗಣೇಶ್‌ರಾವ್ ಕೇಸರಕರ್ ಮಾತನಾಡಿ, ಬಾರ್‌ನಿಂದಾಗುವ ಅನುಕೂಲ, ಅನಾನುಕೂಲ ಏನೆಂದು ತೋರಿಸಿದ್ದಾರೆ, ಚಿತ್ರದಲ್ಲಿ ನಾನೊಬ್ಬ ಪೊಲೀಸ್ ಆಗಿದ್ದು, ಪೊಲೀಸರಿಂದ ಹೇಗೆ ಬಾರ್‌ಗಳ ಶೋಷಣೆಯಾಗುತ್ತದೆ ಅಂತ ಚಿತ್ರದಲ್ಲಿ ತೋರಿಸಿದ್ದಾರೆ ಎಂದರು. ಲೇಡಿಸ್ ಬಾರ್ ಚಿತ್ರದಲ್ಲಿ ಬರೀ ಕುಡಿತವನ್ನಷ್ಟೇ ತೋರಿಸಿಲ್ಲ. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಪ್ರಯತ್ನ ಮಾಡಲಾಗಿದೆ. ಒಟ್ಟು 4 ಫ್ಯಾಮಿಲಿಗಳ ಜೊತೆಗೆ ಒಬ್ಬ ಗೃಹಿಣಿ ಹಾಗೂ ವೇಶ್ಯೆಯೊಬ್ಬಳ ಕಥೆಯೂ ಬರುತ್ತದೆ. ಚಿತ್ರದಲ್ಲಿ ಶೇ.40ರಿಂದ 45 ಭಾಗದ ಕಥೆ ಬಾರ್‌ನಲ್ಲೇ ನಡೆಯುತ್ತದೆ. ಹರೀಶ್‌ರಾಜ್, ಶಿವಾನಿ, ಮೀನಾಕ್ಷಿ, ಮಾಧುರಿ, ಗಣೇಶ್‌ರಾವ್, ಪ್ರೇರಣಾ, ಚೈತ್ರ ಮುಂತಾದವರು ಪ್ರಮುಖ ತಾರಾಬಳಗದಲ್ಲಿದ್ದಾರೆ.

ಸಿನಿಪದಬಂಧ-511

1		2		■	3	4			■	5
	■		■	■	■		■	■	■	
	■	■	6	■	7			8		
9						■	■		■	■
	■	■		■		■	10			
■	■	11	■	■		■	■		■	■
12				■		■	13	■	■	14
■	■		■	■	15					
16				17		■		■	■	
	■	■	■		■	■	■	18	■	
	■	19				■	20			

ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಕಚ್ಚುವ ಹುಳುಗಳು ಕಟ್ಟಿದ ಸಿಹಿ ಪಂಜರ 4
3. ವಿಷ್ಣುವರ್ಧನ್ ಹಾಡಿದ ಬೆಳಗಿನ ಹಾಡು 4
7. ಡಾ.ರಾಜ್‌ಕುಮಾರ್ ಕೋಪಗೊಂಡ ಕೇಸರಿ 6
9. ಪ್ರಭಾಕರ್-ಜಯಮಾಲಾ ಬರೆದ ನೂತನ ಚರಿತ್ರೆ 6
10. ಹತ್ತು ಅವತಾರಗಳ್ಲೊಂದರಲ್ಲಿ ರವಿಚಂದ್ರನ್ ಅಭಿನಯವಿದೆ 4
12. ಪ್ರೀತಿಯುಳ್ಳ ರಾಜ್ ಕುಮಾರ್‌ಗೆ ಎಂ.ಆರ್.ವಿಠಲ್ ನಿರ್ದೇಶಕ 4
15. ಶ್ರೀನಾಥ್ ಅಭಿನಯದಲ್ಲಿ ಸಂಧಿಸುವಿಕೆ ಸ್ವೀಟಾಗಿದೆ 6
16. " _ _ _ _ _ _ ಜಲಧಾರೆ..... " 6
19. ಲಗ್ನ, ಮದುವೆ, ವಿವಾಹಕ್ಕೆ ಹೀಗೊಂದು ಪದ 4
20. ರಾಜಣ್ಣ, ಮಾಧವಿ, ಗೀತಾ ಅಭಿನಯದ ಚಿತ್ರ 4

ಮೇಲಿನಿಂದ ಕೆಳಕ್ಕೆ

1. ರಾಮ್ ಕುಮಾರ್ ಅಭಿನಯದಲ್ಲಿ ಹರಿದ ಸಿಹಿ ನದಿ 5
2. ಸುದೀಪ್ "ಬಸವ" 2
4.. ವಾಸ್ತು _ _ _ 3
5. ಜಯಂತಿಗೆ ನೂರು ನೂರು ತರಹದ ಅಗಲಿಕೆ 3
6. ನಾಗರ ಹಾವು ಚಿತ್ರದ ಉಪೇಂದ್ರ ಜೊತೆಗಾರ್ತಿ 3
7. ಬಗ್ಗಡದಲ್ಲಿ ಅರಳಿದ ಪುಷ್ಪಕ್ಕೆ ಕಲ್ಪನಾ ನಾಯಕಿ 7
8. ತ್ರೇತಾ ಯುಗದವನ ನೆನಪಿಸುವ ರವಿಚಂದ್ರನ್ 4
11. ಅನಂತ್ ನಾಗ್ ಹೆಣೆದ ಪ್ರೀತಿಯ ಬಲೆ 4
13. ಮೃದಂಗ ಬಾರಿಸಿದಾಗ ಸಂಭವಿಸಿದ ಸಾವು 3
14. ವಿಷ್ಣುವರ್ಧನ್ ಮಂದಿಯ ಮುಖಂಡ 5
16. ಸಾವಿರ ಮೆಟ್ಟಿಲು ಏರಿದ ನಟಿ 3
17. ರಾಮನೊಂದಿಗೆ ಬಂದ ಆತನ ಸಹೋದರ 3
18. " _ _ ಬಿಡು ಬಿಡು ಮನಸನ್ನು ಕೊಡು ಕೊಡು.... ", 2

ವಿಜೇತರು: ಶಿವಕುಮಾರ್, ಮಂಜುನಾಥನಗರ, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ.



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 510ರ ಉತ್ತರ

ಆ	ಲೆ	ಮ	ನೆ	■	ಬೆಂ	ಕಿ	ಪ	ಟ್ನ	■	ಆ
ರ	■	ಲ್ಲ	■	■	■	ಲಾ	■	■	■	ಯು
ದ	■	■	ಕೌ	■	ಬಿ	ಡಿ	ಸ	ದ	ಬಂ	ಧ
ಗಾ	ಜ	ನೂ	ರ	ಗಂ	ಡು	■	■	ಳ	■	■
ಯ	■	■	ವ	■	ಗ	■	ಅ	ಪ	ರಂ	ಜಿ
■	■	ವೀ	■	■	ಡೆ	■	■	ತಿ	■	■
ರಾ	ಮ	ರ	ಸ	■	ಯ	■	ಈ	■	■	ಉ
■	■	ಧೀ	■	■	ಬೇ	ಡಿ	ಬಂ	ದ	ವ	ಳು
ಬಂ	ಗಾ	ರ	ದ	ಗು	ಡಿ	■	ಧ	■	■	ವ
ಗಾ	■	■	■	ಲಾ	■	■	■	ತೇ	■	ಯೋ
ರಿ	■	ಆ	ಕ್ರ	ಮ	ಣ	■	ಭ	ಜ	ರಂ	ಗಿ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ವಾರದೊಳಗೆ ಬಾಕಿ ಕಾಮಗಾರಿ ಪೂರ್ಣಗೊಳಿಸಿ

ಕೆಡಿಪಿ ಸಭೆಯಲ್ಲಿ ತಾಲೂಕು ಉಸ್ತುವಾರಿ ಅಧಿಕಾರಿ ವೈ.ಎನ್.ಚಂದ್ರಮ್ಮ ಸೂಚನೆ

ಹುಣಸೂರು, ಫೆ.1– ವಾರದೊಳಗೆ ತಾಲೂಕಿನಲ್ಲಿ ಬಾಕಿ ಇರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ತಾಲೂಕು ಉಸ್ತುವಾರಿ ಅಧಿಕಾರಿ ವೈ.ಎನ್.ಚಂದ್ರಮ್ಮ ಅಧಿಕಾರಿಗಳಿಗೆ ಸೂಚಿಸಿದರು.

ಇಲ್ಲಿನ ನಗರಸಭೆ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳು ಮತ್ತು ತಾಲೂಕಿನಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ಮಾತನಾಡಿದ ಅವರು, ಮುಂದಿನ ವಾರ ನಡೆಯುವ ಸಭೆಯೊಳಗೆ ಬಾಕಿ ಉಳಿದಿರುವ ಅಭಿವೃದ್ಧಿ ಕಾಮಗಾರಿಗಳನ್ನು ಮುಗಿಸುವಂತೆ ಸೂಚಿಸಿದರು.

ಸಭೆಯಲ್ಲಿ ಸರ್ಕಾರದ ಉಚಿತ ಯೋಜನೆಗಳಲ್ಲಿ ಒಂದಾದ ಗೃಹ ಯೋಜನೆ ಬಗ್ಗೆ ಚೆಸ್ಕಾಂ ಎಇಇ ಸಿದ್ದಪ್ಪ ಮಾತನಾಡಿ, ತಾಲೂಕಿನ ಹುಣಸೂರು ವಿಭಾಗದಲ್ಲಿ 58,371 ಫಲಾನುಭವಿಗಳ ಪೈಕಿ ಈಗಾಗಲೇ 52,551 ಫಲಾನುಭವಿಗಳು ಹೆಸರು ನೋಂದಾಯಿಸಿಕೊಂಡು ಈ ಯೋಜನೆ ಲಾಭ ಪಡೆಯುತ್ತಿದ್ದಾರೆ. ಉಳಿದವರಿಗೆ ನಾವೇ ಹಾಡಿಗಳಿಗೆ ತೆರಳಿ ನೋಂದಣಿ ಮಾಡಿಸುತ್ತಿದ್ದೇವೆ ಎಂದರು. ಬಿಳಿಕೆರೆ ವಿಭಾಗದ ಎಇಇ ವಿಜಯರತ್ನ ಮಾತನಾಡಿ, ನಮ್ಮ ಬಿಳಿಕೆರೆ ವಿಭಾಗದಲ್ಲಿ 25,395 ಫಲಾನುಭವಿಗಳಿದ್ದು, ಎಲ್ಲರೂ ನೋಂದಾಯಿಸಿಕೊಂಡು ಯೋಜನೆಯ ಲಾಭ ಪಡೆಯುತ್ತಿದ್ದು, ಶೇ.100ರಷ್ಟು ಪ್ರಗತಿ ಸಾಧಿಸಿದ್ದೇವೆ ಎಂದರು.



ಹುಣಸೂರಿನ ನಗರಸಭೆ ಸಭಾಂಗಣದಲ್ಲಿ ಕೆಡಿಪಿ ಸಭೆ ನಡೆಯಿತು.

ಗೃಹಲಕ್ಷ್ಮಿ ಯೋಜನೆ ಬಗ್ಗೆ ಸಿಡಿಪಿಒ ರೇಷ್ಮಾ ಮಾತನಾಡಿ, ಈ ಯೋಜನೆಯಲ್ಲಿ 72,325 ಫಲಾನುಭವಿಗಳು ನೋಂದಣಿಯಾಗಿದ್ದು, ಎಲ್ಲರ ಖಾತೆಗಳಿಗೆ ಹಣ ಜಮೆ ಮಾಡಲಾಗಿದೆ. ಆಧಾರ್ ಲಿಂಕ್ ಆಗಿಲ್ಲದ 822 ಮಂದಿ ಫಲಾನುಭವಿಗಳಿದ್ದಾರೆ ಎಂದರು. ಈ ವೇಳೆ ಮುಂದಿನ ವಾರದೊಳಗೆ ಈ ಬಗ್ಗೆ ಕ್ರಮ ವಹಿಸುವಂತೆ ಉಸ್ತುವಾರಿ ಅಧಿಕಾರಿ ಚಂದ್ರಮ್ಮ ಸೂಚಿಸಿದರು.

ಅನ್ನಭಾಗ್ಯ ಯೋಜನೆಯ ಲಾಭ ಎಲ್ಲರಿಗೂ ಸಿಗುತ್ತಿದೆ. ಅದೇ ರೀತಿ ಯುವ ನಿಧಿ ಯೋಜನೆಯ ಫಲಾನುಭವಿಗಳಿಗೆ ಜಿಲ್ಲಾ ಮಟ್ಟದಲ್ಲೇ ಎಲ್ಲಾ ರೀತಿಯ ಅನುಕೂಲ ಕಲ್ಪಿಸಲಾಗಿದೆ ಎಂದು ಉಸ್ತುವಾರಿ ಅಧಿಕಾರಿ ತಿಳಿಸಿದರು.

ನಗರದ ರಂಗನಾಥ ಬಡಾವಣೆ, ಕಲ್ಕುಣಿಕೆ ಸರ್ಕಲ್, ಸದಾಶಿವಕೊಪ್ಪಲು, ಕೋಟೆ ಸರ್ಕಲ್, ಶಬ್ಬೀರ್ ನಗರ, ಚಿಕ್ಕ ಹುಣಸೂರು, ಮುಸ್ಲಿಂ ಬ್ಲಾಕ್, ಬಾಲಕರ ಜೂನಿಯರ್ ಕಾಲೇಜು ಸೇರಿದಂತೆ 8 ಕಡೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು, ಕೆಆರ್‌ಐಡಿಎಲ್‌ನವರು ಇವುಗಳನ್ನು ನಗರಸಭೆಗೆ ವರ್ಗಾವಣೆ ಮಾಡದೇ ಖಾಸಗಿಯವರು ನಿರ್ವಹಣೆ ಮಾಡಲು ಟೆಂಡರ್ ನೀಡಿದ್ದಾರೆ. ಖಾಸಗಿಯವರ ನಿರ್ವಹಣೆಯಿಂದ ಸಾರ್ವಜನಿಕರಿಗೆ ಕಡಿಮೆ ನೀರು ಬರುತ್ತಿದೆ. ಅಲ್ಲದೇ ಗುಣಮಟ್ಟ ಹೇಗಿದೆ ಎಂಬುದು ತಿಳಿದಿಲ್ಲ. ಇದರಿಂದ ಸಾರ್ವಜನಿಕರಿಗೆ ಅನ್ಯಾಯವಾಗುತ್ತಿದ್ದು, ಈ ಬಗ್ಗೆ ಸಾಕಷ್ಟು ದೂರುಗಳಿವೆ ಎಂದು ಸಭೆಯಲ್ಲಿ ಚರ್ಚೆಯಾದಾಗ ಆಯುಕ್ತೆ ಶರ್ಮಿಳಾ ಈ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದರು. ಸಾರ್ವಜನಿಕ ರಸ್ತೆಗಳಲ್ಲಿ ಶುದ್ಧ ನೀರು ಮಾರಾಟ ನಡೆಯುತ್ತಿದೆ. ಇದಕ್ಕೆ ಅನುಮತಿ ನೀಡಿದವರಾರು. ಇವರು ಪೂರೈಸುವ ನೀರಿನ ಗುಣಮಟ್ಟ ಪರಿಶೀಲನೆ ನಡೆಸುವವರು ಯಾರು? ಎಂದು ಪ್ರಶ್ನಿಸಿದ ಉಸ್ತುವಾರಿ ಅಧಿಕಾರಿ, ನಗರಸಭೆ ವ್ಯಾಪ್ತಿಯಲ್ಲಿ ಪರಿಶೀಲನೆ ನಡೆಸುವಂತೆ ತಿಳಿಸಿದರು. ಅಲ್ಲದೇ ಮುಂಬರುವ ಬೇಸಿಗೆಯಲ್ಲಿ ಕುಡಿಯುವ ನೀರಿನ ಬಗ್ಗೆ ಕಾಳಜಿ ವಹಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈಗಾಗಲೇ ಬೆಳೆನಷ್ಟ ಆದ 6,032 ರೈತರಿಗೆ ತಲಾ 2 ಸಾವಿರ ರೂ. ಪರಿಹಾರ ನೀಡಲಾಗಿದೆ. ತಾಲೂಕಿನಲ್ಲಿ 74,150 ಹಸು, ಎಮ್ಮೆಗಳು, 41,769 ಕುರಿ, ಆಡುಗಳಿವೆ. ಹಸುಗಳಿಗೆ 6 ಕೆಜಿ ಹಸಿ ಮೇವು, 15 ಕೆಜಿ ಒಣಮೇವು, ಆಡು ಕುರಿಗಳಿಗೆ ಅರ್ಧ ಕೆಜಿ ಮೇವು ಬೇಕಾಗಿದೆ. ಈಗಾಗಲೇ ನಮ್ಮಲ್ಲಿ 63,681 ಮೆಟ್ರಿಕ್ ಟನ್ ಮೇವು ಲಭ್ಯವಿದೆ. ರೈತರಿಗೆ 8500 ಮೆಟ್ರಿಕ್ ಟನ್ ಮೇವು ವಿತರಿಸಲಾಗಿದೆ. ಹೀಗಾಗಿ ಈ ಬಾರಿ ಮೇವಿನಕೊರತೆ ಉದ್ಭವಿಸುವುದಿಲ್ಲ ಎಂದು ಪಶು ವೈದ್ಯಾಧಿಕಾರಿ ಸಭೆಗೆ ತಿಳಿಸಿದರು.

ಸಭೆಯಲ್ಲಿ ತಹಸೀಲ್ದಾರ್ ಮಂಜುನಾಥ್, ತಾಪಂ ಇಓ ಮನು, ಆಯುಕ್ತೆ ಶರ್ಮಿಳಾ ಹಾಗೂ ತಾಲೂಕು ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಯಥಾಭವ (ಕ)	2 ಪ್ರದರ್ಶನಗಳು
ಅಯಲಾನ್ (ತ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫೈಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗಸಮುದ್ರ (ಕ)	4 ಪ್ರದರ್ಶನಗಳು
ರಾಜಕಮಲ್	
ವಡಕ್ಕುಪಟ್ಟಿ ರಾಮಸ್ವಾಮಿ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಫೈಟರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಶಂಕರ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ನೋ ಶೋ
ಸ್ಕ್ರೀನ್ 2	ಕ್ರಷ್ (ಕ): ಬೆ.10.30ಕ್ಕೆ, ಬ್ಯಾಚುಲರ್ ಪಾರ್ಟಿ (ಕ): ಮ.1.05ಕ್ಕೆ, ಕಾಟೇರ (ಕ): ಮ.3.55ಕ್ಕೆ, ನೆಕ್ಸ್ಟ್ ಗೋಲ್ ವಿನ್ಸ್ (ಇಂ): ರಾ.7.20ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಹನುಮಾನ್ (ಕ): ಬೆ.9.55ಕ್ಕೆ, ಫೈಟರ್ (ಹಿಂ): ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಫೈಟರ್ (3ಡಿ)(ಹಿಂ): ಬೆ.7.40ಕ್ಕೆ, ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಚುಲರ್ ಪಾರ್ಟಿ (ಕ): ಬೆ.9.20ಕ್ಕೆ, ಸಂ.4ಕ್ಕೆ, 10.20ಕ್ಕೆ, ಫೈಟರ್ (ಹಿಂ): ಮ.12.25ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.9ಕ್ಕೆ, ಹನುಮಾನ್ (ಕ): ಮ.12.05ಕ್ಕೆ, ಕಾಟೇರ (ಕ): ಮ.3.25ಕ್ಕೆ, ಕೇಸ್ ಆಫ್ ಕೊಂಡಾಣ (ಕ): ರಾ.10.30ಕ್ಕೆ. ಮಲೈಕೊಟ್ಟೈ ವಾಲಿಬನ್ (ಮ): ರಾ.7.05ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅನಿಮಲ್ (ಹಿಂ): ಬೆ.8.10ಕ್ಕೆ, ಬೆ.9.15ಕ್ಕೆ, ಬೆ.9.45ಕ್ಕೆ, ಬೆ.10.15ಕ್ಕೆ, ಮ.1.20ಕ್ಕೆ, ಮ.2.20ಕ್ಕೆ, ಸಂ.5.25ಕ್ಕೆ, ಸಂ.5.55ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ರಾ.10ಕ್ಕೆ, ರಾ.10.30ಕ್ಕೆ, ಅನಿಮಲ್ (ಕ): ಮ.1.50ಕ್ಕೆ, ಅನ್ನಪೂರ್ಣಿ (ತ): ಸಂ.4.15ಕ್ಕೆ, ಕಾಥರ್ ದಿ ಕೋರ್ (ಮ): ರಾ.10.15ಕ್ಕೆ, ಪಾರ್ಕಿಂಗ್ (ತ): ಮ.1.25ಕ್ಕೆ, ರಾ.7.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಬೆ.9.20ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.12.35ಕ್ಕೆ, ರಾ.7.05ಕ್ಕೆ, ಶೋಶಿತೆ (ಕ): ಬೆ.11ಕ್ಕೆ, ಟೈಗರ್ 3 (ಹಿಂ): ಮ.3.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬಸವಾದಿ ಶರಣ ಮಾಚಿದೇವರ ಕೊಡುಗೆ ಅಪಾರ: ಆನಂದ್



ಹೆಚ್.ಡಿ.ಕೋಟೆ ತಾಲೂಕು ಕಚೇರಿಯಲ್ಲಿ ಮಡಿವಾಳ ಮಾಚಿದೇವರ ಜಯಂತಿ ನಡೆಯಿತು.

ಹೆಚ್.ಡಿ.ಕೋಟೆ, ಫೆ.1– ಶೋಷಿತ ಸಮುದಾಯಗಳಿಗೆ ಬಸವಾದಿ ಶರಣ ಮಾಚಿದೇವರ ಕೊಡುಗೆ ಅಪಾರ ಎಂದು ಮುಖ್ಯ ಭಾಷಣಕಾರರೂ ಆದ ಶಿಕ್ಷಕ ಆನಂದ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ಮಡಿವಾಳ ಮಾಚಿದೇವರ ಜಯಂತಿಯಲ್ಲಿ ಮಾತನಾಡಿದ ಅವರು, ಮಡಿವಾಳ ಮಾಚಿದೇವರು ಬಸವಣ್ಣನವರ ಅನುಯಾಯಿಯಾಗಿ ಕೆಲವು ನೀತಿ ನಿಯಮ ಅನುಸರಿಸಿ ನಾನು ಶರಣರನ್ನು ಬಿಟ್ಟು ಬೇರೆಯವರ ಬಟ್ಟೆಗಳನ್ನು ತೊಳೆಯುವುದಿಲ್ಲ ಎಂದು ಶರಣ ಸಂಸ್ಕೃತಿಗೆ ಹೊಸ ನಾಂದಿ ಹಾಡಿದರು. ಅಲ್ಲದೇ ಮೋಸ, ಕಳ್ಳತನ, ವ್ಯಭಿಚಾರ, ಕೊಲೆ, ಸುಲಿಗೆ ಮತ್ತು ಸಮಾಜದಲ್ಲಿ ಶಾಂತಿಗೆ ಮಾರಕವಾಗಿರುವ ಯಾವ ವ್ಯಕ್ತಿಯ ಬಟ್ಟೆಗಳನ್ನು ತೊಳೆಯುವುದಿಲ್ಲ ಎಂದು ತೀರ್ಮಾನಿಸಿದ್ದ ಓರ್ವ ಶ್ರೇಷ್ಠ ಕಾಯಕ ಜೀವಿಯಾಗಿದ್ದರು ಎಂದರು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, 12ನೇ ಶತಮಾನದಲ್ಲಿ ದುರ್ಬಲರು, ಶೋಷಿತರು, ಅವಕಾಶ ವಂಚಿತರು, ಅಸ್ಪೃಶ್ಯತೆಯಿಂದ ಬಳಲುತ್ತಿದ್ದ ಜನರಿಗೆ ಸಮಾನತೆಯನ್ನು ತಂದುಕೊಟ್ಟವರು ಮಡಿವಾಳ ಮಾಚಿದೇವರು ಎಂದರು.

ಬಸವಣ್ಣನವರ ಅನುಭವ ಮಂಟಪದಲ್ಲಿ ಶ್ರೀಮಡಿವಾಳ ಮಾಚಿದೇವರು ಶರಣರಾಗಿ ತಮ್ಮ ಕಾಯಕದಲ್ಲಿ ನಿಷ್ಠೆಯಿಂದ ತೊಡಗಿಸಿಕೊಂಡಿದ್ದರು. ಅಂದಿನ ಕಾಲಘಟ್ಟದಲ್ಲಿ ವಚನ ಸಾಹಿತ್ಯಗಳನ್ನು ಸಂರಕ್ಷಣೆ ಮಾಡಿದವರಲ್ಲಿ ಮಡಿವಾಳ ಮಾಚಿದೇವರು ಒಬ್ಬರು. ಹಾಗಾಗಿ ಪ್ರತಿಯೊಬ್ಬರೂ ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಇದೇ ವೇಳೆ ಮಡಿವಾಳ ಸಮಾಜದಿಂದ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ಆದಿವಾಸಿ ಮುಖಂಡ ಮೊತ್ತ ಸೋಮಣ್ಣ ಹಾಗೂ ಮುಖ್ಯ ಭಾಷಣಕಾರ ಶಿಕ್ಷಕ ಆನಂದ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಬಿಇಓ ಮಾರಯ್ಯ, ಮಡಿವಾಳ ಸಮಾಜದ ತಾಲೂಕು ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ಕೆಂಪಣ್ಣ, ಗ್ರಾಪಂ ಉಪಾಧ್ಯಕ್ಷ ಚಂದ್ರು, ತಿಮ್ಮಶೆಟ್ಟಿ, ರಂಗಸ್ವಾಮಿ, ಆಟೋ ರಮೇಶ್, ಯಜಮಾನರಾದ ಬಸವರಾಜು, ಮಹದೇವಣ್ಣ ಕಾಳಶೆಟ್ಟಿ, ಸೋಮಶೆಟ್ಟಿ ಮಹದೇವಶೆಟ್ಟಿ ಕೆಂಪಶೆಟ್ಟಿ ಅರುಣ್, ಆನಂದ್ ಮೂರ್ತಿ, ಶೇಖರ್, ರಾಜಣ್ಣ, ಮರಿಶೆಟ್ಟಿ ಹಾಗೂ ಮಹಿಳಾ ಸಂಘದ ಸದಸ್ಯರಿದ್ದರು.

ಶರಣರ ಚಿಂತನೆಗಳು ವಿಶ್ವ ಸಾಹಿತ್ಯಕ್ಕೆ ವಿಶೇಷ ಕೊಡುಗೆ

ವಿಚಾರವಾದಿ ಕರೋಹಟ್ಟಿ ಕೆ.ಎನ್.ಪ್ರಭುಸ್ವಾಮಿ

ತಿ.ನರಸೀಪುರ, ಫೆ.1– ಜಾತಿ ಎಲ್ಲೇ ಮೀರಿ ಸಮಾಜಕ್ಕೆ ಜಾತ್ಯಾತೀತ ಸಂದೇಶ ಸಾರಿದ ಶರಣರ ಚಿಂತನೆಗಳು ವಿಶ್ವ ಸಾಹಿತ್ಯಕ್ಕೆ ವಿಶೇಷ ಕೊಡುಗೆ ಎಂದು ವಿಚಾರವಾದಿ ಕರೋಹಟ್ಟಿ ಕೆ.ಎನ್.ಪ್ರಭುಸ್ವಾಮಿ ತಿಳಿಸಿದರು.

ತಾಲೂಕು ಆಡಳಿತ ಹಾಗೂ ತಾಲೂಕು ವೀರ ಮಡಿವಾಳರ ಸಂಘದ ಸಂಯುಕ್ತಾಶ್ರಯದಲ್ಲಿ ತಾಲೂಕು ಕಚೇರಿ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ಮಡಿವಾಳ ಮಾಚಿದೇವರ ಜಯಂತಿಯಲ್ಲಿ ಮಾತನಾಡಿದ ಅವರು, ಮಡಿವಾಳ ಮಾಚಿದೇವರು ಶರಣರಲ್ಲಿ ಅಗ್ರಗಣ್ಯರಾಗಿದ್ದು, ಅವರೊಬ್ಬ ಮಹಾನ್ ಪುರುಷ. 12ನೇ ಶತಮಾನದಲ್ಲಿ ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಸಮಾನ ಅವಕಾಶ ಕಲ್ಪಿಸುವ ಜೊತೆಗೆ ಸಮಾಜ ಸುಧಾರಣೆಗಾಗಿ ಶ್ರಮಿಸಿದ ಮಹಾನ್ ನಾಯಕ. ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಹಿಂದುಳಿದ ಹಾಗೂ ಶ್ರಮಿಕ ವರ್ಗದ ಸಮಾನತೆಗೆ ಸಾಮಾಜಿಕ ಕ್ರಾಂತಿ ಮಾಡಿದವರಲ್ಲಿ ಮಾಚಿದೇವರು ಪ್ರಮುಖರು. ಮೇಲು–ಕೀಳು, ಬಡವರು, ಸಾಮಾಜಿಕ ಬಹಿಷ್ಕಾರ ಹಾಗೂ ಶೋಷಣೆಗೆ ಒಳಗಾದವರ ಬಗ್ಗೆ ಚಿಂತಿಸಿ ವ್ಯಕ್ತಿ ವ್ಯಕ್ತಿಗಳ ನಡುವೆ ಇರುವ ಅಂತರ ಹೋಗಲಾಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿದ್ದರು. ಆಧ್ಯಾತ್ಮಿಕ ಪ್ರವೃತ್ತಿ ಮೂಲಕ ಜನರಲ್ಲಿ ಭಕ್ತಿ ಪ್ರಧಾನ ಚಿಂತನೆಗಳನ್ನು ತುಂಬಿದ ಅವರು 3 ಲಕ್ಷಕ್ಕೂ ಹೆಚ್ಚು ವಚನಗಳನ್ನು ಬರೆದು, ಶರಣರ ಸಂಸ್ಕೃತಿಯನ್ನು ತಮ್ಮ ಜೀವನದಲ್ಲಿ ಮೈಗೂಡಿಸಿಕೊಂಡು ಸಮಾಜದ ತಳಮಟ್ಟದ ಜನರನ್ನು ಮೇಲೆತ್ತಲು ಅಹಿಂಸಾ ತತ್ವ ಅಳವಡಿಸಿಕೊಂಡ ಅವರ ವಿಶಾಲತೆ ಸರ್ವರಿಗೂ ಮಾದರಿ ಎಂದರು.



ತಿ.ನರಸೀಪುರದ ತಾಲೂಕು ಕಚೇರಿಯಲ್ಲಿ ನಡೆದ ಮಡಿವಾಳ ಮಾಚಿದೇವರ ಜಯಂತಿಯಲ್ಲಿ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ಮಾತನಾಡಿ, 12ನೇ ಶತಮಾನದ ಬಸವಣ್ಣನವರ ಸಮಕಾಲೀನ ಶರಣರಲ್ಲಿ ಮಡಿವಾಳ ಮಾಚಿದೇವರು ಒಬ್ಬರಾಗಿದ್ದು, ಕಾಯಕ ನಿಷ್ಠೆ, ದಾಸೋಹದಂತಹ ಮೌಲ್ಯಯುತ ಕಾಣಿಕೆ ನೀಡಿದ್ದು, ಇಂತಹ ಶರಣರು, ಮಹಾಪುರುಷರು ಹಾಕಿಕೊಟ್ಟ ಮಾರ್ಗದರ್ಶನ ಹಾಗೂ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಈ ವೇಳೆ ತಾಲೂಕು ವೀರ ಮಡಿವಾಳ ಸಂಘದ ಅಧ್ಯಕ್ಷ ಕುರುಬೂರು ಮಹದೇವಸ್ವಾಮಿ, ಹಿಂದುಳಿದ ವರ್ಗಗಳ ಇಲಾಖೆ ವೆಂಕಟಶೆಟ್ಟಿ, ಕಾರ್ಯದರ್ಶಿ ಆಲಗೂಡು ಬಸವರಾಜು, ಸಿದ್ದರಾಜು, ಗುಂಡಾ ಶೆಟ್ಟಿ, ಮಾದೇವ, ನಿಂಗರಾಜು, ಕೆಂಪಯ್ಯನಹುಂಡಿ ಮಹದೇವಶೆಟ್ಟಿ, ತಲಕಾಡು ಸಿದ್ದಪ್ಪ, ಶಂಕರ, ನಟರಾಜು ಮತ್ತಿತರಿದ್ದರು.

ಸರಗೂರಲ್ಲಿ ಮಡಿವಾಳ ಮಾಚಿದೇವರ ಜಯಂತಿ



ಸರಗೂರು ತಾಲೂಕು ಆಡಳಿತದಿಂದ ಮಡಿವಾಳ ಮಾಚಿದೇವರ ಜಯಂತಿ ಆಚರಿಸಲಾಯಿತು.

ಸರಗೂರು, ಫೆ.1– ರೂಢಿಗತವಾಗಿ ಆಚರಿಸಿಕೊಂಡು ಬಂದ ಕಸುಬುಗಳಲ್ಲಿ ಮಡಿವಾಳರ ಮಡಿ ಕಾಯಕ ಶ್ರೇಷ್ಠ ಎಂದು ತಹಸೀಲ್ದಾರ್ ರುಕಿಯಾಬೇಗಂ ಅಭಿಪ್ರಾಯಪಟ್ಟರು. ಪಟ್ಟಣದ ತಾಲೂಕು ಕಚೇರಿಯಲ್ಲಿ ತಾಲೂಕು ಆಡಳಿತದಿಂದ ನಡೆದ ಮಡಿವಾಳ ಮಾಚಿದೇವರ ಜಯಂತಿಯಲ್ಲಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಶೋಷಣೆ, ಜಾತೀಯತೆ, ಮೇಲು–ಕೀಳು ತಾರತಮ್ಯ, ಅಸ್ಪೃಶ್ಯತೆ, ಮೂಢನಂಬಿಕೆ, ಶಿಕ್ಷಣದಲ್ಲಿ ಅವಕಾಶ ವಂಚನೆ ಹೀಗೆ ಅನೇಕ ಸಾಮಾಜಿಕ ಅಸಮಾನತೆಯಿಂದ ಜನರು ತುಳಿತಕ್ಕೆ ಒಳಗಾಗಿದ್ದರು. ಸರ್ವರಿಗೂ ಸಮಪಾಲು ಸಮಬಾಳು ಒದಗಿಸಲು ಶರಣಾದಿ ಬಸವ ಮಾಚಿ ದೇವರು ಸಾಮಾಜಿಕ ಕ್ರಾಂತಿಯನ್ನೇ ಮಾಡಿದರು. ಶೂದ್ರರಿಗೆ ಶಿಕ್ಷಣ ನಿಷೇಧಿಸಲ್ಪಟ್ಟ ಕಾಲದಲ್ಲಿ ಅಕ್ಷರ ಸೇರಿದಂತೆ ಸಕಲ ಜ್ಞಾನಗಳನ್ನು ಹೇಳಿಕೊಟ್ಟ ಮಹಾನ್ ಗುರು ಮಡಿವಾಳ ಮಾಚಿದೇವರು. ಇವರ ಆದರ್ಶಗಳನ್ನು ಪ್ರತಿಯೊಬ್ಬರೂ ಅನುಸರಿಸಬೇಕು ಎಂದರು.

ತಾಲೂಕು ವೀರ ಮಡಿವಾಳ ಮಾಚಿದೇವರ ಸಂಘದ ಅಧ್ಯಕ್ಷ ಎಚ್.ಬಿ.ಧರಣೇಶ್ ಮಾತನಾಡಿದರು. ಇದೇ ವೇಳೆ ತಹಸೀಲ್ದಾರ್ ರುಕಿಯಾ ಬೇಗಂ, ಪಪಂ ಅಧ್ಯಕ್ಷೆ ರಾಧಿಕಾ, ತಾಲೂಕು ಕಸಪಾ ಅಧ್ಯಕ್ಷ ಎಂ. ಕೆಂಡಗಣ್ಣಸ್ವಾಮಿ, ಗಣ್ಯರು ವೀರಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ತಾಲೂಕು ವೀರ ಮಡಿವಾಳ ಮಾಚಿದೇವರ ಸಮಾಜದ ಕಾರ್ಯದರ್ಶಿ ವೆಂಕಟೇಶ್, ಉಪಾಧ್ಯಕ್ಷ ಸುರೇಶ್ ಶೆಟ್ಟಿ, ಗೌರವಾಧ್ಯಕ್ಷ ಮಹದೇವಶೆಟ್ಟಿ, ಖಜಾಂಚಿ ನಂಜುಂಡಶೆಟ್ಟಿ, ಸಂಘಟನಾ ಕಾರ್ಯದರ್ಶಿ ಶಿವಣ್ಣಶೆಟ್ಟಿ, ಸಹ ಕಾರ್ಯ ದರ್ಶಿ ಚಿಕ್ಕಹೊನ್ನಶೆಟ್ಟಿ, ಸಮಾಜದ ಮುಖಂಡರಾದ ಟೈಲರ್ ಮಹದೇವ, ಕೂಲ್ಯ ನಾಗೇಶ್, ದೇವಶೆಟ್ಟಿ, ಮಹಿಳಾ ಸದಸ್ಯರಾದ ಮಂಜುಳ, ಗೌರಮ್ಮ, ಗ್ರೇಡ್–2 ತಹಸೀಲ್ದಾರ್ ಪರಶಿವಮೂರ್ತಿ, ಡಿ.ಟಿ.ಸುನೀಲ್, ರಾಜು, ಶಿರಸ್ತೇದಾರ್ ಗುರುರಾಜ್, ಹರೀಶ್, ಆರ್‌ಐ ಮುಜೀಫ್ ಇನ್ನಿತರರಿದ್ದರು.

ಮಡಿವಾಳ ಮಾಚಿದೇವರಿಂದ ವಚನ ಸಾಹಿತ್ಯ ಸಂರಕ್ಷಣೆ

ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು

ನಂಜನಗೂಡು, ಫೆ.1– ಮಡಿವಾಳ ಮಾಚಿದೇವರು ವಚನ ಸಾಹಿತ್ಯ ಸಂರಕ್ಷಣೆ ಮಾಡಿದ್ದರಿಂದ ವಚನ ಸಾಹಿತ್ಯ ಉಳಿಯಲು ಸಾಧ್ಯವಾಗಿದೆ ಎಂದು ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ತಿಳಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಮಡಿವಾಳ ಮಾಚಿದೇವರ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಸಾಮಾಜಿಕ ಅಸಮಾನತೆಯಿಂದ ಕೂಡಿದ್ದ ಸಮಾಜದಲ್ಲಿ ಬಸವಾದಿ ಶರಣರು ಸಮ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿದರು. ಅಂತಹ ಶರಣರ ಕೊಡುಗೆಗಳನ್ನು ಅವರ ಜಯಂತಿಗಳಂದು ಸ್ಮರಿಸಲು ಸಾಧ್ಯವಾಗಿದೆ. ಬಸವಾದಿ ಶರಣ ತತ್ವಾದರ್ಶಗಳನ್ನು ಬರೀ ಅವರ ಜಯಂತಿಗೆ ಸೀಮಿತಗೊಳಿಸದೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ತಾಲೂಕು ಮಡಿವಾಳ ಸಂಘದ ಅಧ್ಯಕ್ಷ ಪ್ರಸನ್ನಕುಮಾರ್ ಮಾತನಾಡಿ, ಮಡಿವಾಳ ಸಮಾಜ ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದ ಸಮಾಜವಾಗಿದ್ದು ಸರ್ಕಾರ ಸಮುದಾಯವನ್ನು ಎಸ್ಸಿ ಪಟ್ಟಿಗೆ ಸೇರಿಸುವ ಮೂಲಕ ಸಮುದಾಯದ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಬೇಕಿದೆ ಎಂದರು.



ನಂಜನಗೂಡಿನ ತಾಲೂಕು ಕಚೇರಿಯಲ್ಲಿ ಮಡಿವಾಳ ಮಾಚಿದೇವ ಜಯಂತಿ ನಡೆಯಿತು.

ಕಾರ್ಯದರ್ಶಿ ಬಸವರಾಜು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ 2017ರಲ್ಲಿ ಮಡಿವಾಳ ಮಾಚಿದೇವರ ಜಯಂತಿ ಜಾರಿಗೊಳಿಸಿ ಸಮುದಾಯಕ್ಕೆ ನ್ಯಾಯ ಒದಗಿಸಿದ್ದಾರೆ. ಸಮುದಾಯವು ಯಾವುದೇ ಸವಲತ್ತು ಪಡೆಯಬೇಕಾದರೆ ಮೊದಲು ಶಿಕ್ಷಣ ಪಡೆದು ಸಂಘಟಿತರಾಗಬೇಕಿದೆ. ಈ ನಿಟ್ಟಿನಲ್ಲಿ ಎಲ್ಲರೂ ನಿಮ್ಮ ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀಡಬೇಕು ಎಂದರು.

ಸಮಾರಂಭದಲ್ಲಿ ಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಈ ವೇಳೆ ಮುಖಂಡರಾದ ಕೆ.ಎಂ.ಬಸವರಾಜು, ಸೋಮಣ್ಣ, ಬಾಲಚಂದ್ರ ಶಿವಣ್ಣ, ಮಹೇಶ್, ಮಹದೇವಸ್ವಾಮಿ, ಶಿವಕುಮಾರ್, ನಾಗರಾಜ, ಮಹದೇವಣ್ಣ, ರವಿಕುಮಾರ್, ಪ್ರಭು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಹೆಡಿಯಾಲ ಪಿಎಸಿಎಸ್‌ಗೆ ಮಂಜುನಾಥ್ ಅಧ್ಯಕ್ಷ



ಹೆಡಿಯಾಲ ಪಿಎಸಿಎಸ್ ಅಧ್ಯಕ್ಷರಾಗಿ ಎಂ.ಕೆ.ಮಂಜುನಾಥ್ ಆಯ್ಕೆಯಾದರು.

ಮಲ್ಕುಂಡಿ, ಫೆ.1– ನಂಜನಗೂಡು ತಾಲೂಕಿನ ಹೆಡಿಯಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಕೆ.ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಬಿ.ಎಸ್.ಮಹದೇವಪ್ಪ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಗುರುವಾರ ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಮಂಜುನಾಥ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪ್ರಸಾದ್ ಘೋಷಿಸಿದರು.

ನೂತನ ಅಧ್ಯಕ್ಷ ಮಂಜುನಾಥ್ ಮಾತನಾಡಿ, ಸಂಘ ಹೆಚ್ಚು ಲಾಭ ಗಳಿಸಲು ರೈತರು ಪಡೆದಿರುವ ಸಾಲವನ್ನು ಸಕಾಲಕ್ಕೆ ಮರು ಪಾವತಿಸಬೇಕು. ಮುಂದಿನ ದಿನಗಳಲ್ಲಿ ಸಂಘದ ಅಭಿವೃದ್ಧಿಗೆ ಶ್ರಮಿಸುವ ಜೊತೆಗೆ ಸರ್ಕಾರದ ಸೌಲಭ್ಯಗಳನ್ನು ಪ್ರತಿಯೊಬ್ಬ ರೈತನಿಗೂ ತಲುಪಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಾಗುವುದು ಎಂದರು.

ಈ ವೇಳೆ ನಿರ್ದೇಶಕರಾದ ಅನ್ವರ್, ಶಿವಯ್ಯ, ರಂಗನಾಯಕ, ಶಿವಮ್ಮ, ಬಸವರಾಜಪ್ಪ, ಕಂಪಲಮ್ಮ, ಗ್ರಾಪಂ ಉಪಾಧ್ಯಕ್ಷ ನಾಗೇಶ್, ಸದಸ್ಯ ಗೋವಿಂದರಾಜು, ಮುಖಂಡರಾದ ಸುಬ್ರಹ್ಮಣ್ಯ, ಗುರುಮಲ್ಲಪ್ಪ, ಮಹೇಂದ್ರ, ಪಟೇಲ್ ಮಹದೇವಪ್ಪ, ಚಿನ್ನಸ್ವಾಮಿ ನಾಯಕ, ರಾಚಯ್ಯ, ಸಾದಿಕ್, ಕಾಳಸ್ವಾಮಿ, ಗುರುಸಿದ್ದಪ್ಪ, ಶಂಭುಲಿಂಗಪ್ಪ, ಇಓ ಶಿವಕುಮಾರ್ ಸೇರಿದಂತೆ ಇತರರಿದ್ದರು.

ವಿದ್ಯುತ್ ಸ್ಪರ್ಶಿಸಿ ಕಾರ್ಮಿಕ ಸಾವು

ನಂಜನಗೂಡು, ಫೆ.1– ವಿದ್ಯುತ್ ಸ್ಪರ್ಶಿಸಿ ಕಾರ್ಮಿಕ ಸಾವನ್ನಪ್ಪಿರುವ ಘಟನೆ ತಾಲೂಕಿನ ತಾಂಡ್ಯ ಕೈಗಾರಿಕಾ ಪ್ರದೇಶದ ರಿಷಿ ಕಾರ್ಖಾನೆ ಹಿಂಭಾಗದಲ್ಲಿರುವ ಕಾರ್ಮಿಕರ ವಸತಿ ಗೃಹದ ಬಳಿ ನಡೆದಿದೆ.

ಪಶ್ಚಿಮ ಬಂಗಾಳ ಮೂಲದ ಸುಜನ್ ರಾವ್ ಎಂಬುವರ ಪುತ್ರ ಹೇಮಂತ್ (23) ಸಾವನ್ನಪ್ಪಿದವರು. ಈತ ಬುಧವಾರ ರಾತ್ರಿ ಕಾರ್ಮಿಕರ ವಸತಿ ಗೃಹದ ಬಳಿ ವಿದ್ಯುತ್ ಕಂಬ ಒರಗಿಕೊಂಡು ಮೊಬೈಲ್‌ನಲ್ಲಿ ಮಾತನಾಡುತ್ತಿದ್ದ ವೇಳೆ ವಿದ್ಯುತ್ ಸ್ಪರ್ಶವಾಗಿ ಅಸ್ವಸ್ಥನಾಗಿದ್ದ ಎನ್ನಲಾಗಿದೆ. ತಕ್ಷಣ ಹೇಮಂತ್‌ನನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾನೆ. ಶವವನ್ನು ಕೆ.ಆರ್.ಆಸ್ಪತ್ರೆ ಶವಾಗಾರದಲ್ಲಿ ಇರಿಸಲಾಗಿದೆ. ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

ತಿ.ನರಸೀಪುರದಲ್ಲಿ ಸಿದ್ಧಗಂಗಾಶ್ರೀ, ಸಿದ್ದೇಶ್ವರಶ್ರೀಗಳ ಸ್ಮರಣೋತ್ಸವ

ತಿ.ನರಸೀಪುರ, ಫೆ.1– ಸಿದ್ಧಗಂಗಾ ಶ್ರೀಶಿವಕುಮಾರ ಸ್ವಾಮೀಜಿಗಳು ದೂರ ದೃಷ್ಟಿಯುಳ್ಳ ಪರಮ ಜ್ಞಾನಿಗಳಾಗಿ ಲಕ್ಷಾಂತರ ವಿದ್ಯಾರ್ಥಿಗಳ ಬಾಳಿಗೆ ಬೆಳಕಾದರು. ಅನ್ನ, ಅಕ್ಷರ, ಆರೋಗ್ಯ ದಾಸೋಹದ ಮೂಲಕ ಸಿದ್ಧಗಂಗೆಯ ಸಿದ್ಧ ಪುರುಷರಾದರು ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರ ಹುಂಡಿ ಸಿದ್ದಪ್ಪ ಬಣ್ಣಿಸಿದರು.

ಪಟ್ಟಣದ ಶ್ರೀಗುರು ಚನ್ನಮಲ್ಲಿಕಾರ್ಜುನ ಶಾಲಾವರಣದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಹಾಗೂ ತಾಲೂಕು ಶರಣ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ನಡೆದ ಅನ್ನ ದಾಸೋಹಿ ಶಿವಕುಮಾರಸ್ವಾಮೀಜಿ ಹಾಗೂ ಜ್ಞಾನ ದಾಸೋಹಿ ಶ್ರೀಸಿದ್ದೇಶ್ವರ ಶಿವಯೋಗಿಗಳ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಠದ ಜಮೀನಿನಲ್ಲಿ ರಾಗಿ ಕದ್ದ ಕಳ್ಳನನ್ನು ನಿನಗೆ ಸರಿಯಾಗಿ ಕಳ್ಳತನ ಮಾಡಲು ಬರುವುದಿಲ್ಲ. ಹಸಿವಿಗಾಗಿ ಮಾಡಿದ ಕಳ್ಳತನ ಕಳ್ಳತನವೇ ಅಲ್ಲ ಎಂದು ಆತನನ್ನು ಕ್ಷಮಿಸಿ ಮಠದಲ್ಲಿಯೇ ಆತನಿಗೆ ಉದ್ಯೋಗ ನೀಡಿದ ಮಹಾತ್ಮ ಎಂದರು.



ತಿ.ನರಸೀಪುರದ ಶ್ರೀಗುರು ಚನ್ನಮಲ್ಲಿಕಾರ್ಜುನ ಶಾಲಾವರಣದಲ್ಲಿ ಶಿವಕುಮಾರ ಸ್ವಾಮೀಜಿ ಮತ್ತು ಸಿದ್ದೇಶ್ವರ ಶಿವಯೋಗಿಗಳ ಸ್ಮರಣೋತ್ಸವ ನಡೆಯಿತು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜನಾಧಿಕಾರಿ ಜಿ.ಎಲ್. ತ್ರಿಪುರಾಂತಕ ಮಾತನಾಡಿ, ಸಿದ್ದೇಶ್ವರ ಶ್ರೀಗಳು ಜೇಬಿಲ್ಲದ ಜಂಗಮ, ನಿರಾಭಾರಿ ಚರಮೂರ್ತಿ, ಪ್ರಕೃತಿಯ ಒಂದು ಅಂಶವಾಗಿ ಸುಂದರ ಬದುಕನ್ನು ಕಟ್ಟಿಕೊಂಡವರು. ಜನರಿಗೆ ಪ್ರವಚನದ ಮೂಲಕ ಜ್ಞಾನ ದಾಸೋಹ ಉಣಬಡಿಸಿದವರು, ಗೋನೆ ಅಲುಗುವನ್ನು ಕಂಡು ಭೂಮಾತೆಯ ಸೊಬಗನ್ನು ಬಿತ್ತರಿಸುತ್ತಿದ್ದ ಮಹಿಮ ಪುರುಷ. ಮೊದಲ ಬಾರಿ ಇವರನ್ನು ದಕ್ಷಿಣ ಭಾಗಕ್ಕೆ ಪರಿಚಯಿಸಿ ಜ್ಞಾನದ ಸಸಿ ನೆಟ್ಟವರು ಚಿಲುಕವಾಡಿಯ ಬಸವಣ್ಣ. ನಂತರ ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಪ್ರವಚನಕಾರರಾಗಿ ಗುರುತಿಸಿ ಆಲದ ಮರದಂತೆ ಹೆಮ್ಮರವಾಗಿ ಬೆಳೆಸಿದರು. ಬೆಟ್ಟ, ಗುಡ್ಡ, ನದಿ, ವನ, ಪರ್ವತವೆಂದರೆ ಅವರಿಗೆ ಆಗುತ್ತಿದ್ದ ಆನಂದ ಅಷ್ಟಿಷ್ಟಲ್ಲ ಎಂದರು.

ಕಾರ್ಯಕ್ರಮದಲ್ಲಿ ಶಿವಕುಮಾರ ಸ್ವಾಮೀಜಿ, ಸಿದ್ದೇಶ್ವರ ಸ್ವಾಮೀಜಿ ಭಾವಚಿತ್ರಗಳಿಗೆ ವಾಟಾಳು ಸೂರ್ಯ ಸಿಂಹಾಸನ ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಮಾಡ್ರಳ್ಳಿ ಪಟ್ಟದ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ, ಗೌರಿಶಂಕರಸ್ವಾಮೀಜಿ ಹಾಗೂ ಚುಂಚನಹಳ್ಳಿ ಚನ್ನಬಸವ ಸ್ವಾಮೀಜಿ ಪುಷ್ಪ ನಮನ ಸಲ್ಲಿಸಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ಕೆಇಬಿ ಸಿದ್ದಲಿಂಗಸ್ವಾಮಿ, ಎಸ್‌ಎಂಆರ್ ಗ್ರೂಪ್ಸ್‌ನ ಪ್ರಕಾಶ, ಪಟೇಲ್ ಪರಮೇಶ, ಅಖಿಲ ಭಾರತ ವೀರಶೈವ ಮಹಾಸಭಾ ಯುವ ಅಧ್ಯಕ್ಷ ವಿಜಯ ಕುಮಾರ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ತೋಂಟೇಶ, ಮಾಡ್ರಳ್ಳಿ ಶಿವಮೂರ್ತಿ, ಸುಗಂಧರಾಜು, ಟಿ.ಎಸ್. ಶಾಂತರಾಜು, ನಾಗೇಶ, ಮೋಹನ, ಬೃಂದಾ ಆಸ್ಪತ್ರೆ ಗುರು, ಡಾ.ಪ್ರದೀಪ, ಗೌಡರಪ್ರಭು, ನಾಗರಾಜು, ಶಿವಕುಮಾರ, ರಾಜಶೇಖರ, ವಕೀಲ ಶಿವಣ್ಣ, ಜ್ಞಾನೇಂದ್ರ ಮೂರ್ತಿ, ಕಾರು ಮಲ್ಲಪ್ಪ ಮಂಜು, ವಿಜಯಣ್ಣ ಕುಮಾರ್, ನಾಗೇಂದ್ರ ಸ್ವಾಮಿ, ದಕ್ಷ, ಗಿರೀಶ, ಆಡಿಟರ್ ಮಂಜುನಾಥ್, ಸೋಸಲೆ ರಾಜಶೇಖರ, ಮೂರ್ತಿ, ಕುಮಾರಸ್ವಾಮಿ, ಸಾಲೂರು ಸ್ವಾಮಿ, ಕಸಾಪ ನಿಕಟಪೂರ್ವ ಅಧ್ಯಕ್ಷ ಎಂ.ರಾಜು, ಷಣ್ಮುಖಸ್ವಾಮಿ, ಹಾಜರಿದ್ದರು.

ನಾಳೆ ಕಾರ್ಮಿಕರ ಸಂಘ ಉದ್ಘಾಟನೆ

ಸರಗೂರು, ಫೆ.1– ಸೋಮೇಶ್ವರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ ಫೆ.3ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣದ ಶಿವರಾತ್ರೀಶ್ವರ ಶಿವಾನುಭವ ಮಂದಿರದಲ್ಲಿ ಉದ್ಘಾಟನೆಗೊಳ್ಳಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಹೆಚ್.ರಮೇಶ್ ತಿಳಿಸಿದ್ದಾರೆ. ಶಾಸಕ ಅನಿಲ್ ಚಿಕ್ಕಮಾದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಪಪಂ ಅಧ್ಯಕ್ಷೆ ರಾಧಿಕಾ ಸಂಘವನ್ನು ಉದ್ಘಾಟಿಸಲಿದ್ದಾರೆ. ಜಿಲ್ಲಾ ಸಹಾಯಕ ಕಾರ್ಮಿಕಾ ಇಲಾಖೆ ಆಯುಕ್ತೆ ನಾಜಿಯಾ ಸುಲ್ತಾನಾ, ಜಿಲ್ಲಾ ಕಾರ್ಮಿಕ ಅಧಿಕಾರಿ ರಾಜೇಶ್ ಕೆ.ಜಾಧವ್, ತಹಸೀಲ್ದಾರ್ ರುಕಿಯಾ ಬೇಗಂ ಪಪಂ ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾ, ಉಪಾಧ್ಯಕ್ಷ ವಿನಯ್ ಪ್ರಸಾದ್ ಹಾಗೂ ಜಿಪಂ ಮಾಜಿ ಸದಸ್ಯ ಪಿ.ರವಿ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಲೀಲಾವತಿ
ಅಧ್ಯಕ್ಷರು, ಧನಗಳ್ಳಿ
ಗ್ರಾಮ ಪಂಚಾಯಿತಿ
ಸವಿತಾ
ಉಪಾಧ್ಯಕ್ಷರು, ಧನಗಳ್ಳಿ
ಗ್ರಾಮ ಪಂಚಾಯಿತಿ
ಹುಣಸೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಯುವ ಶಾಸಕರಾದ
ಸನ್ಮಾನ್ಯ ಶ್ರೀ ಜಿ.ಡಿ.ಹರೀಶ್‌ಗೌಡ
ಎ.ಪಿ.ಎಂ.ಸಿ. ಮಾಜಿ ಸದಸ್ಯರು ಮತ್ತು ಶ್ರೀನಿಧಿ ಸ್ಟೀಲ್ಸ್ ಮತ್ತು
ಶ್ರೀನಿಧಿ ಡೆವಲಪರ್ಸ್ ಮಾಲೀಕರಾದ
ಕೋಟೆಹುಂಡಿ ಶ್ರೀ ಮಹದೇವ್
ಜನ್ಮದಿನದ ಶುಭಾಶಯಗಳು


ಹುಣಸೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಯುವ ಶಾಸಕರಾದ
ಸನ್ಮಾನ್ಯ ಶ್ರೀ ಜಿ.ಡಿ.ಹರೀಶ್‌ಗೌಡ
ಎ.ಪಿ.ಎಂ.ಸಿ. ಮಾಜಿ ಸದಸ್ಯರು ಮತ್ತು ಶ್ರೀನಿಧಿ ಸ್ಟೀಲ್ಸ್ ಮತ್ತು
ಶ್ರೀನಿಧಿ ಡೆವಲಪರ್ಸ್ ಮಾಲೀಕರಾದ
ಕೋಟೆಹುಂಡಿ ಶ್ರೀ ಮಹದೇವ್
ಲೀಲಾವತಿ
ಅಧ್ಯಕ್ಷರು, ಧನಗಳ್ಳಿ
ಗ್ರಾಮ ಪಂಚಾಯಿತಿ
ಸವಿತಾ
ಉಪಾಧ್ಯಕ್ಷರು, ಧನಗಳ್ಳಿ
ಗ್ರಾಮ ಪಂಚಾಯಿತಿ
ಜನ್ಮದಿನದ ಶುಭಾಶಯಗಳು
ಶುಭಕೋರುವವರು : ಮಹದೇವು ಸ್ನೇಹ ಬಳಗ ಡಿ.ಸಾಲುಂಡಿ


ಹುಣಸೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಯುವ ಶಾಸಕರಾದ
ಸನ್ಮಾನ್ಯ ಶ್ರೀ ಜಿ.ಡಿ.ಹರೀಶ್‌ಗೌಡ
ಎ.ಪಿ.ಎಂ.ಸಿ. ಮಾಜಿ ಸದಸ್ಯರು ಮತ್ತು ಶ್ರೀನಿಧಿ ಸ್ಟೀಲ್ಸ್ ಮತ್ತು ಶ್ರೀನಿಧಿ ಡೆವಲಪರ್ಸ್
ಮಾಲೀಕರಾದ ಕೋಟೆಹುಂಡಿ ಶ್ರೀ ಮಹದೇವ್
ಸುರೇಶ ಸದಸ್ಯರು
ಗ್ರಾ.ಪಂ. ಕೋಟೆಹುಂಡಿ
ರವಿ
ಸಿವಿಲ್ ಕಂಟ್ರಾಕ್ಟರ್
ಜನ್ಮದಿನದ ಶುಭಾಶಯಗಳು
ಶುಭಕೋರುವವರು : ರವಿ ಮತ್ತು ಕೋಟೆಹುಂಡಿ ಮಹದೇವು ಸ್ನೇಹ ಬಳಗ